ಉಪನ್ಯಾಸ
ಂಥಮಾಲೆ

೩೨೯

ಬೀದರ ಜಿಲ್ಲಾ ಸಾಂಸ್ಕೃತಿಕ ಅಧ್ಯಯನ

ಬಸವರಾಜ ಸಬರದ

ಮಾರ್ಚ, ೧೯೮೨

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಉಪನ್ಯಾಸ ಗ್ರಂಥಮಾಲೆ

೩೨೯

ಬೀದರ ಜಿಲ್ಲಾ ಸಾಂಸ್ಕೃತಿಕ ಅಧ್ಯಯನ

ಶ್ರೀ ಬಸವರಾಜ ಸಬರದ

ಎಂ.ಎ., ಡಿಪ್.ಎಪಿ.

ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಮಾರ್ಚ, ೧೯೮೨

ಪ್ರಕಾಶಕರು :

ಸಿ. ಎಸ್. ಕಣವಿ

ನಿರ್ದೇಶಕರು,
ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೫೮೦ ೦೦೩

ಪ್ರಥಮ ಮುದ್ರಣ : ೫,೦೦೦ ಪ್ರತಿಗಳು
ಮಾರ್ಚ್, ೧೯೮೨

ಬೆಲೆ : ೫೦ ಪೈಸೆ

ಮುದ್ರಕರು :

ಎಂ. ಎಸ್. ಹಿರಿಯಣ್ಣಯ್ಯ

ನಿರ್ದೇಶಕರು,
ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ
ಧಾರವಾಡ–೫೮೦ ೦೦೩

ಮುನ್ನುಡಿ

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ಪ್ರಸಾರಾಂಗದ ಮುಖಾಂತರ ಕೈಕೊಂಡು ನಡೆಸುತ್ತಿರುವ ಜ್ಞಾನಪ್ರಸಾರದ ಯೋಜನೆಗಳಲ್ಲಿ ಈ 'ಉಪನ್ಯಾಸ ಗ್ರಂಥಮಾಲೆ' ಅತ್ಯಂತ ಮುಖ್ಯವೂ, ಜನಪ್ರಿಯವೂ ಆಗಿರುವುದು ಹೆಮ್ಮೆಯ ಮಾತಾಗಿದೆ. ವಿಶ್ವವಿದ್ಯಾಲಯದ ಆಡಳಿತ ಕ್ಷೇತ್ರದಲ್ಲಿರುವ ನಾಲ್ಕು ಜಿಲ್ಲೆಗಳಲ್ಲಿಯೂ ಉಪನ್ಯಾಸ ಶಿಬಿರಗಳನ್ನು ಏರ್ಪಡಿಸಲಾಗುತ್ತಿದ್ದು, ವಿಶ್ವವಿದ್ಯಾಲಯದ ಮತ್ತು ಇದಕ್ಕೆ ಸೇರಿದ ಕಾಲೇಜುಗಳ ಪ್ರಾಧ್ಯಾಪಕರು ಸಾಹಿತ್ಯ, ವಿಜ್ಞಾನ, ಸಾಮಾಜಿಕ ಶಾಸ್ತ್ರ ಮೊದಲಾದ ಶಾಖೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಆಯ್ದುಕೊಂಡು ಶಾಸ್ತ್ರಸಮ್ಮತವಾದ ಸರಣಿಯಲ್ಲಿ, ಜನಸಾಮಾನ್ಯರಿಗೆ ತಿಳಿಯುವ ಶೈಲಿಯಲ್ಲಿ ಈ ಶಿಬಿರಗಳಲ್ಲಿ ಉಪನ್ಯಾಸಗಳನ್ನು ಕೊಡುತ್ತಾರೆ. ವಿಶ್ವವಿದ್ಯಾಲಯದ ಜ್ಞಾನಭಂಡಾರದ ಅಲ್ಪಾಂಶವನ್ನಾದರೂ ಮಹಾಜನರ ಮನೆಬಾಗಿಲಿಗೆ ಒಯ್ದು ಮುಟ್ಟಿಸಬೇಕೆಂದು ಮಾಡಿದ ಈ ಪ್ರಯತ್ನಕ್ಕೆ ನಮ್ಮ ನಿರೀಕ್ಷೆಗೆ ಮೀರಿದ ಮೆಚ್ಚಿಕೆಯೂ, ಪ್ರೋತ್ಸಾಹವೂ ದೊರೆಯುತ್ತಿವೆ. ಜನರು ತಾವಾಗಿಯೇ ಮುಂದೆ ಬಂದು ತಮ್ಮ ತಮ್ಮ ಊರುಗಳಲ್ಲಿ ಈ ಉಪನ್ಯಾಸಗಳನ್ನು ಏರ್ಪಡಿಸಲು ವಿಶ್ವವಿದ್ಯಾಲಯಕ್ಕೆ ಬರೆದು ಬಿನ್ನವಿಸಿಕೊಳ್ಳುತ್ತಿರುವುದು ನಿಜವಾಗಿಯೂ ಸಂತೋಷದ ಸಂಗತಿಯಾಗಿದೆ.

ಈ ಜ್ಞಾನಪ್ರಸಾರ ಕಾರ್ಯದಲ್ಲಿ ಭಾಗವಹಿಸುವದರಿಂದ ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ ಆಯಾ

ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕ ಒದಗುವದಲ್ಲದೆ ಎಂತಹ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗೂ ಅದನ್ನು ಸುಲಭ ಶೈಲಿಯಲ್ಲಿ ಬರವಣಿಗೆಯಲ್ಲಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಮನಮುಟ್ಟಿ ಸಹಕರಿಸುತ್ತಿರುವುದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೇ ೩೨೮ ಪುಸ್ತಿಕೆಗಳು ಪ್ರಕಟವಾಗಿವೆ. ಅವು ಅಚ್ಚಾಗಿ ಹೊರಬಂದೊಡನೆ ಅವುಗಳ ಸಾವಿರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಕಗಳು ನಾಲ್ಕು-ಐದು ಮುದ್ರಣಗಳನ್ನು ಕಂಡಿರುವುದು ಈ ಮಾಲೆಯ ಉಪಯುಕ್ತತೆಯನ್ನೂ, ಜನಪ್ರಿಯತೆಯನ್ನೂ ವ್ಯಕ್ತಗೊಳಿಸುತ್ತದೆ. ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋಜನ ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖ ಪ್ರಗತಿಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಡಿ. ಎಂ. ನಂಜುಂಡಪ್ಪ
ಕುಲಪತಿಗಳು

ಕೃತಜ್ಞತೆಗಳು

೧೯೮೦ನೇ ಫೆಬ್ರುವರಿ ೨೦ ಹಾಗೂ ೨೧ನೆಯ ದಿನಾಂಕ ಗಳಂದು ಬೀದರ ಜಿಲ್ಲೆಯ ಔರಾದದಲ್ಲಿ ನಡೆದ ೨೮೪ ನೆಯ ಉಪನ್ಯಾಸ ಶಿಬಿರದಲ್ಲಿ ಈ ವಿಷಯದ ಬಗೆಗೆ ಉಪನ್ಯಾಸ ನೀಡಲು ಅವಕಾಶವನ್ನೊದಗಿಸಿಕೊಟ್ಟ ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗದ ನಿರ್ದೇಶಕರಾದ ಶ್ರೀ ಚೆನ್ನವೀರ ಕಣವಿಯವರಿಗೆ, ಉಪ ನಿರ್ದೇಶಕರಾದ ಶ್ರೀ ಎಸ್. ಬಿ. ನಾಯಕ ಅವರಿಗೆ ಸಹಾಯಕ ನಿರ್ದೇಶಕರಾದ ಶ್ರೀ ಲಿಂಗರಾಜ ಗುಡ್ಡೀನ ಅವರಿಗೆ, ಈ ಪುಸ್ತಕ ಬರೆಯುವಲ್ಲಿ ಸಲಹೆಗಳನ್ನಿತ್ತ ಡಾ. ಎಲ್. ಆರ್. ಕುಲಕರ್ಣಿಯವರಿಗೆ. ಸಲಹೆಗಳ ಜತೆಗೆ ಇದರಲ್ಲಿನ ಫೋಟೋಗಳನ್ನೊದಗಿಸಿದ ಡಾ. ವ್ಹಿ. ಎಸ್. ಕುಲಕರ್ಣಿ ಹಾಗೂ ಬೀದರ ಜಿಲ್ಲಾ ವಾರ್ತಾಧಿಕಾರಿಗಳಿಗೆ, ಸಹಕರಿಸಿದ ನನ್ನ ವಿಜಯಶ್ರೀ ಇವರಿಗೆಲ್ಲ ನನ್ನ ಕೃತಜ್ಞತೆಗಳು.

ಅಮರೇಶ್ವರ ಕಲೇಜು,	**ಬಸವರಾಜ ಸಬರದ**
ಔರಾದ	ಪ್ರಿನ್ಸಿಪಾಲ
೧೪-೬-೧೯೮೧	

ಪರಿವಿಡಿ

ಪೀಠಿಕೆ

ಕಲ್ಯಾಣವೆಂಬ ಪ್ರಣತೆಯಲ್ಲಿ ಭಕ್ತಿರಸವೆಂಬ ತೈಲವನೆಱೆದು
ಆಚಾರವೆಂಬ ಬತ್ತಿಯಲ್ಲಿ ಬಸವಣ್ಣನೆಂಬ ಜ್ಯೋತಿಯ ಮುಟ್ಟಿಸಲು
ತೊಳಗಿ ಬೆಳಗುತ್ತಿದ್ದಿತಯ್ಯಾ ಶಿವನ ಪ್ರತಾಪ.
ಆ ಬೆಳಗಿನೊಳಗೆ ಒಪ್ಪುತ್ತಿರ್ದರಯ್ಯಾ ಅಸಂಖ್ಯಾತ ಭಕ್ತಗಣಂಗಳು
ಶಿವಭಕ್ತನಿರ್ದ ಕ್ಷೇತ್ರ ಅವಿಮುಕ್ತಯೆಂಬುದು ಹುಸಿಯೆ ?
ಶಿವಭಕ್ತನಿರ್ದ ದೇಶ ಪಾವನವೆಂಬುದು ಹುಸಿಯೆ?
ಗುಹೇಶ್ವರಲಿಂಗದಲ್ಲಿ ಎನ್ನ ಪರಮಾರಾಧ್ಯರು
ಸಂಗನಬಸವಣ್ಣನ ಮಹಿಮೆಯ ನೋಡಾ ಸಿದ್ಧರಾಮಯ್ಯಾ.

ಇಂತಹ ಸಂಗನಬಸವಣ್ಣನ ಮಹಿಮೆ ನಡೆದದ್ದು ಹನ್ನೆರಡನೆಯ ಶತಮಾನದಲ್ಲಿ; ಬೀದರ ಜಿಲ್ಲೆಯ ಕಲ್ಯಾಣ ನಾಡಿನಲ್ಲಿ. ಸಿದ್ಧರಾಮನಿಗೆ ಕಲ್ಯಾಣ ನಾಡಿನ ಪರಿಚಯ ಮಾಡಿಸಿ ಕೊಡುವ ಪ್ರಭುದೇವರ ಈ ವಚನ ಅರ್ಥೈಸಿದಂತೆಲ್ಲಾ ವೈವಿಧ್ಯಮಯವಾಗಿ ಕಾಣುತ್ತದೆ. ಹನ್ನೆರಡನೆಯ ಶತಮಾನದ ಶಿವಶರಣರಿದ್ದ ಪವಿತ್ರಕ್ಷೇತ್ರವಾದ ಈ ಜಿಲ್ಲೆ ಹೆಸರಾಂತ ಕ್ರಾಂತಿ ಭೂಮಿ. ಶತ-ಶತಮಾನಗಳ ಭವ್ಯಸಂಸ್ಕೃತಿಯನ್ನು ಹೊತ್ತುನಿಂತ ಈ ನಾಡಿನ ನೆಲ ಪವಿತ್ರ-ಜಲ ಪಾವನ.

ಕರ್ನಾಟಕದ ಕಿರೀಟದಂತೆ ಶೋಭಿಸುತ್ತಿರುವ ಬೀದರ ಜಿಲ್ಲೆ ವ್ಯಾಪ್ತಿಯಲ್ಲಿ ಈಗ ಅತ್ಯಂತ ಸಣ್ಣ ಜಿಲ್ಲೆಯಾಗಿದ್ದರೂ ಇತಿಹಾಸ ಹೊತ್ತು ನಿಂತ ಸಾಕ್ಷಿಗಳ ಆಧಾರದಿಂದ ಗತಕಾಲದಲ್ಲಿ ಇದೊಂದು ದೊಡ್ಡ ಜಿಲ್ಲೆಯಾಗಿತ್ತೆಂಬುದು ಸ್ಮರಣೀಯವಾದುದು.

ಗುಮ್ಮಳಾಪುರದ ಸಿದ್ಧಲಿಂಗದೇವರು ತಮ್ಮ ಶೂನ್ಯ ಸಂಪಾದನೆಯಲ್ಲಿ ಕಲ್ಯಾಣವನ್ನು ಸಾಕ್ಷಾತ್ ಕೈಲಾಸವೆಂದು ಬಣ್ಣಿಸಿದ್ದಾರೆ. "ಮಾರ್ತ್ಯಲೋಕದ ಸಕಲೈಶ್ವರ್ಯದ ಭಂಡಾರದ ನಿಜ ನಿಳಯವೆನಿಪ್ಪ, ಮತ್ತು ಭೂಮಿಗೆ ಹೃತ್ಕಮಲ ಕರ್ಣಿಕಾವಾಸ ಮೆನಲೊಪು ವ ವಾಣಿಯ ಮುಖದರ್ಪಣವೆನಿಸಿಪ್ಪ ಸಕಲ್ಯಧರ್ಮಂಗಳಂ ತೀವಿದ ಕರಂಡಗೆ ಎನಿಸಿಪ್ಪ, ಸತ್ಯದ ಸಾಗರವೆನಿಸಿಪ್ಪ ಪುಣ್ಯದ ಪುಂಜವೆನಿಸಿಪ್ಪ, ಮತ್ತಂ ಕೈಲಾಸವೆನಿಸಿಪ್ಪ ಶ್ರೀ ಕಲ್ಯಾಣಪುರಂ" ಎಂದು ಬಣ್ಣಿಸುವ ಅವರ ಈ ನುಡಿಯಲ್ಲಿ ಕಲ್ಯಾಣ ನಾಡಿನ ಐಸಿರಿ, ಅಲ್ಲಿಯ ಭವ್ಯ ಸಂಸ್ಕೃತಿ ಯಾರಿಗಾದರೂ ಮನದಟ್ಟಾಗುತ್ತದೆ. ಕಲ್ಯಾಣದ ಮಹಾತ್ಮೆಯನ್ನು ಶಾಸನದಲ್ಲಿ ವಿವರಿಸಿದ ಚೆನ್ನ ಬಸವಣ್ಣನವರ ವಚನವಂತೂ ಈ ನಾಡಿನ ದಿವ್ಯಬದುಕಿಗೆ ಸಾಕ್ಷಿ ನುಡಿಯುತ್ತದೆ.

ಡಾ. ಆರ್. ಸಿ. ಹಿರೇಮಠರು ಸಂಪಾದಿಸಿರುವ 'ಗುಮ್ಮಳಾಪುರದ ಸಿದ್ಧಲಿಂಗದೇವರ ಶೂನ್ಯಸಂಪಾದನೆಯ' ೧೧೬ನೆಯ ಪುಟದಲ್ಲಿ ಶಾಸನದಲ್ಲಿನ ಚೆನ್ನಬಸವಣ್ಣನವರ ವಚನ ಇಂತಿದೆ.

'ಸ್ವಸ್ತಿ ಸಮಸ್ತ ಪ್ರಶಸ್ತಿ ಸಹಿತ ಶ್ರೀಮತ್ಕಲ್ಯಾಣ
ಪರಮಹಾತ್ಮೆ ಎಂತೆಂದಡೆ:
ವಿಸ್ತರಿಸಿ ಹೇಳುವೆನು, ಎಲ್ಲಾ ಶಿವಗಣಂಗಳು ಕೇಳಿ
ಕೃತಾರ್ಥರಾಗಿರಯ್ಯಾ
ಹದಿನಾಲ್ಕು ಭುವನಕ್ಕೆ ಕಳಶವೆಂದೆನಿಸುವ
ರುದ್ರಲೋಕವೇ ಮರ್ತ್ಯಲೋಕಕ್ಕೆ ಇಳಿತಂದು
ಕಲ್ಯಾಣವೆಂಬ ಪುರವಾಗಿ ಹುಟ್ಟಿತು ನೋಡಿರಯ್ಯಾ
ಅಲ್ಲಿ ಸತ್ಯರು ಸಾತ್ವಿಕರು ನಿತ್ಯರು ನಿಜೈಕ್ಯರು

ಮಹಾಜ್ಞಾನಿಗಳು ಪರಮ ಶಿವಯೋಗಿಗಳು ಶಿವಾನುಭಾವ
ಸಂಪನ್ನರು
ಶಿವಲಿಂಗ ಪ್ರಾಣಿಗಳು ಶಿವಪ್ರಸಾದೋದಕಸಂಬಂಧಿಗಳು
ಶಿವಾಚಾರ ವೇದ್ಯರು ಶಿವಾಗಮ ಸಾಧ್ಯರು ಶಿವಸಮಯ
ಪಕ್ಷರುಗಳಲ್ಲದೆ ಮತ್ತಾರೂ ಅಲ್ಲಿಲ್ಲ ನೋಡಿರಯ್ಯಾ
ಪಾಪಿಗಳು ಕೋಪಿಗಳ ಅಸತ್ಯರು ಅನಾಚಾರಿಗಳು ಹೋಗ
ಬಾರದು ಕಲ್ಯಾಣವ ಮೀರಿ ಹೊಕ್ಕೆಹೆನೆಂಬವರಿಗೆ ಬಾಳ
ಬಾಯಧಾರೆ ನೋಡಿರಯ್ಯಾ.

....'

೧೦೩ ಸಾಲುಗಳನ್ನೊಳಗೊಂಡ ಶಾಸನದಲ್ಲಿ ಕಲ್ಯಾಣದ ವಿಸ್ತೀರ್ಣ, ಶಿವಾಲಯಗಳು, ದಾಸೋಹದ ಮಠಗಳು, ಬಸವಣ್ಣನವರ ಮಹಿಮೆ ಇವೆಲ್ಲಾ ಉಲ್ಲೇಖವಾಗಿವೆ. 'ಆ ಕಲ್ಯಾಣದ ನಾಮ ಹಿಡಿದು ವಿವಾಹಕ್ಕೆ ಕಲ್ಯಾಣವೆಂಬ ನಾಮವಾಯಿತ್ತು. ಲೋಕದೊಳಗೆ ಕಲ್ಯಾಣವೇ ಕೈಲಾಸವೆನಿಸಿತ್ತು' ಎನ್ನುವ ನುಡಿಯೂ ಕೂಡ ಇದರಲ್ಲಿಯೇ ಇದೆ. ಇಂತಹ ಕಲ್ಯಾಣದ ದರುಶನ ಮಾಡಿದರೆ ಪಾಪ ಪರಿಹಾರವಾಗುತ್ತದೆ, ಇದರ ಮಹಾತ್ಮೆ ಕೇಳಿದರೆ ಮೋಕ್ಷ ಲಭಿಸುತ್ತದೆ ಎಂದು ಇಲ್ಲಿ ವಿವರಿಸಿದೆ.

ಸಾಮಾಜಿಕ-ಸಾಹಿತ್ಯಿಕ ಹಾಗೂ ಧಾರ್ಮಿಕ ಕ್ಷೇತ್ರಗಳಲ್ಲಿ ಕ್ರಾಂತಿಯ ಕಹಳೆಯನ್ನೂದಿ ಜನಮನ ಜಾಗೃತಗೊಳಿಸಿ ಐತಿಹಾಸಿಕ ಘಟನೆಗಳಿಂದ ಖ್ಯಾತಿವೆತ್ತ ಈ ಬೀದರ ಜಿಲ್ಲೆಗೆ, ನಳದಮಯಂತಿ ಮಹಾಭಾರತ ಕಥಾಸನ್ನಿವೇಶಗಳೊಂದಿಗೆ ಸಂಪರ್ಕ ಹೊಂದಿದ ಪ್ರಾಚೀನ ಚರಿತ್ರೆಯ ಹಿನ್ನೆಲೆಯಿದೆ.

'ಬೀದರ' ಹೆಸರಿನ ಆಯ್ಕೆಯೂ ಕೂಡ ಸುಂದರ ಮತ್ತು ಅಷ್ಟೇ ಸರಳ. ಈ ಪದ 'ವಿದರ್ಭ' ಎಂಬುದಕ್ಕೆ ಹೋಲುವುದರಿಂದ ಮಹಾಭಾರತದಲ್ಲಿ ಬರುವ ವಿದುರನಗರವೇ ಬೀದರ ಆಗಿರಬೇಕೆಂದು ಒಂದು ಊಹೆಯಾದರೆ ನಳ-ದಮಯಂತಿ ಕಥೆಯಲ್ಲಿನ 'ವಿದುರ' ಯುವರಾಜನಿಂದ ಸ್ಥಾಪಿಸಲ್ಪಟ್ಟಿರಬೇಕೆಂದು ಇನ್ನೊಂದು ಊಹೆ. ಹಿಂದೆ ಇದು ಬಿದರಿನ ಕೆಲಸಕ್ಕೆ ಪ್ರಖ್ಯಾತಿ ಹೊಂದಿದ್ದರಿಂದ 'ಬಿದಿರು' ಪದವೇ 'ಬೀದರ' ಆಯಿತೆಂದು ತರ್ಕಿಸಲಾಗಿದೆ. ಆಗ ಇಲ್ಲಿ ಬಿದಿರು ದಟ್ಟವಾಗಿ ಬೆಳೆದಿತ್ತೆಂದು ಹೇಳಲಾಗುತ್ತಿದೆ. ಕೆಲಕಾಲದ ವರೆಗೆ ಇದರ ಹೆಸರು 'ವೇದರ್' ಎಂದಿದ್ದು ದಿನದ ಬಳಕೆಯಲ್ಲಿ ಶಬ್ದರೂಪಾಂತರದಿಂದ 'ಬೀದರ' ಆಯಿತೆಂದು ಹೇಳಲಾಗುತ್ತಿದೆ. ೧೫ನೆಯ ಶತಮಾನದಲ್ಲಿ ರಚಿತವಾದ ಲಕ್ಕಣ್ಣ ದಂಡೇಶನ 'ಶಿವತತ್ವ ಚಿಂತಾಮಣಿ' ಹಾಗೂ ೧೭ನೆಯ ಶತಮಾನದಲ್ಲಿ ಚೆನ್ನಮಲ್ಲೇಶರಿಂದ ಬರೆಯಲ್ಪಟ್ಟ 'ವೀರ ಸಂಗಯ್ಯನ ಚೌಪದಿ'ಯಲ್ಲಿ ಬಿದರೂರು ಎಂಬ ಪದ ಉಲ್ಲೇಖಿಸಲ್ಪಟ್ಟಿರುವದರಿಂದ 'ಬಿದರೂರು' ಎಂಬುದೇ 'ಬಿದರೆ'ಯಾಗಿ ನಂತರ ಬೀದರ ಎಂದಾಗಿ ಶಬ್ದರೂಪಾಂತರ ಪಡೆದಿದೆ. ಅಂತೆಯೇ ಇದಕ್ಕೆ ಬಿದಿರೆ > ಬಿದಿರುಪುರ > ಬಿದರೂರು > ಬೀದರೆ > ಬೀದರ ಇತ್ಯಾದಿಯಾಗಿ ಹೆಸರು ಬಂದಿದೆ. ಈ ಜಿಲ್ಲೆಯಲ್ಲಿ ದೊರೆತ ಶಾಸನಗಳಲ್ಲಿ ಮಾತ್ರ ಈ 'ಬೀದರ' ಹೆಸರಿನ ಉಲ್ಲೇಖಗಳಿಲ್ಲ. ಬಹಮನಿ ಸುಲ್ತಾನರ ಕಾಲದಲ್ಲಿ ಇದು 'ಮೊಹಮ್ಮದಾಬಾದ ಬೀದರ' ಎಂದು ಪ್ರಸಿದ್ಧಿ ಹೊಂದಿದ್ದರಿಂದ ಹೋದ ದಶಕದಲ್ಲಿ ಇದನ್ನು 'ಎಮ್. ಬೀದರ' ಎಂದೇ ಕರೆಯುತ್ತಿದ್ದರು. ಔರಂಗಜೇಬನು ಮಾತ್ರ ಇದಕ್ಕೆ 'ಯಫರಾಬಾದ'.

ಎಂದು ಕರೆದನು. ಈ ಜಿಲ್ಲೆ ಈಗ ವ್ಯಾಪ್ತಿಯಲ್ಲಿ ಚಿಕ್ಕದೂ-ಚೊಕ್ಕಟವೂ ಆಗಿರುವಂತೆ ಹೆಸರಿನಲ್ಲಿಯೂ ಕೂಡ ಸರಳವೂ-ಸುಂದರವೂ ಆಗಿದೆ.

ಕರ್ನಾಟಕ ಏಕೀಕರಣ ಪೂರ್ವದಲ್ಲಿ ಒಂಬತ್ತು ತಾಲೂಕಗಳನ್ನು ಹೊಂದಿದ್ದ ಈ ಜಿಲ್ಲೆ, ಹೈದ್ರಾಬಾದ ನಿಜಾಮನ ಅಧೀನದಲ್ಲಿತ್ತು. ೧೯೫೬ರಲ್ಲಿ ಕರ್ನಾಟಕ ರಾಜ್ಯದಲ್ಲಿ ವಿಲೀನಗೊಂಡಾಗ ಕೇವಲ ನಾಲ್ಕು ತಾಲೂಕಗಳನ್ನು ಮಾತ್ರ ಈ ಜಿಲ್ಲೆ ಹೊಂದಿತ್ತು. ಬೀದರ, ಭಾಲ್ಕಿ, ಹುಮನಾಬಾದ ಮತ್ತು ಔರಾದ ಈ ನಾಲ್ಕು ತಾಲೂಕಗಳೊಂದಿಗೆ ಐದನೆಯ ತಾಲೂಕ ಆಗಿ ಬಸವಕಲ್ಯಾಣವು ೧೯೬೫ರಲ್ಲಿ ರೂಪುಗೊಂಡಿತು.

ಬೀದರ ಜಿಲ್ಲೆ ಇಂದು ಹಿಂದುಳಿದ ಜಿಲ್ಲೆಯೆಂದು ಪರಿಗಣಿಸಲ್ಪಟ್ಟಿದ್ದರೂ ಇದರ ಐತಿಹಾಸಿಕ ಸಿರಿವಂತಿಕೆ, ಸಾಂಸ್ಕೃತಿಕ ಭವ್ಯಪರಂಪರೆ ಮಿಗಿಲಾದವುಗಳು. ಚಾಲುಕ್ಯರು ಮತ್ತು ಬಹಮನಿ ಸುಲ್ತಾನರ ಕಾಲದಲ್ಲಿ ಅತ್ಯಂತ ವಿಜೃಂಭಣೆಯಿಂದ ಮೆರೆದ ಈ ಜಿಲ್ಲೆಯ ಸಾಂಸ್ಕೃತಿಕ ಅಧ್ಯಯನ ಕೂಡಾ ಅಷ್ಟೇ ಮಹತ್ವಪೂರ್ಣವಾದುದು.

ಭೌಗೋಲಿಕ ಸ್ಥಾನಮಾನ :

ಬೀದರ ಜಿಲ್ಲೆಯು ೧೭°೩೫ ಹಾಗೂ ೧೮°೨೫ ಉತ್ತರ ಅಕ್ಷಾಂಶ ಮತ್ತು ೭೬°೪೨ ಹಾಗೂ ೭೭°೩೫ ಪೂರ್ವ ರೇಖಾಂಶ ಸ್ಥಾನಗಳ ನಡುವೆ ಇದೆ. ಕರ್ನಾಟಕದ ಉತ್ತರಕ್ಕೆ ತುತ್ತ ತುದಿಯಲ್ಲಿರುವ ಈ ಜಿಲ್ಲೆಯ ಪೂರ್ವಕ್ಕೆ ಆಂಧ್ರಪ್ರದೇಶದ ನಿಜಾಮಾಬಾದ ಮತ್ತು ಮೇದಕ್ ಜಿಲ್ಲೆಗಳು ಹೊಂದಿಕೊಂಡಿವೆ. ಉತ್ತರ ಮತ್ತು ಪಶ್ಚಿಮ ಭಾಗಗಳಿಗೆ ಕ್ರಮವಾಗಿ ಮಹಾರಾಷ್ಟ್ರದ

ನಾಂದೇಡ ಮತ್ತು ಉಸ್ಮಾನಾಬಾದ ಜಿಲ್ಲೆಗಳಿವೆ. ದಕ್ಷಿಣಕ್ಕೆ ಗುಲಬರ್ಗಾ ಜಿಲ್ಲೆಯಿದೆ. ಗಡಿನಾಡಿನ ಈ ಜಿಲ್ಲೆಗೆ ಮೊದಲಿನಿಂದಲೂ ಮಹತ್ವವಿದೆ.

ಜಿಲ್ಲೆಯು ಪೂರ್ವದಿಂದ ಪಶ್ಚಿಮಕ್ಕೆ ೯೩-೪ ಕಿಲೋಮೀಟರ ಉದ್ದಳತೆ ಹೊಂದಿದ್ದು, ದಕ್ಷಿಣೋತ್ತರವಾಗಿ ೧೧೫-೨ ಕಿಲೋಮೀಟರ ಇದೆ. ಜಿಲ್ಲೆಯ ಒಟ್ಟು ವಿಸ್ತೀರ್ಣ ೫,೪೫೮ ಚದುರಕಿಲೋಮೀಟರ ಇದೆ. ಇಲ್ಲಿಯ ಒಟ್ಟು ಜನಸಂಖ್ಯೆ ೮,೨೪,೦೫೯. ರಾಜ್ಯದ ಒಟ್ಟು ಜನಸಂಖ್ಯೆಯ ಶೇ. ೨.೮೧ ರಷ್ಟಾಗಿದೆ. ಜಿಲ್ಲೆಯ ಜನಸಂಖ್ಯೆ ಮತ್ತು ಭೂಕ್ಷೇತ್ರಗಳ ತುಲನೆ ಪ್ರಕಾರ ಇಲ್ಲಿನ ಜನಸಾಂದ್ರತೆ ಪ್ರತಿ ಚದುರ ಕಿಲೋಮೀಟರಿಗೆ ೧೫೧ ಆಗಿರುತ್ತದೆ. ಜಿಲ್ಲೆಯಲ್ಲಿ ೫೯೧ ಹಳ್ಳಿಗಳಿವೆ. ಜಿಲ್ಲೆಯ ಕೆಲಭಾಗ ಕೆಂಪುಮಣ್ಣಿನ ಭೂಮಿಯಾಗಿದ್ದರೆ. ಉಳಿದರ್ಧ ಕಪ್ಪು ಮಣ್ಣಿನದು. ಕಾರಂಜಾ ಮತ್ತು ಮಾಂಜರಾಗಳು ಈ ಜಿಲ್ಲೆಯ ದೊಡ್ಡನದಿಗಳು. ಮುಲ್ಲಾಮಾರಿ, ಚುಲ್ಕಿನಾಲಾ, ಮಾಣಿಕ ನಗರನಾಲಾ, ಮಧುರಾನಾಲಾಗಳು ಇನ್ನಿತರ ಪ್ರವಾಹಗಳಾಗಿವೆ.

ಸಮುದ್ರ ಪಾತಳಿಯಿಂದ ೨೨೦೭ ಫೂಟು ಎತ್ತರವಿರುವ ಬೀದರದ ಹವಾಮಾನ ಆರೋಗ್ಯಕರವಾದುದು. ನೀರೂ ಕೂಡ ಅಷ್ಟೇ ಸಿಹಿಯಾದುದು. ಇಲ್ಲಿಯ ಗುರುನಾನಕಝರಾದಲ್ಲಿಯ ನೀರನ್ನು ವಿದೇಶಿ ಪ್ರವಾಸಿಗಳು ಬಾಟ್ಲಿಯಲ್ಲಿ. ಸಂಗ್ರಹಿಸಿಕೊಂಡು ಹೋಗುತ್ತಾರೆ. ಎಲ್ಲ ದೃಷ್ಟಿಯಿಂದಲೂ ಹಿತಕರವಾದ ಈ ಜಿಲ್ಲೆಯ ಸಂಸ್ಕೃತಿಯೂ ಕೂಡ ಅಷ್ಟೇ ವೈವಿಧ್ಯಮಯವಾಗಿದೆ.

---

೧. ಐತಿಹಾಸಿಕ ಹಿನ್ನೆಲೆ

ಬೀದರ ಜಿಲ್ಲೆಯು ಕಾಲಕಾಲಾಂತರಕ್ಕೆ ಸಾಮ್ರಾಟ ಮೌರ್ಯ, ಶಾತವಾಹನ, ರಾಷ್ಟ್ರಕೂಟ, ಕಲ್ಯಾಣಚಾಲುಕ್ಯ, ಕಾಕತೀಯ, ದಿಲ್ಲಿ, ಬಹಮನಿ, ಮೊಘಲ್ ಹಾಗೂ ಹೈದ್ರಾಬಾದ ನಿಜಾಮ ಇವರೆಲ್ಲರ ಆಡಳಿತಕ್ಕೊಳಪಟ್ಟಿದೆ. ಹೀಗಾಗಿ ಬೀದರ ಇತಿಹಾಸ ಅತ್ಯಂತ ಸುಪ್ರಸಿದ್ಧವಾದುದು. ಬೇರೆ ಬೇರೆ ಭಾಗದ, ವಿಭಿನ್ನಧರ್ಮದ ಹಲವಾರು ಸಾಮ್ರಾಟರು ಈ ಜಿಲ್ಲೆಯನ್ನು ಆಡಳಿತಕ್ಕೊಳಪಡಿಸಿ ಕೊಂಡದ್ದರಿಂದ ಇಲ್ಲಿಯ ಸಂಸ್ಕೃತಿಯೂ ಕೂಡ ವೈವಿಧ್ಯಮಯ ವಾದುದು.

ಕ್ರಿ. ಪೂ. ೩ನೆಯ ಶತಮಾನದಲ್ಲಿ ಚಿತ್ರದುರ್ಗದ ವರೆಗಿನ ಇಡೀ ದಕ್ಷಿಣಭಾಗವು ಮೌರ್ಯವಂಶದ ಅಶೋಕ ಸಾಮ್ರಾಟನಿಂದ ಆಕ್ರಮಿಸಲ್ಪಟ್ಟಿತ್ತು. ಆಗ ಈ ಬೀದರ ಜಿಲ್ಲೆಯೂ ಅಂದಿನ ಆಳಿಕೆಗೆ ಒಳಪಟ್ಟಿತ್ತು. ಮುಂದೆ ಕ್ರಿ. ಶ. ೬ನೆಯ ಶತಮಾನದಲ್ಲಿ ಶಾತವಾಹನರ ಆಡಳಿತಕ್ಕೊಳಪಟ್ಟಿತು. ಅವರು ದಖ್ಖನ್ ಪ್ರದೇಶವನ್ನೆಲ್ಲ ಆಳುತ್ತಿದ್ದರು. ೮ನೆಯ ಶತಮಾನದಲ್ಲಿ ರಾಷ್ಟ್ರ ಕೂಟರ ಆಡಳಿತಕ್ಕೆ ಈ ಜಿಲ್ಲೆ ಒಳಪಟ್ಟಿತು. ಅತ್ಯಂತ ಪ್ರಸಿದ್ಧ ರಾದ ರಾಷ್ಟ್ರಕೂಟ ದೊರೆಗಳು ಆಳುವ ಸಮಯದಲ್ಲಿ ಈ ಜಿಲ್ಲೆ ಸಂಪದ್ಭರಿತವಾಗಿತ್ತು. ಇವರ ಸಮಯದಲ್ಲಿ ಕನ್ನಡ ತಲೆಯೆತ್ತಿ ನಿಂತಿತು. ಕಲೆ-ಸಾಹಿತ್ಯ ಸಂಸ್ಕೃತಿಗಳು ಹೂವಾಗಿ ಅರಳಿದವು.

ರಾಷ್ಟ್ರಕೂಟರು ಕಲಾಪ್ರಿಯರು-ರಸಿಕರು. ಈ ನಾಡು ಕಲ್ಯಾಣಚಾಲುಕ್ಯರ ಆಡಳಿತಕ್ಕೊಳಪಟ್ಟಿತು. ಆಗ ಕಲ್ಯಾಣ

ರಾಜಧಾನಿಯಾಯಿತು. ೧೦೭೭-೧೧೨೭ ಈ ಅವಧಿಯಲ್ಲಿದ್ದ ಕಲ್ಯಾಣ ಚಾಲುಕ್ಯಚಕ್ರವರ್ತಿ ೬ನೆಯ ವಿಕ್ರಮಾದಿತ್ಯನ ಕಾಲದಲ್ಲಿ ಬೀದರ ಜಿಲ್ಲೆ ಸಮೃದ್ಧವಾಗಿ ಸಂಪದ್ಭರಿತವಾಗಿತ್ತು. ಆಗ ಈ ನಾಡಿನ ಘನತೆ ಗೌರವಗಳು ಹೆಚ್ಚಿದವು. ಈ ದೊರೆ ಅತ್ಯಂತ ಪರಾಕ್ರಮಿಯಾದಂತೆ, ಸಾಹಿತ್ಯಪ್ರಿಯನೂ, ಕಲಾಭಿಮಾನಿಯೂ ಆಗಿದ್ದ. ಅನೇಕ ಕವಿಗಳು, ಪಂಡಿತರು ಈತನ ಆಶ್ರಯದಲ್ಲಿದ್ದರು. ಕಾಶ್ಮೀರದಿಂದ ಬಿಲ್ಹಣನೆಂಬ ಪ್ರಸಿದ್ಧ ಕವಿ ಕಲ್ಯಾಣಕ್ಕೆ ಬಂದದ್ದು ಆವಾಗಲೆ. ಈ ವಿಕ್ರಮಾದಿತ್ಯನ ರಾಜ್ಯ ರಾಮರಾಜ್ಯವಾಗಿತ್ತು. ಹಲವಾರು ಶಾಸನಗಳು ಈ ದೊರೆಯ ಆಡಳಿತವನ್ನು ಪ್ರಜೆಗಳ ಅಭ್ಯುದಯದ ಕಾಲವೆಂದು ಬಣ್ಣಿಸಿವೆ. ಜನಹಿತ ಕಾರ್ಯ ಮಾಡುವದರಲ್ಲಿ ಈ ದೊರೆ ಪ್ರಸಿದ್ಧಿ ಪಡೆದಿದ್ದ. ಭಾಲ್ಕಿಯಲ್ಲಿ ದೊರೆತ ಶಿಲಾಶಾಸನದ ಪ್ರಕಾರ ಈ ದೊರೆಯ ಮಹಾ ಮಂಡಲೇಶ್ವರನಾದ ಕುಮಾರ ಹೇಮದಿದೇವನು ಬಾಲ್ಕಿಯಲ್ಲಿ ಗುಡಿಗಳನ್ನು ಕಟ್ಟಿಸಿದ. ಕಲೆಯ ಬೆಳವಣಿಗೆಗೆ, ಸಾಹಿತ್ಯ ರಚಿಸುವವರಿಗೆ. ಗಮಕಿಗಳಿಗೆ ಈ ವಿಕ್ರಮಾದಿತ್ಯ ದೊರೆ ಕೊಡುಗೈದೊರೆಯಾಗಿದ್ದ. ಅಂತೆಯೇ ಈತನ ಕಾಲಕ್ಕೆ ಈ ಬೀದರ ಜಿಲ್ಲೆ ಅತ್ಯಂತ ಸಂಭ್ರಮದಿಂದೊಡಗೂಡಿತ್ತು.

ಆರನೆಯ ವಿಕ್ರಮಾದಿತ್ಯನ ಆಳಿಕೆಯು ಕರ್ನಾಟಕದ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡುವಂತಹದಾಗಿದೆ. ಪ್ರಜೆಗಳ ವಿಷಯದಲ್ಲಿ ಅನುಕಂಪ ಹೊಂದಿದ ರಾಜನು ವ್ಯಾಪಾರ, ಒಕ್ಕಲುತನಕ್ಕಾಗಿ ಅನೇಕ ಜನಹಿತ ಕಾರ್ಯಗಳನ್ನು ಕೈಕೊಂಡನು. ಕಲ್ಯಾಣ ಹಾಗು ಇತರ ಸ್ಥಳಗಳು ವ್ಯಾಪಾರದ ಹಿರಿಯಕೇಂದ್ರಗಳಾಗಿದ್ದವು.

ಕರ್ನಾಟಕ, ಮಹಾರಾಷ್ಟ್ರ ಹಾಗು ಉತ್ತರ ಭಾಗದ ವ್ಯಾಪಾರಿಗಳು ಕಲ್ಯಾಣಕ್ಕೆ ಬಂದು ವ್ಯಾಪಾರ ಮಾಡುತ್ತಿದ್ದರು. ಕ್ರಿ.ಶ. ೧೦೮೨ ರ ಗೋರಟಾ (ಬಸವಕಲ್ಯಾಣ ತಾಲೂಕ) ಗ್ರಾಮದ ಶಾಸನದ ಪ್ರಕಾರ ಈ ಸ್ಥಳವು ಆರ್ಥಿಕ ಹಾಗು ಸಾಂಸ್ಕೃತಿಕ ದೃಷ್ಟಿಯಿಂದ ಸಂಪನ್ನವಾಗಿತ್ತು. ಇಲ್ಲಿನ ವಿದ್ಯಾಸತ್ರದಲ್ಲಿ ಉಚಿತವಾದ ಶಿಕ್ಷಣ, ಹಾಗೂ ವಸತಿ ಸೌಕರ್ಯವಿತ್ತು. ಆರನೆಯ ವಿಕ್ರಮಾದಿತ್ಯನು ರುದ್ರಮಿತ್ರನೆಂಬ ವಿದ್ವಾಂಸನಿಗೆ ಸಾಕಷ್ಟು ಭೂಮಿಯನ್ನು ಆತನ ಧಾರ್ಮಿಕ, ಸಾಮಾಜಿಕ ಸೇವೆಗಾಗಿ ದಾನ ಹಾಕಿ ಕೊಟ್ಟನು. ಇದೇ ಸಮಯದಲ್ಲಿ ಘಟ್ಟಘೋರಿವಳ್ಳಿ (ಘಾಟಬೋರಾಳ-ಹುಮನಾಬಾದ ತಾಲೂಕ) ಯಲ್ಲಿ ಹಲವಾರು ಯಜ್ಞಗಳನ್ನು ಮಾಡಿದನು. ಕ್ರಿ.ಶ. ೧೦೮೪ ಕ್ಕಿಂತ ಮುಂಚೆಯೇ ಆರನೆಯ ವಿಕ್ರಮಾದಿತ್ಯನು ಕಲ್ಯಾಣದ ಸಮೀಪ ಒಂದು ಹೊಸ ನಗರವನ್ನು ನಿರ್ಮಿಸಿದನು. ಅದರ ಹೆಸರು ರಾಯನಾರಾಯಣಪುರ (ಇಂದಿನ ನಾರಾಯಣಪುರ ವೆಂದಿತ್ತು; ಕಾರಣ ಆತನಿಗೆ ರಾಯನಾರಾಯಣ ಎಂಬ ಬಿರುದು ಇತ್ತು. ಕಾಶ್ಮೀರದ ಸಂಸ್ಕೃತ ಕವಿಯಾದ ಬಿಲ್ಹಣನು ತನ್ನ ವಿಕ್ರಮಾಂಕದೇವ ಚರಿತದ ಹದಿನೇಳನೆಯ ಸರ್ಗವಲ್ಲಿಯೂ ಸಹ ಈ ವಿಷಯ ವಿವರಿಸಿದ್ದಾನೆ.

ಕಲ್ಯಾಣ ಸಮೀಪದಲ್ಲಿ ಹಾಗು ಬೀದರ ಜಿಲ್ಲೆಯ ಇತರ ಕಡೆಗಳಲ್ಲಿ ಅನೇಕ ಕೆರೆಗಳು ಆರನೇ ವಿಕ್ರಮಾದಿತ್ಯನ ಕಾಲದಲ್ಲಿ ನಿರ್ಮಾಣವಾದವು. ಅಂದಿನ ಕಾಲದ ಜನಸಾಮಾನ್ಯರು, ಮಹಾಮಂಡಳೇಶ್ವರರು, ಆಡಳಿತದ ಹಿರಿಯ ಅಧಿಕಾರಿಗಳು, ಮುಂದಾಳುಗಳು ಒಂದಿಲ್ಲೊಂದು ತರದಿಂದ ದೇಶದ ಆರ್ಥಿಕ ಏಳಿಗೆಗಾಗಿ

ಕಾರ್ಯಮಾಡಿದರು. ಇದಕ್ಕೆ ಸಾಕ್ಷಿ. ಅಂದಿನ ಕಾಲದ ಅನೇಕ ಸುಂದರ ಮಂದಿರಗಳು ಹಾಗು ಅವುಗಳ ಭಗ್ನಾವಶೇಷಗಳು. ರಂಜೋಳದ ಸಿಂದವಂಶದ ಮಹಾಮಂಡಳೇಶ್ವರನಾದ ಹಜ್ಜರಸ ಎಂಬವನು ತನ್ನ ಭಾಗದ ಆರ್ಥಿಕ ಏಳಿಗೆಗೆ ಸಹಾಯಮಾಡಿದನು. ಧಾರ್ಮಿಕ ಪ್ರವೃತ್ತಿಯವನಾದ ಈತನು ಹಲವಾರು ಮಂದಿರ ಗಳನ್ನು ರಂಜೋಳ, ಹಿಲಾಲಪುರ, ಮರಕಲ್ ಮುಂತಾದ ಗ್ರಾಮ ಗಳಲ್ಲಿ ನಿರ್ಮಿಸಿದನು; ಅನೇಕ ಕೆರೆಗಳನ್ನು ಕಟ್ಟಿಸಿದನು. ಈತನ ಕಾಲದಲ್ಲಿ ಅನೇಕ ತೋಟಗಳು ನಿರ್ಮಾಣವಾದವು. ನಾನಾ ಪ್ರಕಾರದ ಬೆಳೆಗಳನ್ನು ಬೆಳೆಯಲಾಗುತ್ತಿತ್ತು. ಚಾಲುಕ್ಯರ ಕಾಲ ದಲ್ಲಿಯೇ ಬೀದರ ಪಟ್ಟಣವು ಅಸ್ತಿತ್ವದಲ್ಲಿತ್ತು ಎಂಬುದಕ್ಕೆ ಅಲ್ಲಿಯ ಮಂದಿರದ ಭಗ್ನಾವಶೇಷಗಳು ಆಧಾರವಾಗಿವೆ. ಇಂದಿಗೂ ದೊರೆ ಯುವ ಈ ಅವಶೇಷಗಳು ಚರಿತ್ರೆಯನ್ನು ಹೊತ್ತುನಿಂತಿವೆ.

ಭಾಲ್ಕಿಯ ಭಲ್ಲುಂಕೇಶ್ವರ ಮಂದಿರವು ಕ್ರಿ. ಶ. ೧೧೦೦ರಲ್ಲಿ ಆರನೆಯ ವಿಕ್ರಮಾದಿತ್ಯನ ಕಾಲದಲ್ಲಿಯೇ ನಿರ್ಮಿತವಾಯಿತು. ಕಲೆ, ಶಿಲ್ಪಕಲೆಯ ದೃಷ್ಟಿಯಿಂದ ಈ ಮಂದಿರವು ಅನುಪಮ ವಾಗಿತ್ತು. ಇದರ ಅವಶೇಷಗಳನ್ನು ಇಂದಿಗೂ ಕಾಣಬಹುದು. ಅನೇಕ ಶೈವ, ವೈಷ್ಣವ, ಜೈನ ಮಂದಿರಗಳು ಈತನ ಆಳಿಕೆಯಲ್ಲಿ ನಿರ್ಮಾಣವಾದವು. ಕಲ್ಯಾಣವು ಶೈವ, ವೈಷ್ಣವ, ಜೈನ ಧರ್ಮದ ಕೇಂದ್ರವಾಗಿತ್ತು. ನಾರಾಯಣಪುರದ ವಿಷ್ಣುಮಂದಿರ (ಈಗಿನ ಶಿವಮಂದಿರ) ಪ್ರತಾಪೂರದ ಸೂರ್ಯ ಮಂದಿರ (ಈಗ ಭಗ್ನ ವಾಗಿದೆ) ಗೋರಟಾದ ರುದ್ರೇಶ್ವರ ಮಂದಿರ (ಈಗ ಉಳಿದಿಲ್ಲ), ಜಲಸಂಗಿಯ ಶಿವಮಂದಿರ, ಅಣದೂರಿನ ನಾರಣೇಶ್ವರ ಮಂದಿರ

(ಈಗ ಉಳಿದಿಲ್ಲ), ರಂಜೋಳದ ಹಜ್ಜೇಶ್ವರ, ಮೈಲಕೇಶ್ವರ, ರಾಮೇಶ್ವರ ಮಂದಿರಗಳು (ಇಂದು ಉಳಿದಿಲ್ಲ), ಬಗದಲದ ವಿಷ್ಣುಮಂದಿರ (ಉಳಿದಿಲ್ಲ), ಬರೂರಗ್ರಾಮದ ಪ್ರಸಿದ್ಧವಾದ ಮಹಾವೀರ ಮಂದಿರ (ಮೂರ್ತಿ ಭಗ್ನವಾಗಿದೆ), ಹಾಳಹಳ್ಳಿ, ಬ್ಯಾಲಹಳ್ಳಿ, ಗೋರ ಚಿಂಚೋಳಿ, ಔರಾದ ಸಮೀಪದ ನಾರಾಯಣಪೂರದ ಮಂದಿರ, ಹಾಗು ಇತರ ಅನೇಕ ಕಡೆಯ ಮಂದಿರಗಳ ಶಿಲ್ಪಕಲೆ, ಮೂರ್ತಿಕಲೆಯು ಬೀದರ ಜಿಲ್ಲೆಯ ಸಾಂಸ್ಕೃತಿಕ ದೃಷ್ಟಿಯಿಂದ ಅತ್ಯಂತ ಸಂಪದ್ಭರಿತವಾಗಿತ್ತು. ಇಲ್ಲಿಯ ಶಾಸನಗಳು ಒಕ್ಕಲುತನದ ಹುಟ್ಟುವಳಿ, ವ್ಯಾಪಾರ ಮುಂತಾದ ವಿಷಯವಾಗಿ ತಿಳಿಸುತ್ತವೆ. ಬೀದರ ಸಮೀಪದ ಅಗ್ರಹಾರಗ್ರಾಮದ ಅನಂತಶಯನ ಮೂರ್ತಿಯು ಚಾಲುಕ್ಯರ ಶಿಲ್ಪಕಲೆಗೆ ಉತ್ತಮ ನಿದರ್ಶನವಾಗಿದೆ. ಚಂಡಕಾಪುರದ ಅಮೃತ ಕುಂಡವು ಇದೇ ಕಾಲಕ್ಕೆ ಸಂಬಂಧಿಸಿದ್ದಾಗಿದೆ.

ಕ್ರಿ. ಶ. ೧೧೧೬ರ ಕಲ್ಯಾಣದ ಶಾಸನವು ಆರನೇ ವಿಕ್ರಮಾದಿತ್ಯನ ಕಾಲಕ್ಕೆ ಸಂಬಂಧಿಸಿದುದು. ಸಮಾಜದ ನಾನಾ ವರ್ಗದ ವ್ಯಾಪಾರಿಗಳ ಮತ್ತು ಅವರ ಚಟುವಟಿಕೆಗಳ ಬಗ್ಗೆ ಇದು ವಿವರವನ್ನೊದಗಿಸುತ್ತದೆ. ಶಾಸನಗಳಲ್ಲಿ ಉಲ್ಲೇಖಿ ವಾಗಿರುವ ಅಂದಿನ ವ್ಯಾಪಾರದ ಮೇಲಿನ ಸುಂಕದ ವಿವರವನ್ನು ನೋಡಿದರೆ ಅಂದು ವ್ಯಾಪಾರವು ಎಷ್ಟು ವೈವಿಧ್ಯಮಯ ವಾಗಿತ್ತೆಂಬುದು ತಿಳಿದುಬರುತ್ತದೆ. ಬಿಲ್ಹಣನು ತನ್ನ ವಿಕ್ರಮಾಂಕದೇವ ಚರಿತೆಯಲ್ಲಿ ಬಹಳ ಸುಂದರವಾಗಿವಿಕ್ರಮಾದಿತ್ಯನ ಕಾಲದ ವೈಭವದ ಬಗೆಗೆ ಬರೆದಿದ್ದಾನೆ. ಹೀಗೆ ಚಾಲುಕ್ಯ ಆರನೆಯ ವಿಕ್ರಮಾದಿತ್ಯನ ಆಳಿಕೆ ಅತ್ಯಂತ ಸಮರ್ಥಪೂರ್ಣವಾಗಿತ್ತು.

ಕ್ರಿ. ಶ. ೧೧೫೦ ರ ಸುಮಾರಿಗೆ ಕಲ್ಯಾಣ ಚಾಲುಕ್ಯರ ಆಡಳಿತ ಕೊನೆಗೊಳ್ಳುವ ಹೊತ್ತು ಬಂದಿತ್ತು. ೬ನೆಯ ವಿಕ್ರಮಾದಿತ್ಯನ ದೀರ್ಘ ಆಳಿಕೆಯ ನಂತರ ಆತನ ಮಗ ೩ನೆಯ ಸೋಮೇಶ್ವರ ಹಾಗು ಮೊಮ್ಮಗನಾದ ೨ನೆಯ ಜಗದೇಕಮಲ್ಲನ ಆಳಿಕೆಗಳು ಯಾವ ಮಹತ್ವವನ್ನೂ ಪಡೆಯದೆ ಕೊನೆಗೊಂಡವು. ಇದೇ ಸಮಯದಲ್ಲಿ ಈ ರಾಜ್ಯವನ್ನುರುಳಿಸುವ ಒಳಸಂಚುಗಳು ನಡೆದಿದ್ದವು. ಮುಂದಿನ ಅರಸನಾದ ೩ನೆಯ ತೈಲಪನ ಕಾಲದಲ್ಲಿ ಆ ಹೊಗೆ ಧಗೆಯಾಗಿ ಹೊರಬಿದ್ದು ಚಾಲುಕ್ಯರ ಅಸ್ತಿತ್ವಕ್ಕೆ ಕೊಡಲಿಪೆಟ್ಟುಬಿದ್ದಿತು. ಈ ಆಂತರಿಕ ಕ್ರಾಂತಿಗೆ ಕಾರಣನಾದ ಮೂಲ ಶಕ್ತಿಯೆಂದಲೆ ಕಲಚುರಿಯ ೨ನೆಯ ಬಿಜ್ಜಳ. ಸುಮಾರು ಕ್ರಿ. ಶ. ೧೧೩೬ ರಿಂದಲೇ ಅಧಿಕಾರ ದಲ್ಲಿದ್ದ ಬಿಜ್ಜಳ ದಿನೇ-ದಿನೇ ತನ್ನ ಬಲವನ್ನು ಹೆಚ್ಚಿಸಿಕೊಂಡು ಕ್ರಿ.ಶ. ೧೧೫೦ ರ ಹೊತ್ತಿಗೆ ತರ್ದವಾಡಿಯ ಅಧಿಕಾರಿಯಾಗಿ, ಇಳಿಮುಖ ವಾಗುತ್ತಿದ್ದ ಚಾಲುಕ್ಯರ ವರ್ಚಸ್ಸನ್ನು ಗಮನಿಸಿದ ಆಳರಸರ ಚಿಕ್ಕ ವಯಸ್ಸನ್ನು ಕಂಡ. ತನ್ನ ಅನುಭವದ ಚಾಣಾಕ್ಷತೆಯಿಂದ, ಸತತ ಪ್ರಯತ್ನದಿಂದ ೩ನೆಯ ತೈಲಪನನ್ನು ತಳ್ಳಿ ತಾನೇ ಪಟ್ಟವನ್ನು ಕ್ರಮಿಸಿದನು. ಆಗ ಬಿಜ್ಜಳ ಸ್ವತಂತ್ರ ಅರಸನೆನಿಸಿಕೊಂಡ.

ಕಲಚುರಿಗಳ ಈ ಚಿಕ್ಕ ಆಳಿಕೆಯಲ್ಲಿ, ನಾಡಿನಲ್ಲಿ ಶಾಂತಿ ಯಾಗಲೀ, ಸ್ಥಿರತೆಯಾಗಲೀ ಇರಲಿಲ್ಲ. ಆದರೂ ಕರ್ನಾಟಕ ಚರಿತ್ರೆಯಲ್ಲಿ ಅತ್ಯಂತ ಮಹತ್ವದ ಸ್ಥಾನವನ್ನು ಈ ಮನೆತನ ಪಡೆದಿದೆ. ಸಾಮಾಜಿಕ ಧಾರ್ಮಿಕ ಹಾಗು ಸಾಹಿತ್ಯಕ ರಂಗಗಳಲ್ಲಿ ಮಹತ್ತರವಾದ ಸುಧಾರಣೆಯಾದದ್ದು ಇದೇ ಕಾಲದಲ್ಲಿ. ಇವಕ್ಕೆ ಮೂಲಕಾರಣ– ಈ ಸಮಯದಲ್ಲಿ ಬಸವೇಶ್ವರರ ನೇತೃತ್ವದಲ್ಲಿ ನಡೆದ ಧಾರ್ಮಿಕ ಹಾಗೂ ಸಾಮಾಜಿಕ ಕ್ರಾಂತಿ. ಅಂತೆಯೇ ಈ

ಶತಮಾನ ಇತಿಹಾಸದ ಪುಟಗಳಲ್ಲಿ ಸುವರ್ಣಾಕ್ಷರಗಳಿಂದ ಬರೆದ ಚಿರಂತನ ಕಾಲ. ಶ್ರೀ ಬಸವೇಶ್ವರ ಮತ್ತು ಉಳಿದ ಹಲವಾರು ಶರಣರ ಉದಯದಿಂದಲೇ ಕರ್ನಾಟಕದ ಚರಿತ್ರೆಯಲ್ಲಿ ಕಲಚುರಿಗಳಿಗೆ ಹೆಚ್ಚಿನ ಮಹತ್ವವುಂಟಾಯಿತು.

ಕಲಚುರಿಗಳ ನಂತರ ಯಾದವರು ಕಾಕತೀಯರು ಸ್ವಲ್ಪ ಕಾಲ ಆಳಿಕೆ ನಡೆಸಿದರು, ಕ್ರಿ. ಶ. ೧೩೨೧ ರ ಸುಮಾರಿಗೆ ತುಘಲಕ್ ಮನೆತನ ದೆಹಲಿಯ ಪಟ್ಟಕ್ಕೆ ಬಂದಿತು. ಆಗ ಮಹಮ್ಮದ ತುಘಲಕ್ ಬೀದರ ಪ್ರದೇಶವನ್ನು ತನ್ನದಾಗಿಸಿಕೊಂಡ. ಬಸವಕಲ್ಯಾಣದಲ್ಲಿ ದೊರೆತ ಶಿಲಾಶಾಸನವೊಂದರಲ್ಲಿ ಈತನ ಹೆಸರು ಉಲ್ಲೇಖವಾಗಿದೆ. ಈ ಸಮಯದಲ್ಲಿ ನಸರತ್‌ಖಾನನೆಂಬುವನು ಬೀದರ ಬಾಗದ ಆಡಳಿತಗಾರನಾಗಿದ್ದ. ತುಘಲಕ್‌ನ ಆಡಳಿತ ಅಸಮರ್ಥವಾಗಿದ್ದರಿಂದ ದಕ್ಷಿಣದಲ್ಲಿ ಕ್ರಾಂತಿಯಾಯಿತು. ಈ ಕ್ರಾಂತಿಯ ಪರಿಣಾಮವಾಗಿ 'ಬಹಮನಿ' ಎಂಬ ಹೊಸ ರಾಜ್ಯದ ಉದಯವಾಯಿತು.

೧೪ನೆಯ ಶತಮಾನದ ಮಧ್ಯದಲ್ಲಿ ಅಲ್ಲಾಉದ್ದೀನ ಶಹನಿಂದ ಈ ಬಹಮನಿ ರಾಜ್ಯಸ್ಥಾಪಿತವಾಯಿತು. ಎರಡು ಶತಮಾನಗಳ ವರೆಗೆ ಬಹಮನಿ ಸುಲ್ತಾನರು ರಾಜ್ಯವಾಳಿದರು. ಇವರು ಮೊದಲು ಗುಲಬರ್ಗಾವನ್ನು ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರು. ಬೀದರ ಇವರ ಎರಡನೆಯ ರಾಜಧಾನಿಯಾಗಿತ್ತು. ಕ್ರಿ.ಶ. ೧೪೨೮ ರಲ್ಲಿ ಬಹಮನಿ ಸುಲ್ತಾನನಾದ ಅಹಮ್ಮದಶಹನು ಬೀದರ ನಗರವನ್ನು ರಾಜಧಾನಿಯನ್ನಾಗಿ ಮಾಡಿದ. ಬೀದರದ ಆರೋಗ್ಯಪೂರ್ಣ ಉತ್ತಮ ಹವೆ ಈತನನ್ನು ಆಕರ್ಷಿಸಿತು.

ಈತನ ಕಾಲಕ್ಕೆ ಬೀದರ ಕೋಟೆ–ಕೊತ್ತಳೆಗಳ ಪುನರ್ನಿರ್ಮಾಣ ವಾಯಿತು.

ಸುಲ್ತಾನ ಮೂರನೆಯ ಮಹಮ್ಮದಶಹನು (೧೪೮೨) ಬಹಮನಿ ರಾಜ್ಯದ ಕೊನೆಯ ಬಲಾಢ್ಯ ಸುಲ್ತಾನ. ಈತನ ಆಳ್ವಿಕೆಯಲ್ಲಿ ಬಹಮನಿರಾಜ್ಯದ ಕೀರ್ತಿ ಎಲ್ಲೆಡೆ ಹಬ್ಬಿತು. ಸಾಮ್ರಾಜ್ಯ ಸಂಪದ್ಭರಿತವಾಗಿ ವೈಭವದಿಂದೊಡಗೂಡಿತ್ತು. ಮಹಮ್ಮೂದ ಗವಾನ ಈತನ ಪ್ರಧಾನಮಂತ್ರಿಯಾಗಿದ್ದ. ಬಹಮನಿ ರಾಜ್ಯಕ್ಕೆ ಕೆಡುಗಾಲ ಸಮೀಪಿಸಿತು. ೧೪೮೧ ರಲ್ಲಿ ಗವಾನನ ಕೊಲೆಯಾಯಿತು. ಇದಕ್ಕೆ ಕಾರಣನಾದವನೂ ೩ನೆಯ ಮಹಮ್ಮದಶಹನೇ. ಈ ಕೊಲೆಯನಂತರ ರಾಜ್ಯ ಅವನತಿಯಹಾದಿ ಹಿಡಿಯಿತು. ಆಂತರಿಕ ದಂಗೆಗಳು ಪ್ರಾರಂಭವಾದವು. ಮಹಮ್ಮದಶಹನು ಪಶ್ಚಾತಾಪದಿಂದ ೧೪೮೨ರಲ್ಲಿ ತೀರಿಕೊಂಡ. ಕೊನೆಗೆ ೧೫೨೭ರಲ್ಲಿ ಬಹಮನಿ ರಾಜ್ಯ ಪತನವಾಯಿತು.

ಬಹಮನಿ ಸುಲ್ತಾನರ ನಂತರ ಬರೀದಶಾಹಿಸುಲ್ತಾನರು ಬೀದರದಲ್ಲಿ ಅಧಿಕಾರ ನಡೆಸಿದರು. ಈ ಮನೆತನದ ಅಲೀಬರೀದ ಶಹನು ಬೀದರ ನಗರದ ಸುತ್ತ ಗೋಡೆ ಕಟ್ಟಿಸಿದ. ನಗರಕ್ಕೆ ರಕ್ಷಣಾ ದ್ವಾರಗಳು ನಿರ್ಮಿಸಲ್ಪಟ್ಟವು. ಫತೇ ದರವಾಜ, ದುಲಹನ್ ಧರವಾಜ, ತಾಳಘಾಟ ಧರವಾಜ, ಮಂಗಲಪೇಟ ದರವಾಜ ಹಾಗೂ ಶಹಗಂಜ ದರವಾಜ ಇವು ಮುಖ್ಯವಾದವು ಗಳು. ಇದೇ ವೇಳೆಗೆ ೧೬೫೬ರ ಸುಮಾರಿಗೆ ಔರಂಗಜೇಬನು ಬೀದರದ ಕೋಟೆಯನ್ನು ಮುತ್ತಿ ಕೈವಶಪಡಿಸಿಕೊಂಡನು. ನಂತರ ಬೀದರಕ್ಕೆ ಜಫಾರಾಬಾದ ಎಂದು ಹೊಸ ಹೆಸರನ್ನಿಟ್ಟನು.

ಔರಂಗಜೇಬನ ನಿಧನದ ನಂತರ ೧೭೧೮ರಿಂದ ಕೆಲವು ವರ್ಷ ಬೀದರ ಭಾಗ ಪೇಶ್ವೆಯವರ ಆಡಳಿತದಲ್ಲಿತ್ತು. ೧೭೨೪ ರಿಂದ ೧೯೪೮ ರ ವರೆಗೆ ಬೀದರ ಪ್ರದೇಶ ಹೈದ್ರಾಬಾದ ನಿಜಾಮನ ಆಡಳಿತದಲ್ಲಿತ್ತು. ಈತನ ಕಾಲದಲ್ಲಿ ಈ ನಾಡಿಗೆ ಅನೇಕ ಸುದಾರಣೆಗಳಾದರೂ ಇದೇ ಸಮಯದಲ್ಲಿ ಅಂದರೆ ೧೯೩೦–೪೮ರ ವೇಳೆಗೆ ರಜಾಕಾರರ ಹಾವಳಿ ಪ್ರಾರಂಭವಾಯಿತು. ಅನೇಕ ಹಿಂದೂ ಜನರು ಹಿಂಸೆಗೊಳಗಾದರು; ಮನೆ–ಮಠ ಕಳೆದುಕೊಂಡರು. ಹಲವಾರು ಜನರು ಪ್ರಾಣಬಿಟ್ಟರು. ಈ ಜಿಲ್ಲೆಯ ಇತಿಹಾಸದಲ್ಲೊಂದಿದು ಕಪ್ಪು ಘಟನೆ. ೧೯೪೨ ರಿಂದ ದೇಶದಲ್ಲೆಲ್ಲ ಪ್ರಾರಂಭವಾದ ಸ್ವಾತಂತ್ರ್ಯ ಚಳುವಳಿಗೆ ಇಲ್ಲಿಯ ಧುರೀಣರೂ ಸೇರಿಕೊಂಡು ಸತ್ಯಾಗ್ರಹಮಾಡಿದರು. ೧೯೪೭ ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿತಾದರೂ ಈ ಭಾಗದಲ್ಲಿ ಹೈದ್ರಾಬಾದ ನಿಜಾಮ ತನ್ನ ಅಧಿಕಾರ ಕಳೆದುಕೊಳ್ಳಲು ಸಿದ್ಧನಿರಲಿಲ್ಲ. ಕೊನೆಗೆ ೧೯೪೮ರಲ್ಲಿ ಭಾರತದ ಒಕ್ಕೂಟದಲ್ಲಿ ಹೈದ್ರಾಬಾದ ರಾಜ್ಯವಿಲೀನವಾಯಿತು. ೧೯೫೬ರ ರಾಜ್ಯ ಪುನರ್‌ವಿಂಗಡಣೆಯ ಪ್ರಕಾರ ಬೀದರ ಕರ್ನಾಟಕ ರಾಜ್ಯಕ್ಕೆ ಸೇರಿಸಲ್ಪಟ್ಟಿತು. ಇದು ಈ ಜಿಲ್ಲೆಯ ಅತ್ಯಂತ ಸಂಕ್ಷಿಪ್ತವಾದ ಇತಿಹಾಸ ಪರಂಪರೆ.

೨. ಧಾರ್ಮಿಕ-ಸಾಂಸ್ಕೃತಿಕ ಪರಂಪರೆ

ಬೀದರ ಜಿಲ್ಲೆಯ ಧರ್ಮ ಮತ್ತು ಸಂಸ್ಕೃತಿಯ ಬಗೆಗೆ ಒಂದು ಮಹತ್ವದ ಅಂಶವೆಂದರೆ ಇಲ್ಲಿ ಕಾಣುವದು 'ಏಕತೆಯಲ್ಲಿ ಭಿನ್ನತೆ.' ಅನೇಕ ಮತಪಂಥಗಳು ಪ್ರಾಚೀನ ಕಾಲದಿಂದಲೂ ಈ

ಜಿಲ್ಲೆಯಲ್ಲಿ ಆಚರಿಸಲ್ಪಟ್ಟದ್ದರಿಂದ ವಿವಿಧ ಧರ್ಮದವರ, ವಿಭಿನ್ನ ಸಂಸ್ಕೃತಿ ಜನರ ಬದುಕು ಇಲ್ಲಿ ಬೆಳಕಾಗಿ ನಿಂತಿದೆ. ಹಿಂದೂ-ಮುಸ್ಲೀಮ್ ಸಂಸ್ಕೃತಿಗಳ ಸಮ್ಮಿಲನ ಈ ಜಿಲ್ಲೆಯ ಧಾರ್ಮಿಕ-ಸಂಸ್ಕೃತಿಗೆ ಒಂದು ಹೆಗ್ಗುರುತು. ಇದು ಈ ಜಿಲ್ಲೆಯ ವೈಶಿಷ್ಟ್ಯವೂ ಅಹುದು.

ಬೌದ್ಧ-ಜೈನ ಮತಗಳು:-ಕ್ರಿ. ಪೂ. ೩ ನೆಯ ಶತಮಾನದಲ್ಲೇ ಮೌರ್ಯರ ಆಳ್ವಿಕೆಗೆ ಒಳಗಾದ ಈ ಜಿಲ್ಲೆಯಲ್ಲಿ ಆಗ ಬೌದ್ಧ ಮತ ಪ್ರಚಲಿತದಲ್ಲಿತ್ತು. ಪ್ರಾಚೀನ ಕಾಲದಿಂದಲೂ ಜೈನ ಮತದ ಪ್ರಭಾವ ಕಂಡುಬರುತ್ತದೆ. ಜಿಲ್ಲೆಯ ಅನೇಕ ಭಾಗಗಳಲ್ಲಿ ಜೈನ ಮಂದಿರಗಳಿದ್ದುದೇ ಇದಕ್ಕೆ ಸಾಕ್ಷಿ. ರಾಷ್ಟ್ರಕೂಟರು, ಚಾಲುಕ್ಯರು ಜೈನಧರ್ಮದ ಪೋಷಕರಾಗಿದ್ದುಕೊಂಡು ಆ ಧರ್ಮದ ಬೆಳವಣಿಗೆಗೆ ಪ್ರೊತ್ಸಾಹ ಕೊಡುತ್ತಿದ್ದರು. ಮುಸ್ಲಿಮ್‌ರ ಕಾಲದಲ್ಲೂ ಜೈನಧರ್ಮದ ಪ್ರಾಬಲ್ಯ ಕಂಡುಬರುತ್ತದೆ. ಕ್ರಿ. ಶ. ೧೪೭೦ ಸುಮಾರಿಗೆ ಬೀದರಕ್ಕೆ ಆಗಮಿಸಿದ್ದ ರಷ್ಯದ ಪ್ರವಾಸಿ ನಿಕಿಟಿನ್ ಎಂಬುವನು ಬೀದರದಲ್ಲಿ ಜೈನರ ಮತ್ತು ಬೌದ್ಧರ ಮನೆಗಳಿಗೆ ಭೇಟಿಯಿತ್ತು ಅವರೊಡನೆ ಮಾತನಾಡಿದ್ದನ್ನು ಬರೆದಿದ್ದಾನೆ. ಇಂದಿಗೂ ನಮಗೆ ಸಾಕ್ಷಿಯಾಗಿನಿಂತಿರುವ ಬೀದರ ನಗರದ ಶಹರ ಗಂಜದಲ್ಲಿರುವ ಪ್ರಾಚೀನ ಜೈನಮಂದಿರವನ್ನು ಕಂಡಾಗ ಈ ಮಾತು ಇನ್ನೂ ಸ್ಪಷ್ಟವಾಗುತ್ತದೆ.

ಬೌದ್ಧಮತದ ವೈಶಿಷ್ಟ್ಯ ಹಾಗೂ ಪ್ರಭಾವ ಏನೇ ಇರಲಿ ಬಸವಯುಗದ ಸುಮಾರಿಗೆ ಇದು ತುಂಬಾ ಕ್ಷೀಣ ಸ್ಥಿತಿಯಲ್ಲಿತ್ತೆಂಬುದಂತೂ ಸ್ಪಷ್ಟ. ಅಂದರೆ ಕ್ರಿ. ಶ. ೧೧೫೦ ರ ವೇಳೆಗೆ ಜೈನಮತವೂ

ಕ್ಷೀಣಿಸಿತ್ತು. ಸಾಹಿತ್ಯಕ್ಷೇತ್ರದಲ್ಲಿದ್ದ ಜೈನರ ಏಕ ಸ್ವಾಮ್ಯ ಕೊನೆಗೊಂಡು ಜನತೆ ಹೊಸಧರ್ಮಕ್ಕಾಗಿ ಕಾಯುತ್ತಿದ್ದರು. ಅದುವೇ ಕ್ರಾಂತಿಯುಗ ಬಸವೇಶ್ವರರ ಉದಯದ ಕಾಲ ಜೈನ ಹಾಗೂ ಜೈನೇತರರಲ್ಲಿ ವಿವಾಹ ಸಂಬಂಧ ರೂಢಿಯಲ್ಲಿದ್ದುದರಿಂದ. ಹನ್ನೆರಡನೆಯ ಶತಮಾನದ ಹೊತ್ತಿಗೆ ಅನೇಕ ಜೈನರು ಧಾರ್ಮಿಕ ಒತ್ತಡಕ್ಕೆ ಒಳಗಾಗಿ ಹೊಸಮತ ಸ್ವೀಕಾರ ಮಾಡಿದರು.

ಜೈನರ ಕಠಿಣವಾದ ವ್ರತಗಳು, ಆಚರಿಸಲು ಕಠಿಣವಾದ ನೇಮಗಳು ಹಲವಾರು ಜನರು ಈ ಮತವನ್ನು ಕೈ ಬಿಟ್ಟು ಬೇರೆ ಮತ ಸ್ವೀಕರಿಸುವದಕ್ಕೆ ಅನುವು ಮಾಡಿಕೊಟ್ಟವು. ಇವರ ಉಪವಾಸ ವ್ರತವಂತೂ ಅತ್ಯಂತ ಭಯಾನಕವಾದುದು. ಧಾರ್ಮಿಕ. ಸಾಮಾಜಿಕ ಹಾಗೂ ಕಲಾಕ್ಷೇತ್ರಗಳಲ್ಲಿ ಮಾಡಿದ್ದ ಸಾಧನೆಗಿಂತ ಹೆಚ್ಚಿನ ಸಾಧನೆಯನ್ನು ಜೈನರು ಸಾಹಿತ್ಯಕ್ಷೇತ್ರದಲ್ಲಿ ಮಾಡಿದರೆಂಬ ಮಾತು ತೀರಾ ಸ್ಪಷ್ಟವಾದುದು.

ಶೈವಮತ:- ಈ ಜಿಲ್ಲೆಯಲ್ಲಿ ಅನೇಕ ಶತಮಾನಗಳಿಂದ ಶೈವ ಮತ ವಿದ್ದುದು ಕಂಡು ಬರುತ್ತದೆ. ಕರ್ನಾಟಕದಲ್ಲಿ ಕಾಲಾಮುಖ ಶೈವರು ಕ್ರಿ.ಶ. ೧೧೫೦ರಲ್ಲಿ ಸಾಕಷ್ಟು ಸಂಖ್ಯೆಯಲ್ಲಿದ್ದರು. ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಕಾಲಾಮುಖರು ಕರ್ನಾಟಕದಲ್ಲಿ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಂಡರು. ಬೀದರ ಜಿಲ್ಲೆಗೂ ಈ ಮಾತು ಅನ್ವಯಿಸುತ್ತದೆ. ಬೀದರದ ಮೇಲೆ ಪ್ರಭುತ್ವ ಹೊಂದಿದ್ದ ಕಾಕತೀಯರೂ ಕೂಡ ಶೈವಮತಸ್ಥರಾಗಿದ್ದರು. ಅವರ ಕಾಲದಲ್ಲಿ ನಿರ್ಮಾಣವಾದ ಶಿವ ದೇವಾಲಯಗಳ ಅವಶೇಷಗಳು ಇಂದಿಗೂ ಬೀದರ ಕೋಟೆಯಲ್ಲಿ ಕಾಣಿಸಿಗುತ್ತವೆ. ಕಲ್ಯಾಣ ಚಾಲುಕ್ಯರ

ಪ್ರೋತ್ಸಾಹ ಕೊನೆಗೊಂಡನಂತರ ಬಿಜ್ಜಳನು ಕಾಲಾಮುಖರಿಗೆ ವಿಶೇಷ ಪ್ರೋತ್ಸಾಹ ಕೊಟ್ಟನು. ಬಿಜ್ಜಳನು, ಬಸವೇಶ್ವರ ಮೊದಲಾದ ವಚನಕಾರರ ಆಂದೋಲನವನ್ನು ಪ್ರತಿರೋಧಿಸಿ, ವೀರಶೈವ ಮತ ಪ್ರಸಾರಕ್ಕೆ ಸಮಾನತೆಗಾಗಿ ಮಾಡುವ ಕ್ರಾಂತಿಗೆ ಅಡ್ಡಬಂದ ವಿಷಯ ವೀರಶೈವ-ಜೈನ ಸಾಹಿತ್ಯದಲ್ಲಿದೆ. ಆದರೆ ಬಿಜ್ಜಳನು ಅತ್ಯಂತ ನಿಷ್ಠಾವಂತ ಶೈವನಾಗಿದ್ದನೆನ್ನುವದನ್ನು ಮತ್ತು ಅವನ ವಂಶಜರು ಶೈವಮತದಲ್ಲಿ ವಿಶೇಷ ಆಸಕ್ತಿ ಹೊಂದಿದ್ದರು. ಬಿಜ್ಜಳನ ರಾಜ ಚಿಹ್ನೆ ನಂದಿ(ಶಿವನವಾಹನ)ಯಾಗಿತ್ತು. ಕಲಬುರ್ಗಿ ತಾಲೂಕದ ಹರಸೂರು, ಚಿತಾಪುರ ತಾಲೂಕದ ಕಾಳಗಿ, ಅಫಜಲಪುರ ತಾಲೂಕದ ಗೊಬ್ಬೂರ ಶಾಸನಗಳು ಕಲಚುರಿಗಳ ವಂಶ, ಧರ್ಮ ಮುಂತಾದವುಗಳ ಬಗ್ಗೆ ಸ್ಪಷ್ಟಪಡಿಸುತ್ತವೆ.

ಕಲಚುರ್ಯರ ಮೂಲ ವಂಶಜರಾದ ಮಧ್ಯಭಾರತದ ಕಟಚ್ಚುರಿಗಳೂ ಶೈವರಾಗಿದ್ದರು. ೧೧೪೭ ರಿಂದ ೧೧೮೯ ರ ಕಾಲ ವ್ಯಾಪ್ತಿಯಲ್ಲಿನ ಸುಮಾರು ಹತ್ತು-ಹನ್ನೆರಡು ಶಾಸನಗಳು ಕಾಲಾಮುಖ ಶೈವರೊಡನೆ ಇದ್ದ ಕಲಚುರಿ ಅರಸರ ಪರೋಕ್ಷ ಇಲ್ಲವೆ ಪ್ರತ್ಯಕ್ಷ ಸಂಬಂಧವನ್ನು ರುಜುವಾತುಪಡಿಸುತ್ತವೆ. ಜಿಲ್ಲೆಯ ಅನೇಕ ಭಾಗಗಳಲ್ಲಿ ಇರುವ ಶಿವದೇವಾಲಯಗಳು ಕಲ್ಯಾಣ ಚಾಲುಕ್ಯರ ಕಾಲದವುಗಳು. ೧೪ ಮತ್ತು ೧೫ ನೆಯ ಶತಮಾನಗಳಲ್ಲೂ ಕೂಡ ಶೈವ ಮತ ಪ್ರಸಿದ್ಧಿಯಲ್ಲಿತ್ತು.

ಬಸವಕಲ್ಯಾಣದಲ್ಲಿರುವ ಸದಾನಂದಮಠ ಸಾವಿರಾರು ವರ್ಷಗಳ ಹಿಂದೆಯೇ ಸ್ಥಾಪಿತವಾಗಿದೆ. ಶೈವಮತದ ಪ್ರತಿಪಾದಕರೇ ಈ ಮಠದ ಅನುಯಾಯಿಗಳು. ಬೀದರದಲ್ಲಿರುವ ದತ್ತಾನಂದ

ಮತವೂ ಕೂಡ ಶೈವಮತ ಪ್ರತಿಪಾದಕರದು. ಕಾಪಾಲಿಕರಂತೆ ಕಾಲಾಮುಖಿರನ್ನೂ ವಾಮಪಂಥೀಯರೆಂದು ಹಲವು ವೈದಿಕರು ಟೀಕಿಸುವರು, ಆದರೆ ಕರ್ನಾಟಕದಲ್ಲಿ ದೊರೆತ ಶಾಸನಗಳು ಈ ಹೇಳಿಕೆಯನ್ನು ಬೆಂಬಲಿಸುವದಿಲ್ಲ. ಕಾಲಾಮುಖಿರು ಹಲವು ಕೇಂದ್ರ ಗಳಲ್ಲಿ ನೆಲಸಿ, ಮಠ-ಮಂದಿರಗಳನ್ನು ಸ್ಥಾಪಿಸಿ ರಾಜಾಶ್ರಯ ಪಡೆದು ಸಮಾಜದಲ್ಲಿ ಸರಿಯಾದ ಸ್ಥಾನ ಪಡೆದರಲ್ಲದೆ ಸಮಾಜ ಹಾಗು ಧರ್ಮಕ್ಕೆ ತಮ್ಮದೇ ಆದ ಕೊಡುಗೆಯನ್ನು ಕೊಟ್ಟು ಹೋಗಿದ್ದಾರೆ. ಇಂದಿಗೂ ಈ ಜಿಲ್ಲೆಯಲ್ಲಿ ಶೈವ ಮತಸ್ಥರು ಇದ್ದಾರೆ.

ವೀರಶೈವ ಧರ್ಮ :– ಬಸವಪೂರ್ವಯುಗದಲ್ಲಿ ವೀರಶೈವ ದರ್ಮ ಅಸ್ತಿತ್ವದಲ್ಲಿದ್ದುದಕ್ಕೆ ಅನೇಕ ಆಧಾರಗಳಿವೆ. ಆದರೆ ಇದೊಂದು ವಿಶ್ವಧರ್ಮವಾಗಲು ಕಾರಣೀ ಭೂತನಾದ ಬಸವಣ್ಣ ಅಂತಹ ಕೇಂದ್ರ ಭೂಮಿ ಈ ಜಿಲ್ಲೆಯ ಕಲ್ಯಾಣ. ಬೀದರ ಜಿಲ್ಲೆ ಯಲ್ಲಿ ಅತ್ಯಂತ ಪ್ರಸಿದ್ಧಿ ಹೊಂದಿದ ಧರ್ಮವಿದು. ಕಲ್ಯಾಣ ನಾಡಿನ ಕ್ರಾಂತಿ ಬದುಕಿನ ಮೌಲ್ಯಗಳ ಪುನರ್ವಿಮರ್ಶೆ ಮಾಡಿತು. ಸಾಮಾಜಿಕ-ರಾಜಕೀಯ-ಧಾರ್ಮಿಕ ಈ ಎಲ್ಲ ರಂಗಗಳಿಗೂ ಹೊಸ ವ್ಯಾಖ್ಯಾನ ಬರೆದ ಸಮಯವದು. ಧರ್ಮದ ಹೆಸರಿನಲ್ಲಿ ನಡೆಯು ತ್ತಿದ್ದ ಶೋಷಣೆಯನ್ನು ಕಿತ್ತೊಗೆದು ಮಾನವನ ಬದುಕಿಗೆ ಹೊಸ ಆಯಾಮವನ್ನು ತಂದು ಕೊಟ್ಟ ಸುವರ್ಣಾವಕಾಶವದು.

ವ್ಯಕ್ತಿ-ಶಕ್ತಿಯಾಗುವದನ್ನ, ನರ-ಹರನಾಗುವದನ್ನ, ಜೀವ-ದೇವನಾಗುವ ಸಾಧ್ಯತೆಯನ್ನ ಶರಣರು ಸ್ಪಷ್ಟಗೊಳಿಸಿದರು. ಕನಸಾಗಿದ್ದ ಸ್ವರ್ಗವನ್ನು ಈ ಭೂಮಿಗಿಳಿಸಿ ಕಾಯಕ ತತ್ವದಲ್ಲಡಗ

ವಳಿಸಿ ಬಿಚ್ಚಿ ತೋರಿಸಿದರು. ಶರಣರು ಹುಟ್ಟುವದಕ್ಕಿಂತ ಮುನ್ನ ಇಲ್ಲಿಯ ಧಾರ್ಮಿಕ ಸ್ಥಿತಿ ತೀರ ಅವಹೇಳನವಾಗಿತ್ತು. ಮರದೈವ, ಮಡಕೆ ದೈವ ಕಲ್ಲು ದೈವ, ಮಣ್ಣು ದೈವ ಎಂದು ಕಾಲಿಡಲು ಇಂಬಿಲ್ಲದಂತೆ ದೈವ-ದೇವತೆಗಳು, ಗುಡಿ-ಗುಂಡಾರಗಳು ತುಂಬಿದ್ದವು. ತಮ್ಮ-ತಮ್ಮ ಧರ್ಮಗಳೇ ಮೇಲೆಂದು ಹೊಡೆದಾಡುವ ಕಾಲವದು. ಮೂಡನಂಬಿಕೆ ಗೊಡ್ಡು ಸಂಪ್ರದಾಯಗಳು ಹಾಸಿ ಹರಡಿದ್ದವು. ನಿರಕ್ಷರತೆ, ಅಸಡ್ಡೆ, ಡಂಭಾಚಾರ, ಜಾತಿಭೇದ ಮೂಢತೆ ಈ ದುರ್ಗುಣಗಳೆಲ್ಲಾ ಸಮಾಜದ ತುಂಬ ತುಂಬಿದ್ದವು. ಶಕ್ತಿಯಾರಾಧಕರೂ ಇದ್ದರು. ಕುರಿ-ಕೋಳಿ-ಕೋಣಗಳ ಬಲಿ ದೇವರ ಹೆಸರಿನಲ್ಲಿ ದಿನನಿತ್ಯಸಾಗಿತ್ತು. ಸಕಲ ರಂಗಗಳಲ್ಲೂ ಪರಿಸ್ಥಿತಿ ಪೂರ್ತಿ ಹದಗೆಟ್ಟ ಸಂದಿಗ್ಧಾವಸ್ಥೆಯಲ್ಲಿ ಶರಣರು ಉದಿಸಿ ಬಂದರು. ಸತ್ಯ ಶುದ್ಧ ಕಾಯಕ ತತ್ವದ ಮೇಲೆ ಹೊಸ ಸಮಾಜವನ್ನು ಕಟ್ಟಿದರು. ಜಂಗು ಹತ್ತಿದ ಸಮಾಜಕ್ಕೆ ಸಾಣೆ ಹಿಡಿದರು.

ವಿವಿಧ ಮೂಲೆಗಳಿಂದ, ಬೇರೆ-ಬೇರೆ ನಾಡಿನಿಂದ ಹಲವಾರು ಶಿವಶರಣರು ಬಸವಣ್ಣನವರ ಮಹಾಮನೆಯನ್ನರಿಸಿ ಕಲ್ಯಾಣಕ್ಕೆ ಬಂದರು. ಅಲ್ಲಮ ಪ್ರಭು, ಚೆನ್ನಬಸವಣ್ಣ, ಸಿದ್ಧರಾಮ, ಅಕ್ಕಮಹಾದೇವಿ ಈ ಮೊದಲಾದದರು ಬಸವಣ್ಣನವರಷ್ಟೇ ಮಹತ್ವದ ಪಾತ್ರವಹಿಸಿದವರು. ಆಂಧ್ರದಿಂದ ಬೊಮ್ಮಯ್ಯ, ಕಾಶ್ಮೀರದಿಂದ ಮಾರಯ್ಯ, ಇವರಲ್ಲದೆ ಗುಜರಾತ, ಬಂಗಾಲ, ಒರಿಸ್ಸಾ, ಕೇರಳ, ನೇಪಾಳ, ಪಾಂಡ್ಯ, ಚೋಳ ಮುಂತಾದ ಭಾಗಗಳಿಂದ ಹಲವಾರು ಶರಣರು ಕಲ್ಯಾಣಕ್ಕೆ ಧಾವಿಸಿ ಬಂದರು. ಚೋರ ಚಿಕ್ಕಯ್ಯ, ಕಿನ್ನರಿ ಬೊಮ್ಮಯ್ಯ, ಮೋಳಿಗೆ ಮಾರಯ್ಯ, ಮಡಿವಾಳ ಮಾಚಯ್ಯ, ಡೋಹರ ಕಕ್ಕಯ್ಯ, ಮಾದರ ಚೆನ್ನಯ್ಯ,

ಹೊಲೆಯರ ಹರಳಯ್ಯ, ಆಯ್ದಕ್ಕಿ ಮಾರಯ್ಯ, ಲಕ್ಕಮ್ಮ,
ಸುಂಕವ್ವೆ, ಅಕ್ಕನಾಗಮ್ಮ, ನೀಲಾಂಬಿಕೆ-ಗಂಗಾಂಬಿಕೆ ಈ ಮೊದ
ಲಾದ ಶರಣ-ಶರಣೆಯರು ವೀರಶೈವ ಧರ್ಮದ ಪ್ರಸರುತ್ತಾ
ನಕ್ಕೆ ಮಾನವಧರ್ಮದ ಹೊಸ ಬದುಕು ನಿರ್ಮಿಸಲು ಕಾರಣ
ರಾದವರು. ಇಂತಹ ಸತ್ಯ-ಶುದ್ಧ ಶರಣರ ಒಂದು ಸೈನ್ಯವೇ
ಕಲ್ಯಾಣದಲ್ಲಿ ಸಿದ್ಧವಾಯಿತು.

ಈ ಧಾರ್ಮಿಕ ಚಳುವಳಿಯೊಂದಿಗೆ ಸಾಮಾಜಿಕ
ಕ್ರಾಂತಿಯೂ ಆಯಿತು. ಕಸಕ್ಕಿಂತ ಕಡೆಯಾಗಿ ಕಾಣುತ್ತಿದ್ದ
ಮಹಿಳೆಗೆ ಅಗ್ರಸ್ಥಾನ ದೊರಕಿತು. ಅಕ್ಕಮಹಾದೇವಿಯಂತಹ
ಮಹಾಶಿವಶರಣೆ ಸಾಕ್ಷಾತ್ ಕಪಿಲಸಿದ್ಧ ಮಲ್ಲಿಕಾರ್ಜುನನ ರೂಪ
ವಾಗಿ ನಿಂತಳು. ಊರಲ್ಲಿ ಬರಬೇಕಾದರೆ ಕೊರಳಲ್ಲಿ ಗಂಟೆ ಕಟ್ಟಿ
ಕೊಂಡು ಬರಬೇಕಾದ ಸ್ಥಿತಿಯನ್ನು ಹೊಂದಿದ್ದ ಹರಿಜನರು ಎಲ್ಲ
ರಂತೆ ತಲೆಯೆತ್ತಿ ಬದುಕುವ ಅವಕಾಶಸಿಕ್ಕಿದ್ದು ಈ ಬಸವ
ಕ್ರಾಂತಿಯ ದೆಸೆಯಿಂದ ವೇಶ್ಯಾಸಮಸ್ಯೆಯನ್ನು ಹೋಗಲಾಡಿಸಿ,
ಹರಿಜನ-ಗಿರಿಜನರ ಬದುಕಿಗೆ ಹೊಸ ವ್ಯಾಖ್ಯಾನ ಬರೆದ ಈ ಕ್ರಾಂತಿ
ಕೇವಲ ಒಂದು ಸೀಮಿತಮತದ್ದಾಗಿರದೆ ವಿಶ್ವಮಾನ್ಯ ಧರ್ಮ
ವೆಂದು ಪ್ರಸಿದ್ಧಿಯಾಯಿತು. ಇದರಲ್ಲಿ ಭಾಗವಹಿಸಿದ ಸಕಲ
ಶರಣ-ಶರಣೆಯರು ಯಾವುದೇ ಜಾತಿ ಘೋಷಣೆಯ ಹಣೆಪಟ್ಟಿ
ಹಚ್ಚಿಕೊಳ್ಳದೆ ಮಾನವಧರ್ಮದ ಅಭ್ಯುದಯಕ್ಕೆ ಹೋರಾಡಿದರು.

ಶರಣರು ಪೂಜೆಯನ್ನು ಖಂಡಿಸಲಿಲ್ಲ. ಆದರೆ ಇಷ್ಟಲಿಂಗ
ಪೂಜೆಯನ್ನು ಪ್ರಸ್ಥಾಪಿಸಿ ಡಾಂಭಿಕವಾಗಿದ್ದ ಪೂಜಾವಿಧಾನವನ್ನು
ಅತ್ಯಂತ ಸರಳಗೊಳಿಸಿ ಕಾಯಕಕ್ಕೆ ಹೆಚ್ಚಿನ ಮಹತ್ವಕೊಟ್ಟರು.

ಅಂತೆಯೇ ಅವರ ದೃಷ್ಟಿಯಲ್ಲಿ ನುಡಿಗಿಂತ-ನಡೆ, ವಿಚಾರಕ್ಕಿಂತ ಆಚಾರ ಮಹತ್ವ ಪಡೆದವು.

ವೀರಶೈವಧರ್ಮದ ಅಂದಿನ ಆಚಾರ–ವಿಚಾರಗಳ ಪ್ರಭಾವ ಈ ಜಿಲ್ಲೆಯಲ್ಲಿ ಇಂದಿಗೂ ಉಳಿದುಬಂದಿದೆ. ಉಳಿದ ಜಿಲ್ಲೆಗಳಲ್ಲಿ ವೀರಶೈವರಲ್ಲೇ ಒಡಕಿದ್ದು ತಮ್ಮ ತಮ್ಮಲ್ಲೇ ಹಲವಾರು ಪಂಗಡಗಳನ್ನು ಮಾಡಿಕೊಂಡು ಕಚ್ಚಾಡುತ್ತಿರುತ್ತಾರೆ. ಒಳಪಂಗಡಗಳು ಸ್ವಲ್ಪ ಬೇರೆಯಾದರೂ ವಿವಾಹ ಸಂಬಂಧ ಮಾಡುವದಿಲ್ಲ. ಆದರೆ ಬೀದರ ಜಿಲ್ಲೆ ಈ ದೃಷ್ಟಿಯಿಂದ ಅತ್ಯಂತ ಮಹತ್ವವಾದ ಜಿಲ್ಲೆ. ಇಲ್ಲಿ ಬಸವಾದಿ ಶರಣರ ತತ್ವವಿಚಾರಗಳು ದಿನನಿತ್ಯದ ಜೀವನದಲ್ಲಿ ಕಂಡು ಬರುತ್ತವೆ. ಕೇವಲ ವೀರಶೈವ ಮನೆತನದಲ್ಲಿ ಹುಟ್ಟಿದವನಷ್ಟೇ ವೀರಶೈವನಲ್ಲ, ಯಾವನು ಆಚಾರ ವಿಚಾರಗಳಿಂದ ಶುದ್ಧನಾಗಿರುವನೋ ಅವನು ನಿಜವಾದ ವೀರಶೈವ ನೆಂಬುದನ್ನು ಇಲ್ಲಿಯ ಜನತೆ ಕ್ರಿಯೆಯಲ್ಲಿ ತೋರಿಸಿದ್ದಾರೆ. ಈ ಜಿಲ್ಲೆಯಲ್ಲಿಯ ಹಲವಾರು ಜನ ಹರಿಜನರು ವೀರಶೈವರಾಗಿದ್ದಾರೆ. ಈ ಜಿಲ್ಲೆಯ ಬೆಲ್ದಾಳ ಸಿದ್ಧರಾಮ ಶರಣರು ಈ ಭಾಗದಲ್ಲಿ ಪ್ರಸಿದ್ಧಿಹೊಂದಿದವರಾಗಿದ್ದಾರೆ. ಬಸವತತ್ವದ ವಿಚಾರಧಾರೆ ಅವರ ನಡೆ–ನುಡಿಯಲ್ಲಿ ಸಮ್ಮಿಳಿತವಾಗಿದೆ. ಬಸವತತ್ವದ ಪ್ರಸಾರಕ್ಕಾಗಿ ಇಂದಿಗೂ ಸತತ ಶ್ರಮಿಸುತ್ತಿದ್ದಾರೆ. ಈ ಜಿಲ್ಲೆಯ ಈ ಶರಣ ಹುಟ್ಟಿನಿಂದ ಹರಿಜನ. ಇವರ ಮೇಲೆ ಜಿಲ್ಲೆಯ ಜನ ಭಕ್ತಿ-ಗೌರವಗಳನ್ನಿಟ್ಟು ಅವರ ಉಪನ್ಯಾಸ ಪ್ರವಚನಗಳನ್ನು ಕೊಳ್ಳುತ್ತಾರೆ.

ಭಾಲ್ಕಿಯ ಚೆನ್ನಬಸವ ಪಟ್ಟದ್ದೇವರು ಈ ಜಿಲ್ಲೆಯಲ್ಲಿ ವೀರಶೈವಧರ್ಮದ ಉಳಿವಿಗೆ, ಬಸವ ತತ್ವದ ಬೆಳಕಿಗೆ ಸತತವಾಗಿ

ಶ್ರಮಿಸುತ್ತಿದ್ದಾರೆ. ಇಂತವರಲ್ಲಿ ನಾವದಗಿ ರೇವಪ್ಪಯ್ಯನವರು, ಮಂದನೂರಿನ ರೇವಣಸಿದ್ಧಸ್ವಾಮಿಗಳು, ಪರಕಾಡದ ಚೆನ್ನ ಬಸವೇಶ್ವರಸ್ವಾಮಿಗಳು, ಮುಚ್ಚಳಮ್ಮದ ನಾಗಭೂಷಣ ಶಿವ ಯೋಗಿಗಳು ಈ ಮೊದಲಾದವರೆಲ್ಲಾ ಈ ಭಾಗದಲ್ಲಿ ಭಕ್ತಿ ಧರ್ಮದ ಬಗೆಗೆ ಸದಾ ಜಾಗೃತೆಯನ್ನುಂಟು ಮಾಡಿದವರು. ಧಾರ್ಮಿಕ ಹಾಗೂ ಸಾಮಾಜಿಕ ರಂಗಗಳಲ್ಲಿ ಇವರ ಸೇವೆ ಅಪಾರ ವಾದುದು.

ಪಲವಾರು ವೀರಶೈವ ಮಠಗಳು ಧರ್ಮ–ಸಂಸ್ಕೃತಿಗಳ ಕೇಂದ್ರಗಳಾಗಿ ಈ ಜಿಲ್ಲೆಯಲ್ಲಿ ಇನ್ನೂ ಬೆಳಗಹತ್ತಿವೆ. ಭಾಲ್ಕಿಯ ಹಿರೇಮಠ, ಲಾಡಗೇರಿಯ ರುದ್ರಮುನಿಸ್ವಾಮಿಗಳಮಠ, ಹುಲಿ ಕುಂಟೆಮಠ, ಮೆಹಕರದ ಹಿರೇಮಠ ಹಾಗೂ ಬೀದರದ ಬಸವ ಮಂಟಪ, ಕಲ್ಯಾಣದ ಅನುಭವ ಮಂಟಪ ಮತ್ತು ಜಿಲ್ಲೆಯ ನಾನಾ ಭಾಗಗಳಲ್ಲಿ ಕಾರ್ಯೋನ್ಮುಖವಾಗಿರುವ ಬಸವ ಸಮಿತಿಗಳು ಧರ್ಮ ಸಂಸ್ಕೃತಿಯ ಪ್ರಸಾರ ಕೇಂದ್ರಗಳಾಗಿವೆ.

ಇಂದಿಗೂ ಕೂಡ ಬೀದರ ಜಿಲ್ಲೆಯರುವ ಹೆಚ್ಚಿನ ಜನಸಂಖ್ಯೆ ಸಂಖ್ಯೆ ವೀರಶೈವರದು. ಉಳಿದ ಜಿಲ್ಲೆಗಳಲ್ಲಿ ಪೂಜೆ ಸಮಾರಂಭ ಸಾಂಸ್ಕೃತಿಕ ಸಂದರ್ಭಗಳಲ್ಲಿ ಬೇರೆ ಬೇರೆ ಪ್ರಾರ್ಥನೆಗೀತೆಗಳನ್ನು ಬೀದರ ಜಿಲ್ಲೆಯಲ್ಲಿ ಮಾತ್ರ ಯಾವುದೇ ಕಾರ್ಯಕ್ರಮ ಪ್ರಾರಂಭ ವಾಗಲಿ, ಎಂತಹದೇ ಸಮಾರಂಭ ನಡೆದಿರಲಿ, ಎಲ್ಲಿಯೇ ಸಾಂಸ್ಕೃತಿಕ ಕಾರ್ಯಕ್ರಮವಿರಲಿ ಅಲ್ಲಿ ಮೊದಲು ಶರಣರ ವಚನ ಗಳನ್ನೂ ಹಾಡಿ ನಂತರ ಕಾರ್ಯಕ್ರಮ ಪ್ರಾರಂಭವಾಗುವದು ಈ ಜಿಲ್ಲೆಯಲ್ಲುಳಿದು ಬಂದಿರುವ ವಿಶಿಷ್ಟಗುಣ.

ಇಸ್ಲಾಂ ಮತ:

ನಮ್ಮ ದೇಶಕ್ಕೆ ವ್ಯಾಪಾರಮಾಡಲೆಂದು ಬಂದ ಮುಸ್ಲಿಮರು ಇಲ್ಲಿಯ ಸಮೃದ್ಧಿಯನ್ನು ಕಂಡು ಇಲ್ಲಿಯೇ ಇದ್ದು ಬಿಟ್ಟರು. ದಕ್ಷಿಣ ದೇಶದಲ್ಲಿ ಈ ಇಸ್ಲಾಂ ಮತದ ಪ್ರಸಾರ ಹಾಗೂ ಪ್ರಭಾವ ಪ್ರಾರಂಭವಾದದ್ದು ರಾಷ್ಟ್ರಕೂಟರ ಕಾಲದಿಂದ. ಇವರಿಗೆ ತಮ್ಮದೇ ಆದ ನಿಯಮಾಚರಣೆಗಳಿದ್ದರೂ ಇಲ್ಲಿಯ ಜನತೆ ಯೊಂದಿಗೆ ಕೂಡಿ ಬಾಳ ಹತ್ತಿದರು. ಬಹಮನಿ ಸುಲ್ತಾನರ ಕಾಲಕ್ಕೆ ಬೀದರ ನಗರ ಸೂಫೀ ಸಂತರ ಪ್ರಸಿದ್ಧ ಕೇಂದ್ರವಾಯಿತು. ಬಂದೇ ನವಾಜ ಅಹಮ್ಮದಶಹನ ಗುರುವಾಗಿದ್ದನು. ಈ ಅಹಮ್ಮದಶಹನ ಕಾಲಕ್ಕೆ ವಿದೇಶಗಳಿಂದ ಸುಪ್ರಸಿದ್ಧ ಸೂಫೀ ಸಂತರು ಬೀದರಕ್ಕೆ ಬಂದರು, ಇರಾಣ ದೇಶದ ಕೀರ್ಮಾನದಿಂದ ಬಂದ ಸೂಫೀ· ಸಂತರು ಬೀದರದ ಸುಲ್ತಾನನ ಆಶ್ರಯ ಪಡೆದಿದ್ದರು. ಇಸ್ಲಾಂ ಮತದ ತತ್ವಗಳನ್ನು ಈ ಸೂಫೀ ಸಂತರು ದಕ್ಷಿಣ ದೇಶದಲ್ಲೆಲ್ಲಾ ಪ್ರಸಾರ ಮಾಡಿದರು. ಒಬ್ಬನೇ ದೇವರು –ಆತನೇ 'ಅಲ್ಲಾ' ಆತನಲ್ಲಿ ನಂಬಿಕೆ ಇಡಬೇಕು. ಎಲ್ಲರೊಡನೆಯೂ ಪ್ರೀತಿಯಿಂದಿರ ಬೇಕ ತ್ಯಾಗಮಯಿಯಾಗಿರಬೇಕು. ಈ ಎಲ್ಲಾ ಹೇಳಿಕೆಗಳು ಅವರ ವಾಗಿದ್ದವು. ಬಸವಕಲ್ಯಾಣದ ತಾಜುದ್ದೀನ, ಭಾಲ್ಕಿ ತಾಲೂಕಿನ ಘೋಡವಾಡಿಯ ಸಯ್ಯದ ಇಸ್ಮಾಯಿಲ್‌ಖಾದ್ರಿ, ಬೀದರದ ಮುಲ್ತಾನಿ ಪಾಶಾ ಮುಂತಾದ ಪ್ರಸಿದ್ಧ ಸೂಫೀ ಸಂತರು ಇಲ್ಲಿಯ ಭಾಗದ ಜನರ ಮೇಲೆ ಇಸ್ಲಾಂ ಮತದ ಪ್ರಭಾವ ಬೀರಿದರು. ಅಂದಿನ ಆ ಪರಂಪರೆಯನ್ನು ಈ ಜಿಲ್ಲೆಯಲ್ಲಿ ಇಂದಿಗೂ ಕಾಣ ಬಹುದಾಗಿದೆ.

ಸಿಕ್ಖರ ಪಂಥ :—

ಗುರುನಾನಕರು ಹದಿನೈದನೆಯ ಶತಮಾನದಲ್ಲಿ ಬೀದರಕ್ಕೆ ಬಂದಿದ್ದರೆಂದು ತಿಳಿದು ಬರುತ್ತದೆ. ಆ ಕಾಲಕ್ಕೆ ಅವರು ಬೀದರದ ಹೊರಗಡೆ ತಗ್ಗಾದ ಪ್ರದೇಶದಲ್ಲಿ ತಂಗಿದ್ದರಂತೆ. ತಮ್ಮ ಯೋಗ ಶಕ್ತಿಯಿಂದ ಒಂದು ನೀರಿನ ಜರಿಯನ್ನು ಮಾಡಿದರಂತೆ. ಅದೇ ಇದು ಪ್ರಸಿದ್ಧವಾಗಿರುವ ಪ್ರೇಕ್ಷಣೀಯ ಸ್ಥಳ ಗುರುನಾನಕ ಝರಾ. ಆಗ ಬಂದ ಗುರುನಾನಕರು ಈ ಭಾಗದಲ್ಲಿ ಸಿಕ್ಖ ಪಂಥದ ಬೆಳವಣಿಗೆಗೆ ಕಾರಣರಾಗಿದ್ದಾರೆ. ಇಂದು ದೇಶದ ಹಲವಾರು ಭಾಗಗಳಿಂದ ಸಿಕ್ಖರು ಈ ಮಂದಿರಕ್ಕೆ ಬರುತ್ತಾರೆ,ತಮ್ಮದೇ ಆದ ನೇಮ ಆಚರಣೆ ಗಳನ್ನು ಇಲ್ಲಿಯ ಸಿಕ್ಖರು ಆಚರಿಸುತ್ತಾರೆ. ಈ ಸಿಕ್ಖ ಮಂದಿರಕ್ಕೆ ಸಾಕಷ್ಟು ಜನ ಹಿಂದೂ-ಮುಸ್ಲೀಂರೂ ಹೋಗುತ್ತಾರೆ.

ಆರ್ಯ ಸಮಾಜ :—

ಬೀದರ ಜಿಲ್ಲೆಯ ಆರ್ಯ ಸಮಾಜದ ಪ್ರಭಾವವೂ ಕಂಡು ಬರುತ್ತದೆ. ಹಳ್ಳಿಖೇಡದ ಬನಸಿಲಾಲ, ಶಾಮಲಾಲ, ಚಿಟಗುಪ್ಪಾದ ಕರಿಬಸಪ್ಪ ಮತ್ತು ವಿಠಲರಾವ ಕುಕಡಾಲ ಈ ಮುಂತಾದವರೆಲ್ಲಾ ಈ ಜಿಲ್ಲೆಯಲ್ಲಿ ಧರ್ಮ-ಸಂಸ್ಕೃತಿಯ ಬಗೆಗೆ ಪರಿಶ್ರಮಿಸಿದವರು. ಇವರೆಲ್ಲಾ ಆರ್ಯ ಸಮಾಜದ ವಿಚಾರಗಳನ್ನು ಜನತೆಯಲ್ಲಿ ಪ್ರಚಾರ ಮಾಡಿದವರು. ಸಾಮಾಜಿಕ-ಧಾರ್ಮಿಕ ಸುಧಾರಣೆಯಲ್ಲಿ ಆರ್ಯಸಮಾಜದವರ ಪಾತ್ರವು ಪ್ರಮುಖವಾಗಿದೆ. ಈ ಸಮಾಜ ದವರು ಜಾತಿ ಭೇದಗಳನ್ನು ಬಿಟ್ಟುಕೊಟ್ಟು ಒಂದಾಗಿ ಬಾಳಲು ಕಲಿಸಿಕೊಟ್ಟವರು. ಇಂದಿಗೂ ಈ ಜಿಲ್ಲೆಯಲ್ಲಿ ಈ ಸಮಾಜದ ಜನ ಇದ್ದಾರೆ.

ಇಷ್ಟಲ್ಲದೆ ಆನಂದ ಸಂಪ್ರದಾಯ, ರಾಮದಾಸಿ ಪಂಥ, ಸಕಲಮತ ಪಂಥ, ವೈಷ್ಣವ ಮತ ಇನ್ನೂ ಮುಂತಾದ ಮತ ಧರ್ಮಗಳು ಈ ಜಿಲ್ಲೆಯಲ್ಲಿ ಪ್ರಚಲಿತದಲ್ಲಿದ್ದವು. ಇಂದಿಗೂ ಕೂಡ ಕೆಲ ಮತಗಳು ಪ್ರಚಲಿತದಲ್ಲಿವೆ. ಈ ಜಿಲ್ಲೆಯಲ್ಲಿ ಮತ ಧರ್ಮಗಳ ಬಗೆಗೆ ಅತ್ಯಂತ ದೊಡ್ಡ ಕಾದಾಟವಾಗಿದ್ದು ಹನ್ನೆರಡನೆಯ ಶತ ಮಾನದಲ್ಲಿ ಶರಣರುದಯದ ಪೂರ್ವದಲ್ಲಿ.

ವಿವಿಧತೆಯಲ್ಲಿ ಏಕತೆ :—

ಬೀದರ ಜಿಲ್ಲೆಯ ಧರ್ಮ ಸಂಸ್ಕೃತಿಯ ಬಗೆಗೆ ಹೇಳುವ ಒಂದು ಮುಖ್ಯ ಮಾತೆಂದರೆ-ಇಲ್ಲಿ ಕಾಣುವುದು 'ವಿವಿಧತೆಯನ್ನು ಏಕತೆಯಲ್ಲಿ' ಶೈವ, ವೀರಶೈವ, ಮುಸ್ಲೀಂ, ಸಿಕ್ಖ, ಇಂತಹ ಹಲವಾರು ಮತ ಧರ್ಮಗಳು, ನಡೆ-ನುಡಿಗಳು ಬೇರೆ ಬೇರೆಯಾಗಿ ಕಂಡು ಬಂದರೂ ಕೂಡ ಈ ಮತ-ಧರ್ಮಗಳ ಹಿಂದಿರುವ ಉದ್ದೇಶ ಮಾತ್ರ ಒಂದೇಯಾಗಿದೆ. ಒಂದು ಊರಿಗೆ ಹೋಗಲು ಹಲವಾರು ರಸ್ತೆಗಳಿದ್ದರೂ ಅವೆಲ್ಲವುಗಳು ತಲುಪುವದು ಮಾತ್ರ ಅದೇ ಊರನ್ನು. ಈ ರೀತಿ ಬೀದರ ಜಿಲ್ಲೆಯಲ್ಲಿ ಅನೇಕ ಮತದವರ ಹಲವಾರು ಧರ್ಮಗಳ ಪ್ರಸಾರ-ಪ್ರಭಾವ ಇದ್ದರೂ ಕೂಡ ಅವರಲ್ಲಿ ಐಕ್ಯತೆ ಕಂಡುಬರುತ್ತದೆ.

ಹಿಂದೂ-ಮುಸ್ಲೀಂ ಭಾಯೀ-ಭಾಯಿ ಸಂಬಂಧ ಇಲ್ಲಿ ಇಂದಿಗೂ ಉಳಿದುಕೊಂಡು ಬಂದಿದೆ. ಇತ್ತೀಚೆಗೆ ಜಾತಿಯ ಬಗೆಗಿದ್ದ ಮಡಿವಂತಿಕೆ ಕಡಿಮೆಯಾಗಿ ಎಲ್ಲ ಜಾತಿಯವರೊಡನೆ ಸಂಬಂಧಗಳು ನಡೆಯುತ್ತಿವೆ. ಹಿಂದಿನ ಪರಂಪರೆಯನ್ನು ನೋಡುವುದಾದರೆ ಆಯಾ ಅರಸರ ಕಾಲದಲ್ಲಿಯ ಪರಿಸ್ಥಿತಿಗನು

ಗುಣವಾಗಿ, ಆ ಕಾಲಕ್ಕೆ ಪ್ರಚಲಿತದಲ್ಲಿರುವ ಧರ್ಮದ ಪ್ರಭಾವ ಕ್ಕೊಳಗಾಗಿ ಈ ಜಿಲ್ಲೆಯ ಸಂಸ್ಕೃತಿ ಅರಳಿನಿಂತಿದೆ. ಈ ಜನರ ಧಾರ್ಮಿಕ ಸಹಿಷ್ಣು ಪರಂಪರೆ ಈ ಜಿಲ್ಲೆಯ ಸಾಂಸ್ಕೃತಿಕ ಹಿರಿಮೆಗೆ ಹಚ್ಚಿಟ್ಟ ನಂದಾದೀಪವಾಗಿದೆ.

ಶರಣಸಂಸ್ಕೃತಿಯ ಪ್ರಭಾವ-ಮಹತ್ವವನ್ನು ಹೊತ್ತು ನಿಂತ ಬೀದರ ಜಿಲ್ಲೆ ಈ ದೃಷ್ಟಿಯಿಂದ ಅತ್ಯಂತ ಪ್ರಮುಖ ಸ್ಥಾನ ಪಡೆಯುತ್ತದೆ. ಶಿವಶರಣರು ನಡೆದಾಡಿದ ಈ ಜಿಲ್ಲೆಯ ನೆಲ ಪವಿತ್ರವಾದುದು. ಸಕಲ ಮತ-ಪಂಥದವರನ್ನೆಲ್ಲಾ ಒಂದುಗೂಡಿಸಿ ಕೊಂಡು ಒಕ್ಕಟ್ಟಿನಿಂದ ಹೋರಾಟ ಮಾಡಿದ ಅವರ ಪ್ರಯತ್ನ ಈ ಜಿಲ್ಲೆಯ ಇಂದಿನ ಜನತೆಗೆ ಆದರ್ಶನೀಯವಾಗಿದೆ. ಆ ಭವ್ಯ ಸಂಸ್ಕೃತಿಯ ಬೆಳಕಿನಲ್ಲಿ ಈ ಜಿಲ್ಲೆ ಬೆಳಗುತ್ತಿದೆ.

೩. ಜನಾಂಗಗಳು-ಜನಜೀವನ-ಭಾಷೆ

ಜನಾಂಗಗಳು:—

ಆರ್ಯ-ದ್ರಾವಿಡರ ಕಾಲದಿಂದಲೂ ಈ ಜಿಲ್ಲೆಯಲ್ಲಿ ಅನೇಕ ಜನಾಂಗಗಳಿದ್ದುದು ಪ್ರಾಚೀನ ಅವಶೇಷಗಳಿಂದ ತಿಳಿದು ಬರುತ್ತದೆ. ಅಂದಿನಿಂದ ಇಂದಿನ ವರೆಗೂ ಇಲ್ಲಿ ವಿವಿಧ ಜನಾಂಗ ಗಳು ನೆಲೆಸಿವೆ. ಹಲವಾರು ಕೋಮುಗಳು ಮತ್ತು ಒಳಪಂಗಡ ಗಳೂ ಇವೆ. ವಿವಿಧ ಕೋಮುಗಳಲ್ಲಿ ಈ ಜಿಲ್ಲೆಯ ಜನತೆ ಹಂಚಿ ಹೋಗಿದೆ. ಅವರಲ್ಲಿ ಮುಖ್ಯವಾಗಿ ವೀರಶೈವರು (ಲಿಂಗಾಯತರು), ಮುಸಲ್ಮಾನರು, ಶೈವಬ್ರಾಹ್ಮಣರು, ವೈಷ್ಣವರು, ಕ್ರಿಶ್ಚಿಯನ್ನರು,

ಮರಾಠರು, ಕುರುಬರು, ವೈಶ್ಯರು ಮತ್ತು ಹಿಂದುಳಿದ ಹರಿಜನ-ಗಿರಿಜನರು ಇತ್ಯಾದಿ.

ವೀರಶೈವರು:—

ಈ ಜಿಲ್ಲೆಯಲ್ಲಿ ವೀರಶೈವರ ಸಂಖ್ಯೆಯೇ ಹೆಚ್ಚು. ಒಕ್ಕಲುತನ ಇವರ ಮೂಲಕಾಯಕ. ಕೆಲವರು ವ್ಯಾಪಾರೋದ್ಯಮಗಳನ್ನು ಮಾಡುತ್ತಾರೆ. ಜಂಗಮರ ಕೆಲಸ ಧರ್ಮಪ್ರಸಾರ. ಈ ಜಿಲ್ಲೆಯಲ್ಲಿ ಬೆಳಗಿದ ಬಸವ ಜ್ಯೋತಿಯು ಬೆಳಕೇ ಇವರೆಲ್ಲರಿಗೆ ದಾರಿದೀಪ. ಇಲ್ಲಿನ ವೀರಶೈವರು ಪಂಚಪೀಠದಲ್ಲಿ ನಂಬಿಕೆಯಿಟ್ಟವರಲ್ಲ. ಅಡ್ಡಪಲ್ಲಕ್ಕಿ ಮೆರವಣಿಗೆ ಇವರಿಗೆ ಸೇರದು. ಬಸವಣ್ಣನವರು ಹೇಳಿದಂತೆ ಕಾಯಕಕ್ಕೆ ಪ್ರಾಧಾನ್ಯತೆ ಕೊಟ್ಟು, ಇಷ್ಟಲಿಂಗ ಧರಿಸಿದ ಯಾವುದೇ ಸದಾಚಾರಿಯೊಡನೆ ಇವರು ಸಂಬಂಧ ಮಾಡುತ್ತಾರೆ. ಹೀಗಾಗಿ ಇಲ್ಲಿ ಹುಟ್ಟಿನೊಡನೆ ಬಂದಾತನಷ್ಟೇ ವೀರಶೈವನಾಗಿರದೆ, ಇಷ್ಟಲಿಂಗ ಧರಿಸಿದ ಯಾವುದೇ ಸದಾಚಾರಿ ವೀರಶೈವನೆಂದು ಪರಿಗಣಿಸಲ್ಪಡುತ್ತಾನೆ. ದಾಸೋಹಭಾವ, ಲಿಂಗನಿಷ್ಠೆ, ಸಮತಾಭಾವ ಸಕಲ ವೀರಶೈವರಲ್ಲಿದೆ. ಇಲ್ಲಿಯ ವೀರಶೈವರಲ್ಲಿ ಶ್ರೀಮಂತರಿಗಿಂತ ಬಡವರೇ ಹೆಚ್ಚು. ಭಕ್ತಿಭಾವದಲ್ಲಿ ಬಡತನವಿಲ್ಲ. ಜಿಲ್ಲೆಯ ಹಲವಾರು ಧಾರ್ಮಿಕ-ಸಾಮಾಜಿಕ ಸುಧಾರಣೆಗೆ ಈ ಜನ ಟೊಂಕಕಟ್ಟಿ ನಿಂತಿದ್ದಾರೆ.

ಮುಸ್ಲಿಮರು:—

ಈ ಜಿಲ್ಲೆಯಲ್ಲಿ ಮುಸ್ಲಿಮರ ಸಂಖ್ಯೆಯೂ ಹೆಚ್ಚು. ಬಹಮನಿ ಸುಲ್ತಾನರ ಕಾಲಕ್ಕೆ ಇರಾಣ ಮುಂತಾದ ಕಡೆಗಳಿಂದ ಬಂದು ನೆಲಸಿದ ಅವರು ಈಗ ಬೀದರ ಜಿಲ್ಲೆಯವರೇ ಆಗಿದ್ದಾರೆ.

ಇಂತಹುದೇ ಸೀಮಿತ ವೃತ್ತಿಯಿಲ್ಲ. ಅನೇಕ ವೃತ್ತಿಗಳನ್ನು ಮಾಡುತ್ತಾರೆ. ತೀರ ಬಡವರಿದ್ದವರ ಸಂಖ್ಯೆಯೇ ಹೆಚ್ಚು. ರಿಕ್ಷಾ ಎಳೆಯುವ ವೃತ್ತಿ ಇವರಲ್ಲಿ ಸಾಮಾನ್ಯ. ಸೈಯದ, ಶೇಖ, ಮುಂತಾದ ಒಳಪಂಗಡಗಳೂ ಉಂಟು. ಸುನ್ನೀ ಪಂಥದವರು ಬಹಳ ಸಂಖ್ಯೆಯಲ್ಲಿದ್ದಾರೆ. ಮಸೀದಿಗಳಲ್ಲಿ ಎಲ್ಲರೂ ನಮಾಜು ಮಾಡುತ್ತಾರೆ. ಬಿದರಿ ಕಲಾವಸ್ತುಗಳನ್ನು ಕೆಲವರು ತಯಾರಿಸುತ್ತಾರೆ. ಹಿಂದೂಗಳೊಂದಿಗೆ ಸಾಮರಸ್ಯದಿಂದ ನಡೆದುಕೊಳ್ಳುವ ಈ ಜನಾಂಗದವರಲ್ಲಿ ಒಕ್ಕಟ್ಟು ಹೆಚ್ಚು.

ಬ್ರಾಹ್ಮಣರು:— ಇಲ್ಲಿಯ ಬ್ರಾಹ್ಮಣರಲ್ಲಿ ಹೆಚ್ಚಾಗಿ ಶೈವಬ್ರಾಹ್ಮಣರು. ಶಂಕರಾಚಾರ್ಯರ ಅನುಯಾಯಿಗಳು. ಏನು ಬಿಟ್ಟರೂ ಪರಂಪರೆ ಬಿಡಲಾರರು. ಮಡಿ-ಮೈಲಿಗೆ ಕೆಲವಯಸ್ಸಾದ ಜನರಲ್ಲಿ ಕಂಡುಬಂದರೆ ಸುಧಾರಿಸಿದ ಕಲಿತ ಯುವಕರಲ್ಲಿ ಅದು ಕಡಿಮೆ. ಸರಕಾರಿ ಸೇವೆಯಲ್ಲಿ ಹೆಚ್ಚು ಜನರಿದ್ದಾರೆ. ದೀಕ್ಷಿತ ಮನೆತನದವರು ಧರ್ಮಾಚರಣೆಯಲ್ಲಿ ಹೆಸರುವಾಸಿ. ಬೀದರದಲ್ಲಿ ರಾಘವೇಂದ್ರ ಸ್ವಾಮಿಗಳ ಮಠವಿದೆ. ರಾಘವೇಂದ್ರ ಸ್ವಾಮಿಗಳ ಅನುಯಾಯಿಗಳಿದ್ದಾರೆ.

ಕ್ರಿಶ್ಚಿಯನ್‌ರು:— ೧೮೮೬ ರಿಂದಲೇ ಈ ಜಿಲ್ಲೆಯಲ್ಲಿ ಕ್ರಿಶ್ಚಿಯನ್‌ರ ಧರ್ಮ ಪ್ರಸಾರಕಾರ್ಯ ಪ್ರಾರಂಭವಾಗಿದೆ. ಇಲ್ಲಿ ಪ್ರೊಟೆಸ್ಟೆಂಟರ ಸಂಖ್ಯೆ ಅಧಿಕ. ಅನೇಕ ಚರ್ಚುಗಳು ಇವೆ. ಕ್ರಿಸ್ತನ ಮೇಲೆ ಅಚಲ ನಂಬಿಕೆ. ಈ ಜನ ಚರ್ಚಿಗೆ ತಪ್ಪದೇ ಹೋಗುತ್ತಾರೆ. ಇವರು ಸ್ಥಾಪಿಸಿದ ಶಿಕ್ಷಣ ಸಂಸ್ಥೆಗಳೂ ಇವೆ. ಎನ್. ಎಫ್. ಎಚ್. ಎಸ್. ವಿದ್ಯಾಸಂಸ್ಥೆ ಮುಖ್ಯವಾದುದು. ಸರಕಾರಿ ಸೇವೆಯಲ್ಲಿ

ಒಲವು ಜಾಸ್ತಿ. ಇವರಲ್ಲಿ ಮತಾಂತರ ಹೊಂದಿದವರ ಸಂಖ್ಯೆಯೇ ಹೆಚ್ಚು. ಇವರಲ್ಲಿ ವಿಧವಾ-ವಿವಾಹ ಪ್ರಚಲಿತದಲ್ಲಿದೆ. ಎಲ್ಲರೂ ಏಸುವಿನ ಮಕ್ಕಳೆಂದು ತಿಳಿದ ಈ ಜನ ಬಹಳ ದಯಾಪರ ರಾಗಿದ್ದಾರೆ.

ಕುರುಬರು:— ಜಿಲ್ಲೆಯ ಅನೇಕ ಹಳ್ಳಿಗಳಲ್ಲಿ ಕುರುಬ ರಿದ್ದಾರೆ. ಅವರ ಮುಖ್ಯ ಉದ್ಯೋಗ ಒಕ್ಕಲುತನ ಮತ್ತು ಕಂಬಳಿ ನೇಯುವದು, ಕುರಿಗಳ ಸಾಕಣೆ ಮತ್ತು ಕಂಬಳಿ ಮಾರಾಟ ಹೆಚ್ಚು. ಈ ಜಿಲ್ಲೆಯಲ್ಲಿ ತಯಾರಾಗುವ ಇವರ ಕಂಬಳಿಗಳು ಪ್ರಸಿದ್ಧವಾಗಿವೆ. ಇವರಲ್ಲಿಯೂ ಅನೇಕ ಪಂಗಡಗಳುಂಟು. ಖಂಡೋಬಾ ಇವರ ಮೂಲ ದೇವರು.

ಕೊಮಟಿಗರು :– ವ್ಯಾಪಾರವನ್ನೇ ಮೂಲ ಉದ್ಯೋಗ ವನ್ನಾಗಿ ಮಾಡಿಕೊಂಡ ಕೊಮಟಿಗರು ಈ ಜಿಲ್ಲೆಯಲ್ಲಿ ಹಲವಾರು ಜನರಿದ್ದಾರೆ. ಇವರ ಸಂಸ್ಕೃತಿ ಆಚಾರ-ವಿಚಾರ ಬ್ರಾಹ್ಮಣರಂತೆ. ಕೆಲವು ಕೊಮಟಿಗರು ಲಿಂಗ ಧರಿಸುತ್ತಾರೆ. ಹಣ ಕೂಡಿಸುವ ಕೆಲಸದಲ್ಲಿ ಇವರು ಪರಿಣಿತರು. ಸಣ್ಣ–ಸಣ್ಣ ವ್ಯಾಪಾರ ಪ್ರಾರಂಭಿಸಿ ಅನೇಕರು ಶ್ರೀಮಂತರಾಗಿದ್ದಾರೆ.

ಈ ಜನಾಂಗಗಳಲ್ಲದೆ ಇರಾಣಿ ಹಾಗೂ ಹಿಂದುಳಿದ ಜನಾಂಗದವರಾದ ಭೋವಿಗಳು, ಮಾಂಗ ಜಾತಿಯವರು, ಹರಿ-ಜನರು ಇದ್ದಾರೆ. ಹರಳಯ್ಯ ಮತ್ತು ಚೆನ್ನಯ್ಯನ ಅನುಯಾಯಿ ಗಳಾದ ಸಮಗಾರರೂ ಇದ್ದಾರೆ. ಇವರು ವಿಭೂತಿ ಧರಿಸುತ್ತಾರೆ. ಢೋರರು ತೊಗಲಿನ ಕೆಲಸ ಮಾಡುವದರಲ್ಲಿ ನಿರತರು. ಇವರಲ್ಲಿ. ಅನೇಕರು ಬೌದ್ಧ ಧರ್ಮ ಸ್ವೀಕರಿಸಿದ್ದಾರೆ. ಹೀಗೆ ವಿವಿಧ ಜನಾಂಗ

ದವರು ಈ ಜಿಲ್ಲೆಯಲ್ಲಿ ತಮ್ಮದೇ ಆದ ಆಚಾರ-ವಿಚಾರಗಳೊಂದಿಗೆ ಬಾಳುತ್ತಿದ್ದಾರೆ. ಜನಾಂಗ-ಜನಾಂಗದವರಲ್ಲಿನ ತಾರತಮ್ಯ ಈಗ ಕಡಿಮೆಯಾಗಿದೆ.

ಜನಜೀವನ :

೧೯೭೧ ರ ಜನಗಣತಿಯ ಪ್ರಕಾರ ಈ ಜಿಲ್ಲೆಯ ಒಟ್ಟು ಜನಸಂಖ್ಯೆ ೮,೩೪,೦೫೯. ಇದರಲ್ಲಿ ೭,೦೪,೯೨ ಜನರು ಹಳ್ಳಿಗಳಲ್ಲಿ ವಾಸಿಸುವವರು. ಇತ್ತೀಚೆಗೆ ಜನಸಂಖ್ಯೆ ಇನ್ನೂ ಹೆಚ್ಚಿದೆ. ನಗರಕ್ಕೆ ಉದ್ಯೋಗ ಅರಸಿಕೊಂಡು ಸಾಕಷ್ಟು ಜನ ಬರುತ್ತಾರೆ.

ಸಾಮಾನ್ಯವಾಗಿ ಈ ಜಿಲ್ಲೆಯ ಜನಜೀವನ ಸಮೃದ್ಧವಾದುದು. ಆರೋಗ್ಯವಂತರಾದ ಈ ಜನ ಸದೃಢಕಾಯರು. ಕೆಲವರು ಗೋದಿಗೆಂಪು ಬಣ್ಣದವರಿದ್ದರೆ ಮತ್ತೆ ಕೆಲವರು ಸಾದಗಪ್ಪು, ಪ್ರಾಮಾಣಿಕರು, ನಂಬಿಗಸ್ಥರಾದ ಇಲ್ಲಿಯ ಜನ ನಮ್ಮ ಸಂಸ್ಕೃತಿಯ ಪ್ರತೀಕದಂತಿದ್ದಾರೆ.

ಈ ಜಿಲ್ಲೆಯ ಜನರ ವೇಷಭೂಷಣದ ಬಗೆಗೆ ಹೇಳಬೇಕೆಂದರೆ, ಸಾಮಾನ್ಯವಾಗಿ ಹೆಚ್ಚು ಜನ ಗಂಡಸರು ಧೋತರ ಉಟ್ಟು ಶರ್ಟ ಹಾಕುತ್ತಾರೆ. ಟೊಪ್ಪಿಗೆ ಹಾಕುವವರ ಸಂಖ್ಯೆ ಕಡಿಮೆ. ಹೆಂಗಸರಲ್ಲಿ ಹೆಚ್ಚು ಜನರು ಸೀರೆಯನ್ನುಟ್ಟು ಗಂಡಸರಂತೆ ಕಚ್ಚೆ ಹಾಕುತ್ತಾರೆ. ಹಳ್ಳಿಯ ಹೆಂಗಸರು ಆಭರಣಗಳನ್ನು ಧರಿಸುತ್ತಾರೆ. ಕಲಿತ ಹೆಂಗಳೆಯರು ಈ ಆಭರಣಗಳ ಗೊಡವೆಗೆ ಹೋಗದೆ ಕಿವಿಯಲ್ಲಿ ಸಾದಾ ರಿಂಗ್ ಮಾತ್ರ ಹಾಕಿರುತ್ತಾರೆ. ಮುಸ್ಲಿಂ ಹೆಂಗಳೆಯರು ಬುರಖಾ ಹಾಕಿಕೊಂಡಿರುತ್ತಾರೆ. ಹೆಚ್ಚು ಹೆಂಗಳೆಯರು ಕೈ ಕಾಲ ಬೆರಳಿನ ಉಗುರುಳಿಗೆ ಮಧುರಂಗಿ ಹಚ್ಚಿ

ಕೊಂಡಿರುತ್ತಾರೆ. ಹಳ್ಳಿಯ ಹೆಂಗಳೆಯರಲ್ಲಿ ಹಣೆಯಲ್ಲಿ ಕುಂಕುಮ ಬೊಟ್ಟು ಸಾಮಾನ್ಯ. ತಮ್ಮ ಸೀರೆಯಂಚಿನಲ್ಲಿ ಕಸೂತಿ ಹಾಕಿ ಕೊಂಡಿರುತ್ತಾರೆ. ಇಲ್ಲಿಯ ಹೆಚ್ಚು ಜನರು ಕಲಾಪ್ರಿಯರು.

ವೀರಶೈವರು ವಿಭೂತಿಯನ್ನು ಧರಿಸಿದರೆ ಮುಸ್ಲಿಮರು ಗಡ್ಡಬಿಟ್ಟಿರುತ್ತಾರೆ. ಜಾತ್ರೆ, ಸಂಭ್ರಮದ ಸಮಯದಲ್ಲಿ ಗಂಡಸು ಹೆಂಗಸರು ಭರ್ಜರಿಯಾಗಿ ಉಡುಪು ಧರಿಸುತ್ತಾರೆ. ಈ ಜಿಲ್ಲೆಯ ಜನರಲ್ಲಿ ಎದ್ದು ಕಾಣುವ ಅಂಶವೆಂದರೆ, ಹೆಚ್ಚು ಜನ ಗಂಡಸರು ತಮ್ಮ ಮೆಟ್ಟುಗಳನ್ನು ನಿಜಾಮನ ಬೂಟುಗಳಂತವುಗಳನ್ನೇ ಉಪಯೋಗಿಸುತ್ತಾರೆ. ಹಳ್ಳಿಯ ಜನರೂ ಕೂಡ ಇಂತಹವುಗಳನ್ನೇ ಮೆಟ್ಟುತ್ತಾರೆ. ನಿಜಾಮನ ಪ್ರಭಾವ ಈ ಜಿಲ್ಲೆಯ ಜನರ ವೇಷ-ಭೂಷಣಗಳ ಮೇಲೆ ಸಾಕಷ್ಟಿದೆ. ಕೆಲವರು ಅತ್ತರ್ (ಸುವಾಸನೆ ಎಣ್ಣೆ) ಹಚ್ಚಿಕೊಳ್ಳುತ್ತಾರೆ. ಈಗ ನಾಗರಿಕತೆ ಪ್ರತಿ ಹಳ್ಳಿಗೂ ಮುಟ್ಟಿ ಹತ್ತಿದೆ. ಉಡಿಗೆ-ತೊಡಿಗೆಗಳಲ್ಲಿ ಸುಧಾರಣೆಯಾಗಿವೆ.

ಈ ಜಿಲ್ಲೆಯ ಮಹಿಳೆಯರ ಬಗೆಗೆ ಒಂದೆರಡು ಮಾತು ಹೇಳುವದಾದರೆ, ಇವರ ಪಾತ್ರ ಇಲ್ಲಿ ಅತ್ಯಂತ ಪ್ರಾಮುಖ್ಯ ವಾಗಿದೆ. ಧಾರ್ಮಿಕ-ಸಾಂಸ್ಕೃತಿಕ-ಸಾಹಿತ್ಯಿಕ ಮತ್ತು ರಾಜಕೀಯ ಈ ಸಕಲ ರಂಗಗಳಲ್ಲೂ ಇಲ್ಲಿಯ ಮಹಿಳೆಯ ಪ್ರಭಾವ ಮೊದಲಿನಿಂದಲೂ ಇದ್ದು ಆಕೆ ನವಚೇತನದ ಶಕ್ತಿಯಾಗಿದ್ದಾಳೆ. ಶೂರತನದಲ್ಲಿ-ಪರಾಕ್ರಮದಲ್ಲಿ ಹಿಂದಿನ ಸಾಮಂತ ರಾಜರ ಪತ್ನಿಯರು ಹೆಸರುವಾಸಿಯಾಗಿದ್ದರು. ತಮ್ಮ ಪತಿಯೊಡಗೂಡಿ ಹೋರಾಡಿ ಅಸುನೀಗಿದ್ದಾರೆ.

ಅಂದಿನ ಕ್ಷಾತ್ರತೇಜ ಈ ಜಿಲ್ಲೆಯ ಮಹಿಳೆಯರಲ್ಲಿ ಮುಂದು ವರಿದುಕೊಂಡು ಬಂದಿದೆ. ಚಾಲುಕ್ಯ ಅರಸ ವಿಕ್ರಮಾದಿತ್ಯನ ಪಟ್ಟ ಮಹಿಷಿ ಚಂದಲ ದೇವಿಯು ಅಭಿನಯ ಶಾರದೆಯೆಂದು ಬಿರುದು ಪಡೆದಿದ್ದಳು. ಆಕೆಗೆ ನೃತ್ಯ ಕಲೆಯಲ್ಲಿ ಅತ್ಯಂತ ಅಭಿರುಚಿಯಿತ್ತು.

ಹನ್ನೆರಡನೆಯ ಶತಮಾನದ ಮಹಿಳಾ ಜ್ಯೋತಿ-ಮಹಾ ದೇವಿಯಕ್ಕ. ಅಕ್ಕನ ವಚನ ಸಾಹಿತ್ಯ ಈ ಜಿಲ್ಲೆಯ ಶ್ರೇಷ್ಠ ಕೊಡುಗೆ. ಸಚ್ಚಾರಿತ್ರದಿಂದ ಕೂಡಿದ ಈ ಜಿಲ್ಲೆಯ ಮಹಿಳೆಯರು ಶರಣ ಶರಣೆ ಯರು ಬಾಳಿಹೋದ ಈ ನಾಡಿಗೆ ಕೀರ್ತಿ ತಂದಿದ್ದಾರೆ-ತರುತ್ತಿ ದ್ದಾರೆ. ಬೇರೆ ಕಡೆಯಂತೆ ಈ ಜಿಲ್ಲೆಯ ಮಹಿಳೆ ವೈಜ್ಞಾನಿಕ ರಂಗ ದಲ್ಲಿ ಮುಂದುವರಿಯದಿದ್ದರೂ, ಸಾಹಿತ್ಯ-ಸಾಂಸ್ಕೃತಿಕ ರಂಗಗಳಲ್ಲಿ ಬೆಳಗುವ ಜ್ಯೋತಿಯಾಗಿದ್ದಾಳೆ

ಈ ಜಿಲ್ಲೆಯ ಮಹಿಳೆಯರು ಸುಂದರಿಯರೂ, ಆರೋಗ್ಯ ವಂತರೂ ಆಗಿದ್ದಾರೆ. ೧೯೭೮ ರಲ್ಲಿ ಬೀದರದಲ್ಲಿ ನಡೆದ ಕರ್ನಾಟಕ ರಾಜ್ಯಮಟ್ಟದ ಓಲಂಪಿಕ್ ಕ್ರೀಡೆಗಳ ಬಹುಮನಿ ಸೌಂದರ್ಯ ಸ್ಪರ್ಧೆಯಲ್ಲಿ ಬೀದರದ ಅಕ್ಕಮಹಾದೇವಿ ಮಹಿಳಾ ಕಾಲೇಜಿನ ವಿದ್ಯಾರ್ಥಿನಿ ಕುಮಾರಿ ಅಜರಾ ರಾಜ್ಯಕ್ಕೆ ದ್ವಿತೀಯ ಸ್ಥಾನ ಪಡೆದಿದ್ದಾಳೆ. ಹೀಗೆ ಮಹಿಳೆಯರು ಮುಂದಿದ್ದಾರೆ.

ಈ ಜಿಲ್ಲೆಯ ಸಾಂಸ್ಕೃತಿಕ ಚಟುವಟಿಕೆಗಳು ಪ್ರಸಿದ್ಧ. ಜಿಲ್ಲೆಯ ಹಲವಾರು ಕಡೆ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಾಬಂದಿವೆ. ಎಲ್ಲ ಸಂದರ್ಭಗಳಲ್ಲೂ ವೇಷ ಹಾಕುವದು ಮತ್ತು ಹಲಗೆ ಬಡೆಯುವದು ಸಾಮಾನ್ಯ. ಕೋಲಾಟವನ್ನು ಗಂಡಸರು ಮತ್ತು ಹೆಂಗಸರೂ ಆಡುತ್ತಾರೆ. ಪುರುಷರು ವಿವಿಧ ಬಗೆಯ ವೇಷ ಹಾಕಿ ಕೋಲಾಟವಾಡುತ್ತಾರೆ. ಜಾನಪದ ಕಲೆ

ವೈವಿಧ್ಯ. ಭಜನೆ, ಬುಲಾಯಿಹಾಡು, ದೇವಿಹಾಡು, ಕುಟ್ಟುಪದ, ಬೀಸೂಪದ, ಬೀಗರಹಾಡು, ಹಂತೀಪದ, ಗೊಂದಲಿಗರ ಹಾಡು, ನಂದಿಕೋಲು, ಗೀಗೀಪದ ಮತ್ತು ಲಾವಣಿ ಈ ಮೊದಲಾದವುಗಳು ಮುಖ್ಯವಾದವುಗಳು.

ಬೀದರದಲ್ಲಿ 'ಅಕ್ಷಯ' ಕಲಾವಿದರ ಹವ್ಯಾಸಿ ನಾಟ್ಯ ಸಂಘ ವಿದೆ. ಡಾ. ಚಂದ್ರಶೇಖರ ಕಂಬಾರರ 'ಜೈಸಿದ್ಧನಾಯಕ' ಮತ್ತು ಅಂತಹ ಅನೇಕ ನಾಟಕಗಳನ್ನು ಈ ಕಲಾವಿದರು ಪ್ರಯೋಗಿಸಿ ದ್ದಾರೆ. ಡಾ.ಎಸ್.ಆರ್. ಕೊಂಡದ ಈ 'ಅಕ್ಷಯ' ಸಂಘದ ಅಧ್ಯಕ್ಷರಾಗಿ ಇಂತಹ ಚಟುವಟಿಕೆಗಳಿಗೆ ಕಾರಣರಾಗಿದ್ದಾರೆ. ಇತ್ತೀಚೆಗೆ ಸಮುದಾಯದವರು ಬೀದಿನಾಟಕ ಹಾಗೂ ರಂಗ ನಾಟಕಗಳನ್ನು ಪ್ರಯೋಗಿಸಿ ಮನರಂಜನೆ ಕೊಡುವದರ ಜತೆಗೆ, ಶೋಷಣೆ ಅನ್ಯಾಯ ಅತ್ಯಾಚಾರಗಳ ವಿರುದ್ಧ ಪ್ರತಿಭಟಿಸುವಂತೆ ಜನತೆಯನ್ನು ಎಚ್ಚರಿಸುತ್ತಿದ್ದಾರೆ. ಇದು ಸಮಾಜದ ಆರೋಗ್ಯದ ದೃಷ್ಟಿಯಿಂದ ಹಿತಕಾರಿ. ಹೀಗೆ ಇಲ್ಲಿಯ ಜನಜೀವನ ಸಮೃದ್ಧ ವಾಗಿದೆ. 'ಕಾರಂಜಾ' ನದಿ ಇಲ್ಲಿಯ ಜನಜೀವನಕ್ಕೆ ಆಸರೆಯಾಗುವ ದರಲ್ಲಿದೆ. ಆರ್ಥಿಕ ದೃಷ್ಟಿಯಿಂದ ಇನ್ನೂ ಸುಧಾರಿಸಬೇಕಾಗಿದೆ.

ಭಾಷೆ :– ವಿವಿಧ ಬಗೆಯ ಜನಾಂಗಗಳು ಇಲ್ಲಿರುವದರಿಂದ ಹಲವಾರು ಭಾಷೆಗಳಿರುವದು ಸಹಜ. ಬೀದರ ಗಡಿನಾಡಿನ ಜಿಲ್ಲೆ ಕರ್ನಾಟಕದ ತುತ್ತತುದಿ. ಆಂಧ್ರ ಹಾಗೂ ಮಹಾರಾಷ್ಟ್ರ ಅಕ್ಕ ಪಕ್ಕದ ರಾಜ್ಯಗಳು. ಅಂತೆಯೇ ಈ ಜಿಲ್ಲೆಯ ಭಾಷೆಯೂ ಕೂಡ ಸಮ್ಮಿಶ್ರವಾದುದು. ಉಳಿದ ಜಿಲ್ಲೆಗಳ ಭಾಷೆಗಳಿಗಿಂತ ಭಿನ್ನ ಹಾಗೂ ವೈಶಿಷ್ಟ್ಯಪೂರ್ಣ. ಕನ್ನಡ ಮಾತೃಭಾಷೆಯಾದರೂ ಉರ್ದು,ಹಿಂದಿ, ಮರಾಠಿ, ಭಾಷೆಗಳನ್ನಾಡುವ ಜನರಿದ್ದಾರೆ. ಕೆಲವೊಂದು ಕಡೆ

ತೆಲಗೂ ಆಡುತ್ತಾರೆ. ವ್ಯವಹಾರ ಉರ್ದು ಮತ್ತು ಮರಾಠಿ ಯಲ್ಲಿದ್ದರೆ ಲೆಕ್ಕಪತ್ರದ ಬರವಣಿಗೆ ಮೋಡಿಯಲ್ಲಿ. ಒಂದು ಕಾಲಕ್ಕೆ ಗಂಡುಮೆಟ್ಟಿನ ನಾಡೆಂದೂ, ಕ್ರಾಂತಿಕಹಳೆಯನ್ನೂದಿದ ಕೇಂದ್ರ ವೆಂದೂ ಇತಿಹಾಸ ಪ್ರಸಿದ್ಧವಾದ ಕಲ್ಯಾಣದಲ್ಲಿಂದು ಕನ್ನಡ ಉಳಿದಿರುವದೇ ಪುಣ್ಯ ಎನ್ನುವ ಸ್ಥಿತಿ ಇದೆ. ಜಿಲ್ಲೆಯಲ್ಲಿ ಹೆಚ್ಚು ಪ್ರಭಾವಿತವಿರುವ ಭಾಷೆಗಳೆಂದರೆ ಉರ್ದು ಮತ್ತು ಮರಾಠಿ. ಆದರೂ ಇಲ್ಲಿ ಅಚ್ಚಗನ್ನಡ ಜೀವಂತವಾಗಿದೆ. ಕುಡು, ಕೊಳ್ಳು, ಪಾರ, ಹೊಯ್, ಹೊತ್ತಾಳ, ಆಕೊ, ಮೊಳ, ಸಾಲಿಗ, ಮಗಾ ಇನ್ನೂ ಮುಂತಾದ ಅಚ್ಚಗನ್ನಡ ಪದಗಳನ್ನು ದಿನನಿತ್ಯದ ಬಳಕೆ ಯಲ್ಲಿ ಕಾಣಬಹುದಾಗಿದೆ.

ಇತ್ತೀಚೆಗೆ ಕನ್ನಡಕ್ಕೆ ಅಗ್ರಸ್ಥಾನ ಸಲ್ಲುತ್ತಿದೆ. ಆದರೆ ಹಿಂದಿನ ವಯಸ್ಸಾದ ಜನರು ಮಾತ್ರ ಅದೇ ಉರ್ದು-ಮರಾಠಿ ಆಡುತ್ತಾರೆ. ಉರ್ದು-ಹಿಂದಿ ಭಾಷೆಯಲ್ಲಿ ಪತ್ರಿಕೆಗಳಿವೆ. ಆದರೆ ಇದುವರೆಗೆ ಕನ್ನಡದಲ್ಲಿ ಪತ್ರಿಕೆಗಳೇ ಇರಲಿಲ್ಲ. ಈ ಜಿಲ್ಲೆಯಲ್ಲಿ ಮೊಟ್ಟಮೊದಲು ಕನ್ನಡ ವಾರ ಪತ್ರಿಕೆಯನ್ನು ನಡೆಸಿದ ಕೀರ್ತಿ ಬೀದರದ ನ್ಯೂ ಸಂಗಮ ಪ್ರಿಂಟಿಂಗ್ ಪ್ರೆಸ್‌ದ ಮಾಲಿಕರಾದ ಶ್ರೀಗುಣವಂತರಾವ ಪಾಟೀಲರದು. ಉರ್ದು-ಮರಾಠಿ-ಹಿಂದಿ ಭಾಷೆಗಳ ಹಾವಳಿ ಅತಿಯಾಗಿರುವಾಗ ಅವರು ಮೊಟ್ಟಮೊದಲು ಇಲ್ಲಿ 'ಕನ್ನಡ ರತ್ನ' ವೆಂಬ ವಾರ ಪತ್ರಿಕೆ ಪ್ರಾರಂಭಿಸಿದರು. ಅದು ಕೆಲಕಾಲ ನಡೆದು ಜನತೆಯ ಪ್ರೋತ್ಸಾಹ ಸಿಗದೆ ನಿಂತುಬಿಟ್ಟಿತು. ನಂತರ ಕೆ. ಕೃಷ್ಣ ಮೂರ್ತಿಯವರು 'ಬೀದರ ಟೈಮ್ಸ್' ವಾರ ಪತ್ರಿಕೆ ಪ್ರಾರಂಭಿಸಿ ಕೈಬಿಟ್ಟರು. ಒಂದು ವರ್ಷದ ಹಿಂದೆ ಎಂ. ಜಿ. ದೇಶಪಾಂಡೆ 'ಖ್ಯಾತಿ' ಎಂಬ ಕೈಬರಹದ ವಾರ ಪತ್ರಿಕೆ ಪ್ರಾರಂಭಿಸಿ ಕೆಲಕಾಲ

ನಡೆಸಿ ಕೈಬಿಟ್ಟರು. ಭಾಲ್ಕಿಯಿಂದ ಹೊರಡುತ್ತಿದ್ದ 'ಶಾಂತಿ ಕಿರಣ' ಮಾಸ ಪತ್ರಿಕೆ ಹಲವಾರು ವರ್ಷ ನಡೆದು ಒಂದು ವರ್ಷ ನಿಂತು ಬಿಟ್ಟಿತು. ಬೀದರ ಜಿಲ್ಲೆಯಲ್ಲಿ ಕನ್ನಡ ಪತ್ರಿಕೆಗಳೇ ಇಲ್ಲ ಎನ್ನುವ ಸಮಯದಲ್ಲಿ ಮತ್ತೆ ಗುಣವಂತರಾವ ಪಾಟೀಲ ಹಾಗೂ ಬಸವ ರಾಜ ಸಬರದ ಇವರ ಸಂಪಾದಕತ್ವದಲ್ಲಿ 'ಪಲ್ಲವಿ' ಯೆಂಬ ಹೊಸ ಕನ್ನಡ ವಾರ ಪತ್ರಿಕೆ ಪ್ರಾರಂಭವಾಯಿತು. ಇದಾದ ಕೆಲತಿಂಗಳು-ಗಳ ನಂತರ ನಿಂತುಹೋಗಿದ್ದ 'ಶಾಂತಿ ಕಿರಣ' ಪ್ರೊ. ಜಿ. ಬಿ. ವಿಸಾಜಿಯವರ ಸಂಪಾದಕತ್ವದಲ್ಲಿ ಮತ್ತೆ ಪ್ರಾರಂಭವಾಯಿತು. ಈಗ 'ಪಲ್ಲವಿ' ಜಿಲ್ಲೆಯ ನಾನಾಕಡೆ ಪಲ್ಲವಿಸಿ ನಾಡು-ನುಡಿಯ ಸೇವೆ ಮಾಡುತ್ತಲಿದೆ. ಅದೇ ರೀತಿ 'ಶಾಂತಿ ಕಿರಣ' ವೂ ಧರ್ಮ ಸಂಸ್ಕೃತಿಗೆ ಮೀಸಲಾದ ಮಾಸಪತ್ರಿಕೆಯಾಗಿದೆ. ಆದರೂ ಇಲ್ಲಿ ಇನ್ನೂ ಕನ್ನಡ ಪತ್ರಿಕೆಗಳ ತೀವ್ರ ಕೊರತೆಯಿದೆ.

ಇಷ್ಟೆಲ್ಲ ಭಾಷೆಗಳ ಒತ್ತಡದಲ್ಲಿ ಕನ್ನಡ ಇಲ್ಲಿ ಉಳಿದಿರುವದೇ ಭಾಗ್ಯವೆನಿಸುತ್ತದೆ. ನಮ್ಮ ಜನ ನಾಡ-ನುಡಿಯ ಬಗೆಗೆ ಅಭಿಮಾನ ತಾಳುವವರೆಗೆ ಕನ್ನಡ ಬೆಳೆಯಲಾರದು.

೪. ವಾಸ್ತುಶಿಲ್ಪ-ಬಿದರಿಕಲೆ ಶಾಸನಸಂಪತ್ತು

ವಾಸ್ತುಶಿಲ್ಪ:— ಬೀದರ ಜಿಲ್ಲೆಯ ಇತಿಹಾಸದಲ್ಲಿ ಕಲ್ಯಾಣ ಚಾಲುಕ್ಯರ ಮತ್ತು ಬಹಮನಿ ಸುಲ್ತಾನರ ಕಾಲ ಅತ್ಯಂತ ಮಹತ್ವ ಪೂರ್ಣವಾದುದು. ಕಲ್ಯಾಣಚಾಲುಕ್ಯರು ಕಲಾಪ್ರಿಯರು.

ಅಂತೆಯೇ ಅವರ ಕಾಲದಲ್ಲಿ ನಿರ್ಮಾಣವಾದ ಜಿಲ್ಲೆಯ ಅನೇಕ ಸ್ಥಳಗಳಲ್ಲಿ ಕಾಣುವ ಮಂದಿರಗಳು ಇಂದಿಗೂ ಚಾಲುಕ್ಯರ ನೆನಪನ್ನು ಹೊತ್ತುನಿಂತಿವೆ. ೧೦೫೦ರಿಂದ೧೩೦೦ ರ ವರೆಗಿನ ಕಾಲದಲ್ಲಿ ಈ ಮಂದಿರಗಳು ನಿರ್ಮಾಣವಾಗಿವೆ. ಬಸವಕಲ್ಯಾಣ, ನಾರಾಯಣಪುರ, ಶಿವಪುರ, ಜಲಸಂಗಿ ಮತ್ತು ಗೋರಟಾ ಈ ಮುಂತಾದ ಸ್ಥಳಗಳಲ್ಲಿ ಅಪೂರ್ವ ಕಲೆಯ ಚಾಲುಕ್ಯ ಮಂದಿರ ಗಳಿವೆ. ಹುಮನಾಬಾದದಿಂದ ೧೬ ಕಿ.ಮೀ. ದೂರದಲ್ಲಿರುವ ಜಲಸಂಗಿಯ ಕಲ್ಲೇಶ್ವರ ದೇವಾಲಯ ಅತ್ಯಂತ ಪ್ರಸಿದ್ಧವಾದುದು. ಮಂದಿರ ಸಣ್ಣದಾದರೂ ಅದರಲ್ಲಿರಳಿದ ಕಲೆ ದೊಡ್ಡದು. ಮದ ನಿಕೆಯರ ವಿವಿಧ ಬಗೆಯ ಭಂಗಿಗಳು ಗೋಡೆಗಳ ಮೇಲೆ ನೃತ್ಯ ಮಾಡುತ್ತಾ ನಿಂತ ಶಿಲಾಬಾಲಿಕೆಯರು ಆ ಕಲಾಶಿಲ್ಪಿಯ ಕಲಾ ನೈಪುಣ್ಯವನ್ನು ಎತ್ತಿ ಹೇಳುತ್ತವೆ. ವೀರಭದ್ರ, ನೃತ್ಯಗಣಪತಿ, ದಕ್ಷಿಣಮೂರ್ತಿ ಮತ್ತು ದುರ್ಗಿ ಇವು ಸುಂದರವಾಗಿ ಕೆತ್ತಲ್ಪಟ್ಟಿವೆ. ಚಾಲುಕ್ಯರು ಅಳಿದು ಹೋಗಿದ್ದರೂ ಇಂದಿಗೂ ಅವರ ನೆನಪು ಆ ಕಲಾ ಮೂರ್ತಿಗಳನ್ನು ನೋಡಿದಾಗ ಕಂಗೊಳಿಸುತ್ತದೆ. ಶಾಸನ ಬರೆಯುತ್ತಿರುವ ಶಿಲಾಬಾಲಿಕೆಯ ಚಿತ್ರ ಕಣ್ಣಿಗೆ ಕಟ್ಟುವಂತಿದೆ. ಇಂತಹ ಶ್ರೇಷ್ಠಕಲಾಕೃತಿಗಳನ್ನು ಕೆತ್ತಿಸಿದ ಹಿರಿಮೆ ಅವರದು ಬಸವಕಲ್ಯಾಣ ಮತ್ತು ನಾರಾಯಣಪುರಗಳಲ್ಲೂ ಈ ಚಾಲುಕ್ಯರ ಅಪೂರ್ವ ಕಲಾಕೃತಿಯ ಮಂದಿರಗಳು ಭವ್ಯವಾಗಿವೆ. ಭಾಲ್ಕಿ ಮತ್ತು ಇತರ ಕೆಲ ಹಳ್ಳಿಗಳಲ್ಲಿ 'ಹೇಮಾಡಪಂತಿ ಪದ್ಧತಿಯ ಮಂದಿರಗಳು ಕಾಣಸಿಗುತ್ತವೆ. ಒಟ್ಟಿನಲ್ಲಿ ಕಲ್ಯಾಣಚಾಲುಕ್ಯರ ನೆನಪು ವಾಸ್ತು ಶಿಲ್ಪಕಲೆಯಲ್ಲಿ ಚಿರಂತನವಾಗಿ ಉಳಿದಿದೆ.

ವಾಸ್ತು ಶಿಲ್ಪದಲ್ಲಿ ಪರ್ಷಿಯಶಿಲ್ಪದ ಪ್ರಭಾವ ಸ್ಪಷ್ಟವಾಗಿ ಎದ್ದು ಕಾಣುವದು ಬಹಮನಿ ಸುಲ್ತಾನರ ಕಾಲದಲ್ಲಿ. ಪರ್ಷಿಯ

ಶಿಲ್ಪದ ಕಲೆಯೂ ಆಕರ್ಷಕ. ಬೀದರಕೋಟೆಯಲ್ಲಿರುವ ಮಹಲುಗಳು, ಅರಮನೆ, ಮಸೀದಿಗಳು, ಸಭಾಸದನ ಇವು ಪರ್ಷಿಯನ್ ಕಲಾಕಾರರ ಕಲಾನೈಪುಣ್ಯದಿಂದ ಕಂಗೊಳಿಸುತ್ತವೆ. ಮಹಮೂದ ಗವಾನ ವಿದ್ಯಾಲಯ ಹಿಂದೆ ಪ್ರಸಿದ್ಧವಾದ ವಿದ್ಯಾ ಕೇಂದ್ರವಾಗಿತ್ತು. ಬರೀದಶಾಹಿ ಕಾಲದ ಕಟ್ಟಡಗಳಲ್ಲಿ ರಂಗೀನ ಮಹಲ್ ಅತ್ಯಂತ ಸುಂದರವಾಗಿದೆ. ಕಟ್ಟಿಗೆಯಲ್ಲಿಯೇ ಕಂಗೊಳಿಸುವ ಕಲಾಕಾರನ ಕುಸುರಿಕೆಲಸ ಎಂತವರಿಗಾದರೂ ತೃಪ್ತಿ ತರುತ್ತದೆ. ಹಲವಾರು ರಾಜರುಗಳ ಭವ್ಯ ಇತಿಹಾಸವನ್ನು ಹೊತ್ತುನಿಂತ ಬೀದರ ಜಿಲ್ಲೆಯಲ್ಲಿ ವಾಸ್ತುಶಿಲ್ಪಕ್ಕೇನೂ ಕಡಿಮೆ ಯಿಲ್ಲ. ಪೆಸರಾಂತ ಬೇಲೂರಿನ ಭವ್ಯತೆ ಇಲ್ಲಿರದಿದ್ದರೂ ಸುಂದರ ವಾದ ವಾಸ್ತುಶಿಲ್ಪಕಲೆ ಬಂದವರನ್ನು ಆಕರ್ಷಿಸುತ್ತದೆ. ಈ ದೃಷ್ಟಿಯಿಂದ ಈ ಜಿಲ್ಲೆ ಹಿಂದೆ ಬಿದ್ದಿಲ್ಲವೆನ್ನಬಹುದು.

ಬಿದರಿ ಕಲೆ:– 'ಬಿದರಿಕಲೆ' ಬೀದರ ಜಿಲ್ಲೆಯ ಪ್ರಸಿದ್ಧ ಕೊಡುಗೆ. ಈ ಕಲೆಯ ಕುಶರಿ ವಸ್ತುಗಳಿಗೆ ಇಂದು ವಿದೇಶಗಳಲ್ಲಿ ಬೇಡಿಕೆಯಿದೆ. ಮಿಶ್ರಲೋಹದಿಂದ ತಯಾರಾಗುವ ಈ ವಸ್ತು ಗಳಲ್ಲಿ 'ಬಿದರಿಕಲೆ' ಹೂವಾಗಿ ಅರಳಿರುತ್ತದೆ. ಅನೇಕ ಕಲಾ ಕುಶಲಗಾರರರು ಈ ಕೆಲಸಗಳನ್ನು ಮಾಡುತ್ತಾರೆ. ನಟರಾಜ, ಶಿವ ಪಾರ್ವತಿ, ರಾಧಾ–ಕೃಷ್ಣ, ನಿಸರ್ಗ, ಒಕ್ಕಲಿಗ, ಹಳ್ಳಿಯ ಮುಗ್ಧೆ ಈ ಮುಂತಾದ ಚಿತ್ರಗಳು ಅತ್ಯಂತ ಕಲಾತ್ಮಕವಾಗಿ ಆ ಲೋಹದ ಮೇಲೆ ಕೆತ್ತಲ್ಪಟ್ಟಿರುತ್ತವೆ. ಶರ್ಟಿಗೆ ಹಾಕಿಕೊಳ್ಳುವ ಗುಂಡಿಗಳು, ಕೈಯ ಬೆರಳಲ್ಲಿನ ಉಂಗುರಗಳು, ಕೀಲಿಗಳನ್ನು ಹಾಕಿಕೊಳ್ಳುವ ಕೀಗೊಂಚಲುಗಳು, ಹೆಣ್ಣು ಮಕ್ಕಳಿಗಾಗಿ ಕಿವಿಯಲ್ಲಿನ ರಿಂಗುಗಳು ಇನ್ನು ಮುಂತಾದ ವಸ್ತುಗಳಲ್ಲಿ ಬಿದರಿಕಲೆ ಕಂಗೊಳಿಸುತ್ತದೆ. ಈ

ಬಿದರೀ ವಸ್ತುಗಳನ್ನು ಯಾವುದೇ ಸಮಾರಂಭಗಳಲ್ಲಿ ಕಾಣಿಕೆಯಾಗಿ ಕೊಡುತ್ತಾರೆ. ಬಂದ ಪ್ರವಾಸಿಗರು ಖರೀದಿಸಿಕೊಂಡು ಹೋಗುತ್ತಾರೆ. ಅತ್ಯಂತ ಸುಂದರವಾಗಿ ಕಾಣುವ, ಕಪ್ಪುಲೋಹದಲ್ಲಿ ಬೆಳ್ಳಿಯು ಹಾಗೆ ಮಿಂಚುತ್ತಿರುವ ಈ ಬಿದರಿಕಲೆ ಅಪೂರ್ವವಾದುದು.

ಬಹಮನಿ ಸುಲ್ತಾನರ ಕಾಲದಿಂದಲೂ ಈ ಬಿದರೀ ವಸ್ತುಗಳ ತಯಾರಿಕೆ ನಡೆದುಕೊಂಡು ಬಂದಿದೆ. ಜಿಲ್ಲೆಯಾದ್ಯಂತ ಈಗ ಸರಕಾರದ ಸಹಾಯದೊಂದಿಗೆ ಇಂತಹ ವಿಗ್ರಹಗಳನ್ನು ತಯಾರಿಸುವ ಅನೇಕ ಕಲಾಕೇಂದ್ರಗಳಿವೆ. ನೂರಾರು ಜನರಿಗೆ ಉದ್ಯೋಗ ಒದಗಿಸಿರುವ ಈ ಕಲೆ ಈಗ ಬೀದರ ನಗರದಲ್ಲಂತೂ ಹೆಚ್ಚು ವ್ಯಾಪಿಸಿದೆ.

ಶಾಸನ ಸಂಪತ್ತು:– ಬೀದರ ಜಿಲ್ಲೆಯಲ್ಲಿ ಶಾಸನಗಳಿಗೂ ಕೊರತೆಯಿಲ್ಲ. ಇಲ್ಲಿಯವರೆಗೆ ಹಲವಾರು ಶಾಸನಗಳು ದೊರಕಿವೆ. ಚಾಲುಕ್ಯ ಹಾಗೂ ಕಲಚೂರಿ ಮನೆತನದ ಬಗೆಗೆ ಸಂಬಂಧಿಸಿದ ನೂರಾರು ಶಾಸನಗಳು ಸಿಕ್ಕಿವೆ. ಬೀದರ, ಬಸವ ಕಲ್ಯಾಣ, ಭಾಲ್ಕಿ, ಗೊರಟಾ, ಅಣದೂರ, ನಾರಾಯಣಪುರ, ಮಿರಕಲ್, ಶಿವಪುರ ಮತ್ತು ಪರ್ತಾಪುರ ಈ ಮುಂತಾದ ಕಡೆಗಳಲ್ಲಿ ಪ್ರಮುಖವಾದ ಶಿಲಾಶಾಸನಗಳು ದೊರಕಿವೆ. ರಂಜೋಳದಲ್ಲಿ ಲಭ್ಯವಾದ ಶಾಸನದಲ್ಲಿ ಕನ್ನಡ ಲಿಪಿ ಸುಂದರವಾಗಿದೆ. ಅಟ್ಟಳೆ ನಾಡಿನ ಸಿಂದರ ಮನೆತನದ ಬಗೆಗೆ ಈ ಶಾಸನ ವಿವರ ಹೇಳುತ್ತದೆ. ಅಂದಂದಿನ ಕಾಲದ ರಾಜಕೀಯ ಧಾರ್ಮಿಕ ರಂಗಗಳ ಮೇಲೆ ಈ ಶಾಸನಗಳು ಹೊಸ ಬೆಳಕನ್ನು ಚೆಲ್ಲುತ್ತವೆ. ದತ್ತಿಕೊಟ್ಟ ಶಾಸನ, ಕಲ್ಯಾಣ ಬಣ್ಣನೆಯ ಶಾಸನಗಳೂ ಇವೆ. ಬಹಮನಿ ಕಾಲದಲ್ಲಿ ಪರ್ಷಿಯನ್

ಮತ್ತು ಅರಬ್ಬೀಭಾಷೆಯಲ್ಲಿ ಲಿಖಿತವಾದ ಶಾಸನಗಳು ದೊರಕಿವೆ. ಜನಕಲ್ಯಾಣ ಮಾಡಿದ ಕಾರ್ಯಗಳ ಬಗೆಗೆ ಇದರಲ್ಲಿ ವಿವರ ಸಿಗುತ್ತದೆ. ಕೆರೆ-ಕಾಲುವೆ ಕಟ್ಟಿಸಿದ ವಿವರಗಳೂ ಪ್ರಸ್ತಾಪವಾಗಿವೆ. ಬಹಮನಿ ಸುಲ್ತಾನರ ಕಾಲದಲ್ಲಿದ್ದ ಸುವರ್ಣ, ಬೆಳ್ಳಿ ಮತ್ತು ತಾಮ್ರದ ನಾಣ್ಯಗಳು ದೊರಕಿವೆ. ಆರನೆಯ ವಿಕ್ರಮಾದಿತ್ಯನ ಕಾಲದ ಶಾಸನ ರಂಜೋಳದಲ್ಲಿ ದೊರಕಿದೆ. ಅಂದಿನ ಕಾಲದ ಪ್ರತಿನಿಧಿಗಳಂತೆ ಆಗಿಹೋದ ಕತೆಯನ್ನು ಹೇಳುತ್ತಾ ಈ ಶಾಸನಗಳು ಇಂದಿಗೂ ಅಂದಿನ ನೆನಪನ್ನು ಹೊತ್ತು ನಿಂತಿವೆ.

ಇತ್ತೀಚೆಗೆ ಕೈಕೊಂಡ ಪುರಾತತ್ವ ಇಲಾಖೆಯವರ ಸಂಶೋಧನೆಯಿಂದ ಔರಾದ ಮತ್ತು ಬಸವಕಲ್ಯಾಣದಲ್ಲಿ ಹಳೆ-ಹೊಸ ಶಿಲಾಯುಗದ ಜನಜೀವನದ ಪ್ರಾಚ್ಯವಸ್ತುಗಳು ದೊರಕಿವೆ. ಔರಾದ ತಾಲೂಕ ಈ ದೃಷ್ಟಿಯಿಂದ ಪ್ರಸಿದ್ಧವಾದುದು. ಈ ತಾಲೂಕಿನ ಅನೇಕ ಹಳ್ಳಿಗಳಲ್ಲಿ ಹಳೆ ಶಿಲಾಯುಗದ ಕಲ್ಲಿನ ಆಯುಧಗಳು, ಗಡಿಗೆ-ಮಡಿಕೆ ಮೊದಲಾದ ಅವಶೇಷಗಳು ಬಹಳಷ್ಟು ದೊರಕಿವೆ. ಆ ಗಡಿಗೆ-ಮಡಿಕೆಗಳಲ್ಲಿ ರೇಖೆಗಳಿವೆ. ಬಸವಕಲ್ಯಾಣ ತಾಲೂಕಿನ ಕೆಲ ಹಳ್ಳಿಗಳಲ್ಲಿ ದೊರೆತ ಗಡಿಗೆ-ಮಡಿಕೆಗಳಿಗೂ ರೇಖೆಗಳಿವೆ. ಹೆಚ್ಚಿನ ಸಂಶೋಧನೆ ನಡೆಸಿದರೆ ಔರಾದ ತಾಲೂಕದಲ್ಲಿ ಇನ್ನೂ ಹೆಚ್ಚಿನ ಅವಶೇಷಗಳು ದೊರೆತು ಬೀದರ ಜಿಲ್ಲೆಯ ಇತಿಹಾಸದ ಮೇಲೆ ಹೊಸ ಬೆಳಕು ಬೀಳುವದರಲ್ಲಿ ಸಂಶಯವಿಲ್ಲ.

ಈ ಜಿಲ್ಲೆಯಲ್ಲಿ ಕಲೆ, ಪುರಾತತ್ವ ಪ್ರಾಚ್ಯ ವಸ್ತುಗಳು, ಶಾಸನಗಳು ಮತ್ತು ವಾಸ್ತುಶಿಲ್ಪ ಇವುಗಳಿಗೆ ಕೊರತೆಯೆಂಬುದೇ ಇಲ್ಲ. ಹಿಂದಿನ ಸಂಸ್ಕೃತಿಯನ್ನು, ಭವ್ಯಪರಂಪರೆಯನ್ನು ಹೊತ್ತು ನಿಂತ ಈ ಸಾಕ್ಷಿಗಳು ಇಂದು ಜಿಲ್ಲೆಯ ಮಹತ್ವವನ್ನು ಎತ್ತಿ ಹೇಳುತ್ತವೆ.

೫ ಸಾಹಿತ್ಯ-ಸಂಗೀತ-ಶಿಕ್ಷಣ

ಸಾಹಿತ್ಯ:—

ಸಾಹಿತ್ಯ ರಂಗದಲ್ಲೂ ಈ ಜಿಲ್ಲೆ ಹಿಂದಿಲ್ಲ; ಕೇವಲ ರಾಜ್ಯಕ್ಕೆ, ದೇಶಕ್ಕಷ್ಟೇ ಅಲ್ಲದೆ ಇಡೀ ವಿಶ್ವಕ್ಕೇನೇ ಅಪೂರ್ವವಾದ, ವಿಶಿಷ್ಟವಾದ ಸಾಹಿತ್ಯವನ್ನು ನೀಡಿದ ಹೆಮ್ಮೆ ಈ ಜಿಲ್ಲೆಯದು. ಅದೇ ವಚನಸಾಹಿತ್ಯ. ಹನ್ನೆರಡನೆಯ ಶತಮಾನದಲ್ಲಿ ಈ ಜಿಲ್ಲೆಯ ಕಲ್ಯಾಣದಲ್ಲಿ ಅಸಂಖ್ಯಾತ ವಚನಕಾರರು ಸಹಸ್ರಾರು ವಚನಗಳನ್ನು ಸೃಷ್ಟಿಸಿ ಸಾಹಿತ್ಯ ಖಣಜವನ್ನು ಶ್ರೀಮಂತಗೊಳಿಸಿದ್ದಾರೆ. ಇದಕ್ಕಿಂತ ಹೆಚ್ಚಿನ ಹೆಮ್ಮೆ ಈ ಜಿಲ್ಲೆಗೆ ಮತ್ತೇನು ಬೇಕು. ಬಸವಣ್ಣ, ಚೆನ್ನಬಸವಣ್ಣ, ಅಲ್ಲಮಪ್ರಭು, ಸಿದ್ಧರಾಮ, ಅಂಬಿಗರಚೌಡಯ್ಯ, ಕಿನ್ನರಿಬೊಮ್ಮಯ್ಯ, ಧೂಳಯ್ಯ, ಘಟ್ಟಿವಾಳಯ್ಯ, ನಗೆಯಮಾರಿತಂದೆ ಈ ಮೊದಲಾದ ಶಿವಶರಣರು, ಮಹಾದೇವಿಯಕ್ಕ, ಮುಕ್ತಾಯಕ್ಕ, ಅಕ್ಕನಾಗಮ್ಮ, ನೀಲಾಂಬಿಕೆ, ಗಂಗಾಂಬಿಕೆ, ಲಕ್ಕಮ್ಮ ಈ ಮೊದಲಾದ ಶಿವಶರಣೆಯರು ತಮ್ಮ ಸತ್ಯಶುದ್ಧ ಕಾಯಕದೊಂದಿಗೆ, ನಿತ್ಯ ಚಿರಂತನವಾದ ವಚನಗಳನ್ನು ರಚಿಸಿ ಅಮರರಾಗಿದ್ದಾರೆ. ಕನ್ನಡ ಸಾಹಿತ್ಯದಲ್ಲೇನಿದೆ ಎಂದು ಕೇಳಿದರೆ ಎದೆತಟ್ಟಿಕೊಂಡು ಹೇಳುವ ಸಾಹಿತ್ಯವೆಂದರೆ ಈ ವಚನ ಸಾಹಿತ್ಯ. ಇಂತಹ ಸಹಸ್ರಾರು ವಚನಗಳ ರಚನೆ ಈ ಜಿಲ್ಲೆಯಲ್ಲಿ ನಡೆದದ್ದು ನಿಜಕ್ಕೂ ಈ ಜಿಲ್ಲೆಯ ಪುಣ್ಯ. ಸಾಹಿತ್ಯ-ಸಂಸ್ಕೃತಿಯ ದೃಷ್ಟಿಯಿಂದ ಈ ಜಿಲ್ಲೆ ಅತ್ಯಂತ ವೈಶಿಷ್ಟ್ಯಪೂರ್ಣವಾದುದು.

"ದಯವಿಲ್ಲದ ಧರ್ಮವಾವುದಯ್ಯ ?" ಎಂದ ಬಸವಣ್ಣ, "ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗಗಳಿಗಂಜಿದರೆ

ಹೇಗಯ್ಯಾ ?" ಎಂದು ಹೋರಾಡಿದ ಮಹಾದೇವಿಯಕ್ಕ, "ಕಲ್ಯಾಣವೆಂಬ ಪ್ರಣತೆಯಲ್ಲಿ ಭಕ್ತಿರಸವೆಂಬ ತೈಲವನೆರೆದು ಬಸವಣ್ಣನೆಂಬ ಜ್ಯೋತಿ ಬೆಳಗುತಿದೆ" ಎಂದು ಬಣ್ಣಿಸಿದ ಪ್ರಭುದೇವ ಈ ಮೊದಲಾದ ವಚನಕಾರರ ವಚನಾಮೃತಗಳು ಎಂದೆದಿಗೂ ತನಿರಸವನ್ನೀಯುತ್ತವೆ. ಅಂತಹ ಅಪೂರ್ವವಾದ ಸಾಹಿತ್ಯ ಈವಚನಸಾಹಿತ್ಯ.

ಹನ್ನೆರಡನೆಯ ಶತಮಾನಕ್ಕಿಂತ ಹಿಂದೆ ಹೋದರೆ, ರತ್ನತ್ರಯರಲ್ಲೊಬ್ಬನೆಂದು ಹೆಸರು ಪಡೆದ ಬಿಜಾಪುರ ಜಿಲ್ಲೆಯ ರನ್ನಕವಿ. ಆಶ್ರಯ ಹೊಂದಿದ್ದು ಆಗಿನ ಚಾಲುಕ್ಯ ದೊರೆಯಾದ ತೈಲಪನಲ್ಲಿ. ಅಂದಿನ ಅರಸರನೇಕರು ಈ ಸಾಹಿತ್ಯ-ಸಂಗೀತಗಳಿಗೆ ಸಾಕಷ್ಟು ಪ್ರೋತ್ಸಾಹ ಕೊಟ್ಟು ಕಲಾಭಿವೃದ್ಧಿಗೆ ಕಾರಣರಾಗಿದ್ದಾರೆ.

ಇನ್ನು ಬಹಮನಿ ಸುಲ್ತಾನರ ಕಾಲದಲ್ಲಿಯು ಸುಪ್ರಸಿದ್ಧ ಪರ್ಷಿಯನ್ ಕವಿ ಆಧರಿಯೆಂಬುವನು ಬೀದರದ ವೈಭವವನ್ನು ಕುರಿತು ಬಣ್ಣಿಸಿದ್ದಾನೆ. ಆತನ ಕೃತಿ 'ಬಹಮನ್ ನಾಮಾ' ಎಂಬುದು. ಸೂಫೀ ಸಂತರಾದ ಬಂದೇ ನಾವಾಜರು ಹಾಗೂ ಇನ್ನಿತರರು ಧಾರ್ಮಿಕ ಸಾಹಿತ್ಯವನ್ನು ನಿರ್ಮಿಸಿದರು. ಈ ಸಮಯಕ್ಕೆ ವಿವಿಧ ದೇಶಗಳಿಂದ ಬಂದ ಕವಿಗಳು ಇಲ್ಲಿ ಕವಿಗೋಷ್ಠಿ ನಡೆಸುತ್ತಿದ್ದರೆಂದು ತಿಳಿದು ಬಂದಿದೆ. ಆದರೆ ಈ ಪರ್ಷಿಯನ್ ಕವಿಗಳದಾಗಲಿ. ಉರ್ದು ಕವಿಗಳದಾಗಲಿ ಸಮಾಜ ಚಿಂತನೆಯಂತ ಹಾಡಿ ಹೊಗಳುವದೇ ಮೂಲ ಉದ್ದೇಶವಾಗಿತ್ತು. ತತ್ಕಾಲಿನ ಅರಸರ ಅರಮನೆಯನ್ನು 'ಭೂಮಿಯ ಮೇಲಿನ ಸ್ವರ್ಗ' ವೆಂದು ಬಣ್ಣಿಸುವದು ಅವರ ಬಚ್ಚಲು ಮನೆಯ ತೂತಿನಲ್ಲಿ ಸ್ನಾನಮಾಡಿದ ನೀರು ಹೇಗೆ ಹರಿಯುತ್ತದೆಂದು ವರ್ಣಿಸುವದು ಬಹುತೇಕ ಕವಿಗಳ ಉದ್ದೇಶ

ವಾಗಿತ್ತು. ಫಾರಸೀ ಮತ್ತು ಸಂಸ್ಕೃತದಲ್ಲೂ ಈ ಜಿಲ್ಲೆಯಲ್ಲಿ ಸಾಹಿತ್ಯ ಸೃಷ್ಟಿಯಾಗಿದೆ.

ಕಲ್ಯಾಣ ಚಾಲುಕ್ಯರು ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಗಳಿಗೆ ಇವರ ಜೊತೆಗೆ ಸಂಸ್ಕೃತ ಸಾಹಿತಿಗಳಿಗೆ ಪ್ರಾಶಸ್ತ್ಯ ಕೊಡುತ್ತಾ ಆಶ್ರಯ ನೀಡಿದ ಅರಸರು. ಹನ್ನೊಂದನೆಯ ಶತಮಾನದಲ್ಲಿ ಎರಡನೆಯ ಚಾವುಂಡರಾಯನಿಂದ ರಚಿತವಾದ 'ಲೋಕೋಪಕಾರ' ಗ್ರಂಥದಲ್ಲಿ ಜೋತಿಷ್ಯ, ಶಿಲ್ಪಕಲೆ, ವೈದ್ಯಕೀಯ ಜ್ಞಾನಗಳ ಬಗೆಗೆ ವಿವರಣೆ ಇದೆ. ಚಂದ್ರರಾಜನು 'ಚಂದೋರ್ಣವ' ಗ್ರಂಥ ರಚಿಸಿದರೆ ಆತನ ಮಂತ್ರಿ ದುರ್ಗಸಿಂಹ 'ಪಂಚತಂತ್ರ' ಬರೆದನು. ಶ್ರೀಧರಾಚಾರ್ಯನ 'ಜಾತಕ ತಿಲಕ' ಒಳ್ಳೆಯ ಜ್ಯೋತಿಶ್ಯಾಸ್ತ್ರ. ಇದೇ ರೀತಿ ಶಾಂತಿನಾಥನ 'ಸುಕುಮಾರ ಚರಿತ್ರೆ', ಹಾಗೂ ನಾಗವರ್ಮಾಚಾರ್ಯನ 'ಚಂದ್ರಚೂಡಾಮಣಿ ಶತಕ' ಬೆಳಕು ಕಂಡವು.

ಇಂದಿಗೆ ಮೂರುನೂರು ವರ್ಷಗಳ ಹಿಂದೆ ಜೀವಿಸಿದ್ದ ಕಲ್ಯಾಣದ ಶಿವರಾಮ ಸ್ವಾಮಿಗಳು ಕನ್ನಡ, ಮರಾಠಿ ಹಿಂದಿ ಭಾಷೆಗಳಲ್ಲಿ ಅನೇಕ ಗ್ರಂಥಗಳನ್ನು ರಚಿಸಿದ್ದಾರೆ. ನಂತರದಲ್ಲಿದ್ದ ಮಾಣಿಕ ಪ್ರಭುಗಳು ಮತ್ತು ಮನೋಹರ ಪ್ರಭುಗಳು ಅನೇಕ ಭಕ್ತಿಗೀತೆಗಳನ್ನು ರಚಿಸಿದ್ದಾರೆ. ಮಾರ್ತಾಂಡ ಪ್ರಭುಗಳು ಜ್ಞಾನ ಮಾರ್ತಾಂಡ, ಮತ್ತು 'ಗಾನಮಾರ್ತಂಡ' ಎಂಬ ಗ್ರಂಥಗಳನ್ನು ರಚಿಸಿದ್ದಾರೆ. ಮದನೂರಿನ ರೇವಣಸಿದ್ದೇಶ್ವರರು ಕನ್ನಡದಲ್ಲಿ 'ಸಿದ್ಧಲಿಂಗೇಶ್ವರ ಪುರಾಣ' ಎಂಬ ಗ್ರಂಥ ರಚಿಸಿದ್ದಾರೆ. ಮೆಹಕರ ಮಠದ ಸುರೇಶ ಸ್ವಾಮಿಯವರ 'ಮಾನವಧರ್ಮ' ಕನ್ನಡಗ್ರಂಥ. ಹೀಗೆ ಅನೇಕ ಸಾಹಿತಿಗಳು, ಕವಿಗಳು ಈ ಜಿಲ್ಲೆಯಲ್ಲಿ ಆಗಿ ಹೋಗಿದ್ದಾರೆ.

ಈ ಶತಮಾನದಲ್ಲಿ ಇತ್ತೀಚೆಗೆ ಬರೆಯುತ್ತಿರುವ ಹಲವಾರು ಕವಿಗಳು, ಲೇಖಕರು ಈ ಜಿಲ್ಲೆಯಲ್ಲಿದ್ದಾರೆ. ೧೨ನೇಯ ಶತಮಾನದಲ್ಲಿಯ ವಚನಕಾರರಿಂದ ಕ್ರಾಂತಿಯ ಕಹಳೆಯನ್ನೂದಿಸಿದ ಈ ಜಿಲ್ಲೆಯ ನೆಲ ಸಾಮಾನ್ಯವಾದುದಲ್ಲ. ಇದೇ ಜಿಲ್ಲೆಯ ಮಣ್ಣಿನ ಮಕ್ಕಳಾದ ಪ್ರೊ. ಜಿ.ಬಿ. ವಿಸಾಜಿ, ಪ್ರೊ. ಕಾಶೀನಾಥ ಅಂಬಲಗೆ, ಪ್ರೊ. ಮಾಣಿಕರಾವ ಧನಶ್ರೀ, ಎಮ್. ಜಿ. ದೇಶಪಾಂಡೆ, ಮಾಣಿಕಪ್ಪ ಗಂಗನಪಳ್ಳಿ, ಪಂಚಾಕ್ಷರಿ ಪುಣ್ಯಶೆಟ್ಟಿ, ಹಣಮಂತಪ್ಪ ಪಾಟೀಲ, ಮಾಶೆಟ್ಟಿ, ಪ್ರೊ. ಪ್ರೇಮಾ ಶಿರ್ಸೆ, ಪ್ರೊ. ವಿಜಯಶ್ರೀ ಸಬರದ ಇವರೆಲ್ಲಾ ಕವನ, ಲೇಖನಗಳನ್ನು ಬರೆದು ಈ ಜಿಲ್ಲೆಯ ಉದಯೋನ್ಮುಖ ಬರಹಗಾರರಾಗಿದ್ದಾರೆ. ಇವರಲ್ಲಿ ವಿಸಾಜಿಯವರ 'ಭಾವಬಿಂಬ' ಅಂಬಲಗೆಯವರ 'ಮೂವತ್ತೈದು ಕವನಗಳು' ಮತ್ತು ವಿಜಯಶ್ರೀ ಸಬರದ ಅವರ 'ಜ್ವಲಂತ' ಗಮನಾರ್ಹ ಕೃತಿಗಳು.

ಬೇರೆ ಜಿಲ್ಲೆಗೆ ಸಂಬಂಧಿಸಿದ್ದರೂ, ಬೀದರ ಜಿಲ್ಲೆಯಲ್ಲಿ ವಾಸವಾಗಿ ಈಗ ಇದೇ ಜಿಲ್ಲೆಯವರಾಗಿರುವ ಪ್ರೊ.ವಿ.ಎನ್.ಸಿಂಪಿ, ಡಾ.ಎಲ್.ಆರ್.ಕುಲಕರ್ಣಿ, ಡಾ.ವಿ.ಎಸ್.ಕುಲಕರ್ಣಿ, ಪ್ರೊ.ಎಸ್.ಎಸ್.ಭೈರೊಡಗಿ, ಪ್ರೊ.ಶಶಿಕಲಾ ವಸ್ತ್ರದ ಹಾಗೂ ಪ್ರಿನ್ಸಿಪಾಲ ಬಸವರಾಜ ಸಬರದ ಇವರೆಲ್ಲಾ ಪ್ರಮುಖ ಲೇಖಕರು. ಇವರಲ್ಲಿ ಡಾ.ಎಲ್.ಆರ್ ಕುಲಕರ್ಣಿಯವರು 'ಬಹಮನಿಕಾಲದ ಆರ್ಥಿಕ, ಸಾಮಾಜಿಕ ಮತ್ತು ಧಾರ್ಮಿಕ ವಿಷಯ'ದ ಮೇಲೆ ಪಿಎಚ್.ಡಿ. ಮಾಡಿದ್ದಾರಲ್ಲದೆ ಇನ್ನೂ ಹಲವಾರು ಕೃತಿಗಳನ್ನು ಬರೆದಿದ್ದಾರೆ. ಅದೇ ರೀತಿ ಡಾ.ವಿ.ಎಸ್ ಕುಲಕರ್ಣಿಯವರ 'ಬಸವಕಲ್ಯಾಣ ಪ್ರದೇಶದ ಐತಿಹಾಸಿಕ ಮತ್ತು ಸಾಂಸ್ಕೃತಿಕ ಅಧ್ಯಯನ' ಪಿಎಚ್.ಡಿ.ಪ್ರಬಂಧ ಶಾಸನಗಳ ಆಧಾರದಿಂದ ಕೂಡಿದೆ. ಶಾಸನಗಳ

ಸಂಶೋಧನೆಯಲ್ಲಿ ಬೀದರ ಜಿಲ್ಲೆಯ ಇತಿಹಾಸದ ಬಗೆಗೆ ಡಾ.ವಿ.ಎಸ್.ಕುಲಕರ್ಣಿಯವರು ಹೆಚ್ಚಿನ ಕೃಷಿಮಾಡಿದ್ದಾರೆ. ಪ್ರೊ. ಸಿಂಪಿಯವರ ಪ್ರಬಂಧಗಳು ಮತ್ತು ಹರಟೆಗಳು ಕುತೂಹಲಕಾರಿಯಾಗಿವೆ. ಪ್ರೊ.ಶಶಿಕಲಾ ವಸ್ತ್ರದರ 'ಗುಬ್ಬೀಮನೆ' ಇತ್ತೀಚೆಗೆ ಪ್ರಕಟವಾದ ಭರವಸೆ ಹುಟ್ಟಿಸುವ ಕವನಸಂಕಲನ. ಪ್ರೊ. ಬಸವರಾಜ ಸಬರದರ 'ಹೋರಾಟ' 'ಪ್ರತಿರೂಪ' ಮತ್ತು 'ಸನ್ನವರಹಾಡು' ಈ ಎಲ್ಲಾ ಕೃತಿಗಳು, ಸಂಪ್ರದಾಯ-ಮೂಢನಂಬಿಕೆಯ ವಿರುದ್ಧ ಸಿಡಿದೆದ್ದು ಶೋಷಣೆಯ ವಿರುದ್ಧ ಹೋರಾಡುವಂತಹ ಧ್ಯೇಯವನ್ನೊಳಗೊಂಡಂತಹವುಗಳಾಗಿವೆ. ಇದಲ್ಲದೆ ಇನ್ನೂ ಹಲವು ಕೃತಿಗಳು ಅನೇಕ ಲೇಖಕರಿಂದ ಪ್ರಕಟವಾಗಿವೆ.

ವಚನ ಸಾಹಿತ್ಯದಂತಹ ವಿಶಿಷ್ಟ ಪರಂಪರೆ ಈ ಜಿಲ್ಲೆಗಿದ್ದು ಇತ್ತೀಚಿನ ಯುವ ಪೀಳಿಗೆಯಲ್ಲೂ ಅಂತಹ ಕೆಲ ಲಕ್ಷಣಗಳನ್ನು ಕಾಣಬಹುದಾಗಿದೆ. ಕನ್ನಡ ಸಾಹಿತ್ಯದ ಬಗೆಗೆ ಈಗೀಗ ಚಿಂತನ ಮಂಥನಗಳಾಗಹತ್ತಿವೆ. ಅಗಷ್ಟ ೧೯೭೯ರಲ್ಲಿ 'ಇತ್ತೀಚಿನ ಸಾಹಿತ್ಯ' ಎಂಬ ವಿಷಯದ ಮೇಲೆ ನಡೆದ ವೈಚಾರಿಕ ಗೋಷ್ಠಿಗಳಲ್ಲಿ ಗಿರಡ್ಡಿ ಗೋವಿಂದರಾಜ ಅಧ್ಯಕ್ಷತೆ ವಹಿಸಿದ್ದರು. ಎರಡು ದಿನಗಳ ಈ ಗೋಷ್ಠಿಗಳಲ್ಲಿ ಸಾಹಿತ್ಯದ ವಿವಿಧ ಪ್ರಕಾರಗಳ ಬಗೆಗೆ ಇತ್ತೀಚಿನ ಬೆಳವಣಿಗೆಯನ್ನು ಕುರಿತು ವಿವರಿಸಲಾಯಿತು. ಕನ್ನಡ ಸಾಹಿತ್ಯ ಪರಿಷತ್ತಿನಿಂದ ಇಂತಹ ಗೋಷ್ಠಿಗಳು ಆಗಾಗ ನಡೆಯುತ್ತವೆ.

ಸಂಗೀತ :— ಸಾಹಿತ್ಯಕ್ಕೆ ಪ್ರಾಮುಖ್ಯವಿರುವಂತೆ ಸಂಗೀತಕ್ಕೂ ಈ ಜಿಲ್ಲೆಯಲ್ಲಿ ಪರಂಪರೆಯಿದೆ. ಕಲ್ಯಾಣಚಾಲುಕ್ಯರ ಆರನೇ ವಿಕ್ರಮಾದಿತ್ಯನ ರಾಣಿಯರಾದ ಚಂದಲದೇವಿ ಮತ್ತು ಕೇತಲದೇವಿಯರು ಅನೇಕ ಕಲೆಗಳಲ್ಲಿ ನಿಪುಣತೆ ಹೊಂದಿದ್ದರು.

ಚಂದಲದೇವಿ 'ಅಭಿನವ ಶಾರದೆ' ಎಂಬ ಬಿರುದನ್ನು ಪಡೆದಿದ್ದರೆ, ಸೈನ್ಯಾಧಿಕಾರಿ ರೇವಿಗಾರನ ಪತ್ನಿ ರೆಬ್ಬಲದೇವಿ 'ಪ್ರತಿಭಾಸರಸ್ವತಿ ಎಂಬ ಬಿರುದು ಪಡೆದಿದ್ದಳು.

ಬಹಮನಿ ಸುಲ್ತಾನರಲ್ಲಿ ಕೊನೆಯ ಸುಲ್ತಾನನಾದ ಕಲೀಮುಲ್ಲಾನ ಕಾಲದಲ್ಲಿ ಅನಂತಸಂಭಾಜಿಯೆಂಬ ಸುಪ್ರಸಿದ್ಧ ಸಂಗೀತಗಾರನಿದ್ದನಂತೆ. ಸುಲ್ತಾನನ ಮೆಚ್ಚುಗೆಗಳಿಸಿದ ಆತನನ್ನು ಮೀರಿಸುವ ಸಂಗೀತಗಾರರು ಸುತ್ತಲಿನ ಭಾಗದಲ್ಲಿ ಯಾರೂ ಇರಲಿಲ್ಲವಂತೆ. ಹೈದ್ರಾಬಾದ ನಿಜಾಮನ ಕಾಲಕ್ಕೆ ನೃತ್ಯ ಸಂಗೀತಕ್ಕೆ ಹೆಚ್ಚಿನ ಮನ್ನಣೆಯಿತ್ತು, ಸಂಗೀತ ಮೇಳಗಳು ಸಂಭ್ರಮದಿಂದ ನಡೆಯುತ್ತಿದ್ದುದರಿಂದ ಸಂಗೀತದ ಬಗೆಗೆ ಅತ್ಯಂತ ಆಸಕ್ತಿಯಿದ್ದುದು ಕಂಡುಬರುತ್ತದೆ. ಹೆಚ್ಚು ಜನ ಸಂಗೀತವನ್ನು ಮೆಚ್ಚಿಕೊಳ್ಳುತ್ತಿದ್ದರು.

ಇಂದಿಗೂ ಬೀದರದಲ್ಲಿ ಸಂಗೀತ ಕಲೆ ಬೆಳೆಯುತ್ತಿದೆ. ನನ್ನೆಬಾಬು ಪ್ರಸಿದ್ಧ ಹಾರ್ಮೋನಿಯಮ್ ವಾದಕನಾದರೆ ಜಗಪಾಲಸಿಂಗ್ ಹಾಗೂ ರಾಜೇಂದ್ರಸಿಂಗ ಪವಾರ ಇವರೂ ಉತ್ತಮ ಹಾರ್ಮೋನಿಯಮ್ ವಾದಕರು.ಭೀಮರಾವ್ ಉತ್ತಮ ತಬಲಾ ವಾದಕರು. ಔರಾದ ತಾಲೂಕಿನ ಕುಮಾರಿ ಕೊಂಡುಬಾಯಿ ರಾಜ್ಯಮಟ್ಟದ ಅಂತರ ರಾಷ್ಟ್ರೀಯ ಮಕ್ಕಳ ವರ್ಷಾಚರಣೆಯ ಕಾವ್ಯಗಾಯನ ಸ್ಪರ್ಧೆಯಲ್ಲಿ ನಮ್ಮ ರಾಜ್ಯಕ್ಕೆ ದ್ವಿತೀಯ ಸ್ಥಾನ ಪಡೆದಿದ್ದಾಳೆ. ಇದು ಈ ಜಿಲ್ಲೆಯವರಿಗೆ ಸಂಗೀತದ ಬಗೆಗಿದ್ದ ಅಭಿರುಚಿಯನ್ನು ಸ್ಪಷ್ಟಗೊಳಿಸುತ್ತದೆ. ಬೀದರದಲ್ಲಿ ಕಲಾಮಂಡಲವಿದ್ದು ಆಗಾಗ ಪ್ರಸಿದ್ಧ ಸಂಗೀತ ಕಲಾವಿದರನ್ನು ಆಮಂತ್ರಿಸಿ ಕಾರ್ಯಕ್ರಮ ಮಾಡುತ್ತಾರೆ. ಇನ್ನು ಶಾಲೆ-ಕಾಲೇಜುಗಳಲ್ಲಿಯೂ

ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸಂಗೀತಕ್ಕೆ ಹೆಚ್ಚಿನ ಪ್ರಾಶಸ್ತ್ಯವಿದೆ.

ಚಿತ್ರಕಲೆಯಲ್ಲಿ ಸಿ. ಬಿ. ಸೋಮಶೆಟ್ಟಿ ಪ್ರಸಿದ್ಧರು. ಮಹಾ ವ್ಯಕ್ತಿಗಳ ವರ್ಣಚಿತ್ರ ಬರೆದಿದ್ದಾರೆ. ಕಲಾತ್ಮಕ ಹಾಗೂ ನವ್ಯ ಚಿತ್ರಗಳನ್ನು ಬಿಡಿಸಿದ್ದಾರೆ. 'ಜ್ವಲಂತ' ದಂತಹ ಕೃತಿಗಳಿಗೆ ಮುಖಪುಟ ಬರೆದಿದ್ದಾರೆ. ಅದೇ ರೀತಿ ಶ್ರೀ ಚಿಕ್ಕಿಯವರು ಬಸವೇಶ್ವರ ಮೊದಲಾದವರ ತೈಲಚಿತ್ರವನ್ನು ಸುಂದರವಾಗಿ ಬರೆದಿದ್ದಾರೆ.

ಶಿಕ್ಷಣ: – ಪ್ರಾಚೀನ ಕಾಲದಿಂದಲೂ ಈ ಜಿಲ್ಲೆ ಶಿಕ್ಷಣಕ್ಕೆ ಹೆಸರಾಂತ ಜಿಲ್ಲೆಯಾಗಿದೆ. ಅನೇಕ ಅರಸರು, ಧರ್ಮಗುರುಗಳು, ಶ್ರೀಮಂತ ವ್ಯಾಪಾರಿಗಳು ಶಿಕ್ಷಣಕ್ಕೆ ಪ್ರೋತ್ಸಾಹ ನೀಡುತ್ತಲೇ ಬಂದಿದ್ದಾರೆ. ಹಿಂದಿನ ಅಗ್ರಹಾರಗಳು, ಮಠಗಳು, ಶಿಕ್ಷಣಕೇಂದ್ರಗಳಾಗಿದ್ದವು. ಕರ್ನಾಟಕದಲ್ಲಿ ಗುರುಕುಲ ಪದ್ಧತಿ ಮೊದಲಿನಿಂದಲೂ ಪ್ರಚಲಿತದಲ್ಲಿತ್ತು. ಇದು ಈ ಜಿಲ್ಲೆಗೂ ಅನ್ವಯಿಸುತ್ತದೆ. ತತ್ವಶಾಸ್ತ್ರ, ವ್ಯಾಕರಣ, ಗಣಿತ, ಖಗೋಲಶಾಸ್ತ್ರ, ತರ್ಕಶಾಸ್ತ್ರ, ವೇದ, ಉಪನಿಷತ್ತುಗಳ ಬಗೆಗೆ ವಿದ್ಯಾರ್ಥಿಗಳಿಗೆ ಭೋದಿಸಲಾಗುತ್ತಿತ್ತು.

ಹನ್ನೆರಡನೆಯ ಶತಮಾನದಲ್ಲಿ ಈ ಜಿಲ್ಲೆಯಲ್ಲಿದ್ದ ಶರಣರ ಅನುಭವ ಮಂಟಪ ಪ್ರಸಿದ್ಧ ವಿಶ್ವವಿದ್ಯಾಲಯ . ಆ ವಿದ್ಯಾಲಯದಲ್ಲಿ ಪಾಠ ಕಲಿತವರು ಪುಣ್ಯವಂತರು. ಅಂತಹ ಚಿರಂತನ ವಿದ್ಯೆಯನ್ನು ಹೇಳಿಕೊಟ್ಟ ಪವಿತ್ರ ಸ್ಥಳ ಈ ಜಿಲ್ಲೆ.

ಬಹಮನಿ ಸುಲ್ತಾನರ ಕಾಲದಲ್ಲಿ ಮಸೀದಿಗಳಲ್ಲಿ ಶಿಕ್ಷಣ ಪ್ರಸಾರವಾಗುತ್ತಿತ್ತು. ಬಹಮನಿ ರಾಜ್ಯದ ಪ್ರಧಾನಿಯಾಗಿದ್ದ ಮಹಮೂದ ಗವಾನನ ಹೆಸರು ಶಿಕ್ಷಣ ಕ್ಷೇತ್ರದಲ್ಲಿ ಅಮರವಾ

ದುದು. ಆತ ಕ್ರಿ. ಶ. ೧೪೭೨ ರಲ್ಲಿ ಬೀದರದಲ್ಲಿ ಒಂದು ವಿದ್ಯಾಲಯ ಸ್ಥಾಪಿಸಿದ. ಆಗ ದೇಶ-ವಿದೇಶಗಳಿಂದ ಮೇಧಾವಿಗಳು ಬೀದರಕ್ಕೆ ಬಂದರು. ೩೦೦೦ ಕೈಬರಹದ ಪ್ರತಿಗಳು ಆ ವಿದ್ಯಾಲಯದ ಗ್ರಂಥಾಲಯದಲ್ಲಿದ್ದುವಂತೆ. ಅದುವೇ ಗವಾನ ವಿದ್ಯಾಲಯ. ಮುಂದಿನ ಅರ್ಧಭಾಗ ಸಿಡಿಲಿನ ಹೊಡೆತಕ್ಕೆ ಬಿದ್ದು ಹೋಗಿ ಉಳಿದ ಕಟ್ಟದ ಹಿಂದಿನ ನೆನಪನ್ನು ಹೊತ್ತು ನಿಂತುಕೊಂಡಿದೆ.

೧೮೪೫ ರ ನಂತರ ಹೈದ್ರಾಬಾದ ನಿಜಾಮನ ಕಾಲಕ್ಕೆ ಈ ಜಿಲ್ಲೆಯಲ್ಲಿ ಉರ್ದುವಿನಲ್ಲಿ ಶಿಕ್ಷಣ ಪ್ರಾರಂಭವಾಯಿತು. ೧೮೭೩ರಲ್ಲಿ ಇಂಗ್ಲೀಷ ಶಿಕ್ಷಣ ಪ್ರಾರಂಭವಾಯಿತು. ಕ್ರಿಶ್ಚಿಯನ್ ಮಿಶನರಿಗಳು ನಡೆಸುತ್ತಿದ್ದ ನೊರೆಮನ್ ಫೆಂಡ್ರಿಕ್ ಶಿಕ್ಷಣಸಂಸ್ಥೆ ಈ ಜಿಲ್ಲೆಯಲ್ಲಿ ಪ್ರಾರಂಭವಾಯಿತು. ಉರ್ದು-ಮರಾಠಿ ಭಾಷೆಗಳ ಅಪಸರದ ಪ್ರಚಾರದಲ್ಲಿ ಕನ್ನಡ ಮೂಲೆಗುಂಪಾಗುವ ಸ್ಥಿತಿ ಬಂತು. ೧೯೬೦ ರ ವರೆಗೆ ಉಚ್ಚ ಶಿಕ್ಷಣಕ್ಕೆ ಸೌಕರ್ಯಗಳೇ ಇರಲಿಲ್ಲ. ಗುಲಬರ್ಗಾದ 'ಹೈದ್ರಾಬಾದ ಕರ್ನಾಟಕ ಶಿಕ್ಷಣ ಸಂಸ್ಥೆ'ಯವರು ೧೯೬೦ ರಲ್ಲಿ ಬೀದಗದಲ್ಲಿ ಭೂಮರಡ್ಡಿ ಕಾಲೇಜ ಪ್ರಾರಂಭಿಸಿದರು.

ಇತ್ತೀಚೆಗೆ ಈ ಜಿಲ್ಲೆಯಲ್ಲಿ ಶಿಕ್ಷಣದ ಪ್ರಸಾರ ಸಾಕಷ್ಟಾಗಿದೆ. ಕರ್ನಾಟಕ ರಾಜ್ಯದ ಉಳಿದ ಜಿಲ್ಲೆಗಳಲ್ಲಿಯ ಪ್ರತಿಯೊಂದು ತಾಲೂಕಾಗಳಲ್ಲಿ ಡಿಗ್ರಿ ಕಾಲೇಜುಗಳಿಲ್ಲ. ಆದರೆ ಬೀದರ ಜಿಲ್ಲೆಯಲ್ಲಿ ಮಾತ್ರ ಪ್ರತಿಯೊಂದು ತಾಲೂಕಿಗೂ ಒಂದೊಂದು ಡಿಗ್ರಿ ಕಾಲೇಜು ಇದೆ. ಬಿ. ವ್ಹಿ. ಭೂಮರಡ್ಡಿ ಕಾಲೇಜ, ಕರ್ನಾಟಕ ಕಾಮರ್ಸ ಕಾಲೇಜ, ಅಕ್ಕಮಹಾದೇವಿ ಮಹಿಳಾ ಕಾಲೇಜ, ಸರಕಾರಿ ಪ್ರಥಮ ದರ್ಜೆ ಕಾಲೇಜ, ಕರ್ನಾಟಕ ಕಾಯ್ದೆ

ಕಾಲೇಜ, ಸರಕಾರಿ ಪೊಲಿಟೆಕ್ನಿಕ್ ಕಾಲೇಜ, ಸರಕಾರಿ ಜ್ಯೂನಿಯರ ಕಾಲೇಜ, ಸರಕಾರಿ ಮಹಿಳಾ ಜ್ಯೂನಿಯರ ಕಾಲೇಜ ಎನ್.ಎಫ್. ಎಚ್. ಎಸ್. ಜ್ಯೂನಿಯರ ಕಾಲೇಜ ಈ ಮುಂತಾದ ಕಾಲೇಜುಗಳೆಲ್ಲಾ ಬೀದರ ನಗರದಲ್ಲಿದ್ದರೆ, ಚೆನ್ನಬಸವೇಶ್ವರ ಕಾಲೇಜ ಭಾಲ್ಕಿಯಲ್ಲಿ, ಖೂಬಾ ಬಸವೇಶ್ವರ ಕಾಲೇಜ ಮತ್ತು ಸರಕಾರಿ ಜ್ಯೂನಿಯರ ಕಾಲೇಜಗಳು ಬಸವ ಕಲ್ಯಾಣದಲ್ಲಿ, ವೀರಭದ್ರೇಶ್ವರ ಡಿಗ್ರಿಕಾಲೇಜ ಮತ್ತು ಸರಕಾರಿ ಜ್ಯೂನಿಯರ ಕಾಲೇಜುಗಳು ಹುಮನಾಬಾದದಲ್ಲಿ,ಸರಕಾರಿ ಜ್ಯೂನಿಯರ ಕಾಲೇಜ ಚಿಟಗುಪ್ಪದಲ್ಲಿ ಮತ್ತು ಅಮರೇಶ್ವರ ಡಿಗ್ರಿಕಾಲೇಜ ಹಾಗೂ ಅಮರೇಶ್ವರ ಜ್ಯೂನಿಯರ ಕಾಲೇಜುಗಳು ಔರಾದಲ್ಲಿ ತಲೆಯೆತ್ತಿ ನಿಂತಿವೆ.

ಇವೆಲ್ಲಾ ಉಚ್ಚ ಶಿಕ್ಷಣವನ್ನು ಕೊಡುವ ಮಹಾವಿದ್ಯಾಲಯಗಳಾದರೆ ಪ್ರೌಢ ಮತ್ತು ಮಾಧ್ಯಮಿಕ ಶಿಕ್ಷಣವನ್ನೊದಗಿಸುವ ಅನೇಕ ಶಾಲೆಗಳು ಬೀದರ ಜಿಲ್ಲೆಯಲ್ಲಿವೆ. ಐದೂ ತಾಲೂಕುಗಳಲ್ಲಿ ಮತ್ತು ಚಿಟಗುಪ್ಪಾದಲ್ಲಿ ಸರಕಾರಿ ಗ್ರಂಥಾಲಯುಗಳಿವೆ. ಇವಲ್ಲದೆ ಹಳ್ಳಿಗಳಲ್ಲಿ ಅನೇಕ ಸಂಘ ಸಂಸ್ಥೆಗಳ ವಾಚನಾಲಯುಗಳಿವೆ. ಈ ಜಿಲ್ಲೆಯ ಸಾಕ್ಷರತೆ ಈಗ ಶೇಕಡಾ ೪೫% ರಷ್ಟಿದೆ. ಪ್ರತಿವರ್ಷ ಪದವೀಧರರ ಸ್ನಾತಕೋತ್ತರ ಪದವೀಧರರ ಸಂಖ್ಯೆ ಹೆಚ್ಚುತ್ತಲಿವೆ. ಈ ಜಿಲ್ಲೆಗೆ ತಾಂತ್ರಿಕವಾದಂತಹ ಮತ್ತು ಎಂಜಿನೀಯರಿಂಗ ಹಾಗೂ ಎಂ.ಬಿ.ಬಿ.ಎಸ್. ಕಾಲೇಜುಗಳಂತಹವುಗಳ ಅವಶ್ಯಕತೆಯಿದೆ. ಒಟ್ಟಿನಲ್ಲಿ ಈ ಜಿಲ್ಲೆ ಇತ್ತೀಚೆಗೆ ಶೈಕ್ಷಣಿಕವಾಗಿ ಮುಂದುವರೆಯುಹತ್ತಿದೆ.

೬. ಪ್ರೇಕ್ಷಣೀಯ ಸ್ಥಳಗಳು

ರಾಜ್ಯದ ಪ್ರೇಕ್ಷಣೀಯ ಸ್ಥಳಗಳಲ್ಲಿ ಬೀದರ ಕೂಡ ಒಂದು ಪ್ರಸಿದ್ಧ ಪ್ರೇಕ್ಷಣೀಯ ಸ್ಥಳಗಳನ್ನೊಳಗೊಂಡ ಜಿಲ್ಲೆ. ಬೀದರ ಕೋಟೆ, ಬಸವ ಕಲ್ಯಾಣದ ಮಂದಿರ–ಗುಹೆಗಳು, ಮಸೀದಿ–ಗುಂಬಾಜಗಳು ಕೇವಲ ವಿಹಾರ ಸ್ಥಳಗಾಗಿರದೆ ಧರ್ಮ–ಸಂಸ್ಕೃತಿಯ ದ್ಯೋತಕಗಳಾಗಿವೆ. ಕಲಾನೈಪುಣ್ಯದಿಂದೊಡಗೂಡಿ ನಿಜವಾಗಿಯೂ ಪ್ರೇಕ್ಷಣೀಯವಾಗಿವೆ. ದೇಶವಿದೇಶಗಳಿಂದ ಈ ಜಿಲ್ಲೆಯ ಬಸವಕಲ್ಯಾಣ ನೋಡುವದಕ್ಕೆ ಬೀದರ ಕೋಟೆ ಕಾಣಲಿಕ್ಕೆ ಅನೇಕ ಜನ ಪ್ರವಾಸಿಗರು ಬರುತ್ತಾರೆ.

ಬೀದರ ಕೋಟೆ :–

ದೇಶದ ಪ್ರಸಿದ್ಧ ಕೋಟೆಗಳಲ್ಲಿ ಬೀದರ ಕೋಟೆಯೂ ಒಂದು. ಅತ್ಯಂತ ಬೃಹತ್ತಾಗಿದೆ. ಕೋಟೆಯ ಹೊರಸುತ್ತಳತೆ ಸುಮಾರು ೪ ಕಿ. ಮಿ. ಗಳಿಷ್ಟಿದ್ದು ದೊಡ್ಡಕಲ್ಲುಗಳ ಭದ್ರ ಬುನಾದಿಯ ಮೇಲೆ ಇಂದಿಗೂ ಹೆಚ್ಚಿನ ಭಗ್ನತೆ ಹೊಂದದೆ ಉಳಿದಿದೆ. ಬಹಮನಿ ರಾಜ್ಯದ ಸುಲ್ತಾನ ಅಹಮ್ಮದಶಹ ೧೪೨೮ರಲ್ಲಿ ಬೀದರನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡ. ಆಗ ಅದೇ ಕಾಲಕ್ಕೆ ಈ ಸುಲ್ತಾನ ಬೀದರಕೋಟೆಯನ್ನು ಕಟ್ಟಿಸಿದನೆಂದು ಹೇಳಲಾಗುತ್ತದೆ. ಆದರೆ ಬೀದರ ಕಾಕತೀಯರ ಆಧೀನದಲ್ಲಿದ್ದಾಗಲೇ ಈ ಕೋಟೆಯ ಬುನಾದಿ ಹಾಕಲಾಗಿತ್ತೆಂದು ತಿಳಿದು ಬರುತ್ತದೆ. ವಿಭಿನ್ನದೇಶದ ಎಂಜಿನಿಯರುಗಳನ್ನು ಹಾಗೂ ಶಿಲ್ಪಿಗಳನ್ನು ಈ ಕೋಟೆಯ ನಿರ್ಮಾಣ ಕಾರ್ಯದಲ್ಲಿ

ತೊಡಗಿಸಲಾಗಿತ್ತೆಂಬ ಉಲ್ಲೇಖವಿದೆ. ಕೋಟೆಯ ಪ್ರಮುಖ ದ್ವಾರ ದಕ್ಷಿಣ–ಪೂರ್ವ ಮಧ್ಯವಿದ್ದು ಅಂಕುಡೊಂಕಾದ ಮಾರ್ಗದ ಮಧ್ಯೆ ಮತ್ತೆ ಮೂರು ಪ್ರವೇಶದ್ವಾರಗಳಿವೆ. ಕೋಟೆಯ ಕೆಲ ಒಳಭಾಗಗಳಲ್ಲಿ ಮಾಡಿಸಲಾದ ವರ್ಣರಂಜಿತ ಕಲೆಯನ್ನು ಈಗಲೂ ನೋಡಬಹುದಾಗಿದೆ. ತಖ್ತಿಮಹಲ್ ಟರಕಶ್ ಮಹಲ್, ಗಗನಮಹಲ್, ರಂಗೀನಮಹಲ್, ಸಭಾಸದನ, ಟಂಕ ಶಾಲೆ, ಆಯುಧ ಶಾಲೆ, ಸ್ನಾನಗೃಹಗಳು ಕೋಟೆಯಲ್ಲಿ ಕಾಣಿಸುವ ಅವಶೇಷಗಳು. ಕೋಟೆಯ ಒಳಭಾಗದಲ್ಲಿ ಸುಮಾರು ಮೂವತ್ತೇಳು ಬುರುಜು (ಕೊತ್ತಲು) ಗಳಿವೆ. ಅಲ್ಲಲ್ಲಿ ದೊಡ್ಡ–ದೊಡ್ಡ ತೋಪುಗಳನ್ನಿಡಲಾಗಿದೆ. ಅವುಗಳ ಮೇಲೆ ಅವುಗಳ ಉತ್ಪಾದಕರ ಹೆಸರುಗಳೂ ಇವೆ. ಕೋಟೆಯಲ್ಲಿ ವೀರಸಂಗಯ್ಯನ ಸ್ಮಾರಕ ಮತ್ತು ಭವಾನಿ ಮಂದಿರಗಳಿವೆ.

ಗವಾನ ಮಹಾವಿದ್ಯಾಲಯ : ಯೋಜನೆ ಮತ್ತು ಕಲಾನೈಪುಣ್ಯತೆಯಲ್ಲಿ ವೈಶಿಷ್ಟ್ಯತೆ ಹೊಂದಿದ ಅಪೂರ್ವ ಕಟ್ಟಡ ಇದಾಗಿದೆ. ಅತೀ ಎತ್ತರ ಹಾಗೂ ಅಗಲದ ತಳಪಾಯ ಇದಕ್ಕುಂಟು. ಇದು ೬೨.೫೩ × ೫೪.೯ ಮೀಟರ ಉದ್ದಗಲಗಳ ವಿಸ್ತೀರ್ಣತೆ ಹೊಂದಿದೆ. ಇದಕ್ಕೆ ೩೯೯.೬ ಮೀಟರ್ ಎತ್ತರದ ಒಂದು ಗೋಪುರವಿದೆ. ರಂಗು–ರಂಗಿನ ಮಣಿಕಲ್ಲುಗಳಿಂದ ಅಲಂಕರಿಸಲ್ಪಟ್ಟಿದೆ.

ಬಹಮನಿ ಕಾಲದ ಕಟ್ಟಡಕ್ಕೆ ಮದರಸಾ ಎಂಬ ಹೆಸರುಂಟು. ಅಂತೆಯೇ ಇದಕ್ಕೆ ಗವಾನ ಮದರಸಾ ಎಂತಲೂ ಕರೆಯುತ್ತಾರೆ. ಶಿಲ್ಪಕಲಾ ಚಾತುರ್ಯ ಮತ್ತು ಕಟ್ಟಡದ

ಯೋಜನೆ ಇವೆರಡರಲ್ಲಿಯೂ ವೈಶಿಷ್ಟ್ಯತೆ ಇದೆ. ಕ್ರಿ. ಶ. ೧೪೭೨ ರಲ್ಲಿ ಮುಹಮ್ಮದ ಗವಾನನು (ಖ್ವಾಜಾ ಮುಹಮ್ಮದ ಜಿಲಾನಿ) ಈ ಮಹಾವಿದ್ಯಾಲಯವನ್ನು ಕಟ್ಟಿಸಿದನು. ಪೂರ್ವಕ್ಕೆ ಹೆಬ್ಬಾಗಿಲ ಹೊಂದಿದ್ದು ಕಟ್ಟಡದ ಎಡಬಲ ಭಾಗಗಳಲ್ಲಿ ಎತ್ತರವಾದ ಗೋಪುರಗಳಿದ್ದವು. ಕ್ರಿ. ಶ. ೧೬೫೬ರಲ್ಲಿ ಸಿಡಿಲಿನ ಅಪಘಾತಕ್ಕೆ ಈ ಕಟ್ಟಡ ಬಲಿಯಾಗಿ ಈಗ ವಿಕೃತಗೊಂಡ ಒಂದೇ ಟಾವರ್ ಇದೆ. ಮೂರು ಅಂತಸ್ತುಗಳನ್ನು ಹೊಂದಿದ ಈ ಕಟ್ಟಡದಲ್ಲಿ ಪ್ರಯೋಗಾಲಯ, ಉಪನ್ಯಾಸ ಮಂದಿರ ಪ್ರಾಧ್ಯಾಪಕರ ಮತ್ತು ವಿದ್ಯಾರ್ಥಿಗಳ ವಸತಿ ನಿಲಯಗಳು ಕಂಡುಬರುತ್ತವೆ. 'ಮಿರಾಸಿನ' ಕೆಲ ಉಕ್ತಿಗಳು ಕೆಲಭಾಗಗಳಲ್ಲಿ ಈಗಲೂ ಕಾಣಸಿಗುತ್ತವೆ. ಇಲ್ಲಿ ಅರೇಬಿಯಾ ಮತ್ತು ಪರ್ಶಿಯಾ ಭಾಷೆಗಳನ್ನು ಕಲಿಸುವದರೊಂದಿಗೆ ಮತ, ಧರ್ಮಶಾಸ್ತ್ರ, ತತ್ವಶಾಸ್ತ್ರ ಹಾಗೂ ಗಣಿತ ಶಾಸ್ತ್ರಗಳನ್ನು ಕಲಿಸಲಾಗುತ್ತಿತ್ತು. ಗುರುವೃಂದ, ಹಾಗೂ ವಿದ್ಯಾರ್ಥಿಗಳು ಇಲ್ಲಿಯೇ ಇರುತ್ತಿದ್ದರಂತೆ. ಕಲಾಕೃತಿಯ ಅವಶೇಷಗಳು ಮಾತ್ರ ಉಳಿದುಕೊಂಡಿವೆ.

ಚೌಬಾರಾ :

ಎತ್ತರವಾದ ಗೋಪುರ ಮಾದರಿಯ ಈ ಕಟ್ಟಡ ಬೀದರ ನಗರದ ಮಧ್ಯದಲ್ಲಿ ನಾಲ್ಕು ರಸ್ತೆಗಳು ಕೂಡುವಲ್ಲಿ ನಿರ್ಮಾಣವಾಗಿದೆ. ಈ ಗೋಪುರದ ಎತ್ತರ ೭೧ ಅಡಿ ಇದ್ದು ಸುತ್ತಳತೆ ೩೩೬ ಅಡಿ ಇದೆ. ಬಹಮನಿ ಸುಲ್ತಾನರ ಕಾಲದಲ್ಲಿ ಇದು ನಿರ್ಮಿತವಾಗಿದೆ. ನಗರ ಮಧ್ಯದಲ್ಲಿದ್ದು ನಿರೀಕ್ಷಣಾ ತಾಣವಾಗಿರಬಹುದು. ೧೯೨೨ ಕ್ಕಿಂತ ಮೊದಲು ಈ ಕಟ್ಟಡದ ಮೇಲೆ ಬೃಹದಾಕಾರದ ಗಡಿಯಾರ ಇತ್ತೆಂದು ತಿಳಿದುಬರುತ್ತದೆ

ಈಗ ಗಡಿಯಾರ ಇಲ್ಲ. ಬರೀ ಎತ್ತರವಾದ ಗೋಪುರ ಮಾತ್ರ ಇದೆ.

ನಾನಕ ಝರಾ :

ಬೀದರ ಪಟ್ಟಣದಿಂದ ಸುಮಾರು ೩ ಕಿ. ಮೀ. ದೂರದ ಮೇಲೆ ಸದಾ ಎಡೆಬಿಡದೆ ನೀರು ಚಿಮ್ಮುವ ಚಿಲುಮೆಯೂ ನಾನಕಝರಾ. ಇದು ಈ ಜಿಲ್ಲೆಯ ಅತ್ಯಂತ ಪ್ರಸಿದ್ಧವಾದ ಪ್ರೇಕ್ಷಣೀಯ ಸ್ಥಳ. ಗುರುನಾನಕರಿಂದಲೇ ನಿರ್ಮಾಣವಾದ ಈ ತಾಣ ಸಿಕ್ಖ ಜನರ ಪವಿತ್ರಕ್ಷೇತ್ರ. ಧರ್ಮಸುಧಾರಕರಾದ ಗುರುನಾನಕರು ತಮ್ಮ ಸಂಚಾರದಲ್ಲಿ ಇಲ್ಲಿಗೆ ಬಂದು ನೆಲಸಿ ತಮ್ಮ ತಪೋಶಕ್ತಿಯಿಂದ ಇಲ್ಲಿ ಯಾವಾಗಲೂ ಕುಡಿಯುವ ನೀರು ಸಿಗುವಂತೆ ಝರಿ ಮಾಡಿದರೆಂದು ಪ್ರತೀತಿ ಇದೆ. ಇತ್ತೀಚೆಗೆ ಕಟ್ಟಿಸಲಾದ ಇಲ್ಲಿನ ಗುರುದ್ವಾರ ಕಟ್ಟಡ ಸುಂದರ ವಾಗಿದೆ. ದೇಶ–ವಿದೇಶಗಳಿಂದ ಅನೇಕ ಯಾತ್ರಿಕರು ಇಲ್ಲಿಗೆ ಬಂದು ಈ ಝರಾದಲ್ಲಿಯ ಸಿಹಿ ನೀರನ್ನು ಬಾಟ್ಲಿಗಳಲ್ಲಿ ತುಂಬಿ ಕೊಂಡು ಹೋಗುತ್ತಾರೆ. ಈ ನೀರನ್ನು ಕುಡಿದರೆ ಯಾವ ಕಾಯಿಲೆಯೂ ಬರುವದಿಲ್ಲವೆಂಬ ನಂಬಿಕೆಯೂ ಇದೆ. ಇಲ್ಲಿ ಸರೋವರ ಮತ್ತು ಅಮೃತಕುಂಡಗಳ ಕಟ್ಟಡ ರೂಪಗೊಂಡಿವೆ. ಯಾತ್ರಾರ್ಥಿಗಳು ಇಳಿದುಕೊಳ್ಳುವದಕ್ಕೆ ದೊಡ್ಡದಾದ ವಸತಿ ಗ್ರಹವಿದೆ. ಗುರುನಾನಕ ಹೆಸರಿನ ಆಸ್ಪತ್ರೆಕೂಡಾ ಇಲ್ಲಿ ಸೇವೆ ಸಲ್ಲಿಸುತ್ತಾರೆ.

ನರಸಿಂಹಝರಾ: — ನಗರದಿಂದ ದಕ್ಷಿಣಕ್ಕೆ ೨ ಕಿ. ಮೀ. ಅಂತರದಲ್ಲಿರುವ ಇದೊಂದು ಅಪೂರ್ವವಾದ ಗುಹಾಂತರ ನರಸಿಂಹ ದೇವಾಲಯ. ಸುರಂಗಮಾರ್ಗದಂತಿರುವ ಗವಿಯಲ್ಲಿ ಈ

ದೇವಾಲಯ ಅಡಗಿದೆ. ಇತ್ತೀಚಿಗೆ ಮೇಲ್ಭಾಗದಲ್ಲಿ ಕಟ್ಟಲಾದ ಮಸೀದೆಯೊಂದಿದೆ. ಹಿರಣ್ಯಕಶ್ಯಪನ ಸಂಹಾರ ಮಾಡಿದ ವಿಷ್ಣು ಆನಂತರದಲ್ಲಿ ಝರಾಸುರನೆಂಬ ರಕ್ಕಸನನ್ನು ಕೊಂದು ಆ ರಕ್ಕಸನ ಕೊನೆಯ ಇಚ್ಛೆಯ ಪ್ರಕಾರ ಈ ಗುಹೆಯಲ್ಲಿ ಬಂದು ನೆಲೆಸಿದನೆಂಬ ಪೌರಾಣಿಕ ಕಥೆ ಇದೆ. ಗುಹೆಯ ಕೊನೆಯಲ್ಲಿ ನರಸಿಂಹನ ಕಲ್ಪನೆಯ ಕಲ್ಲಿನ ಮೂರ್ತಿ ಇದೆ. ಈ ಗುಹೆಯಲ್ಲಿರುವ ಕಾಲುವೆಯ ಉದ್ದಳತೆ ಸುಮಾರು ೬೧ ಮೀಟರ ಮತ್ತು ೨ ಮೀಟರ ಅಗಲ ವಾಗಿದೆ. ಕಾಲುವೆಯಲ್ಲಿ ೧.೩೭ ಮೀಟರದಷ್ಟು ಆಳದಲ್ಲಿ ಸದಾ ಹರಿಯುವ ನೀರು ಇರುತ್ತದೆ. ಇಲ್ಲಿಗೆ ಹಲವಾರು ಯಾತ್ರಾರ್ಥಿ-ಗಳು ಬರುತ್ತಾರೆ. ದೇವಾಲಯದ ಸುತ್ತಲೂ ವಿಶಾಲವಾದ ಗಿಡ ಗಳು ತಣ್ಣೆಳಲನ್ನು ಕೊಡುತ್ತವೆ.

ಪಾಪನಾಶಿ ಕ್ಷೇತ್ರ:— ಪುರಾಣ ಪ್ರಸಿದ್ಧವಾದ ಈ ಪುಣ್ಯ ಕ್ಷೇತ್ರ ಬೀದರನಗರದಿಂದ ೩ಕಿ.ಮಿ. ಅಂತರದಲ್ಲಿದೆ. ಇಲ್ಲೊಂದು ಈಶ್ವರ ದೇವಾಲಯವಿದೆ. ಇದನ್ನು ರಾಮೇಶ್ವರ ಎಂತಲೂ ಕರೆಯುತ್ತಾರೆ. ದೇವಾಲಯದ ಎಡಗಡೆ ನೈಸರ್ಗಿಕ ನೀರಿನ ಚಿಲುಮೆ ಹಾಗೂ ಕೊಳಗಳಿವೆ. ಇದನ್ನೇ ಪಾಪನಾಶಿ ಕ್ಷೇತ್ರವೆಂದು ಕರೆಯುತ್ತಾರೆ.

ಜ್ಯೋತಿರ್ಲಿಂಗಗಳಲ್ಲೊಂದಾದ ಲಿಂಗ ಇಲ್ಲಿರುವದೆಂದೂ ಹಿಂದೆ ಶುಕ್ರಾಚಾರ್ಯರು ಇದನ್ನು ಪೂಜಿಸುತ್ತಿದ್ದರೆಂದು ಮತ್ತು ಲಂಕೆಯಿಂದ ಅಯೋಧ್ಯೆಗೆ ಮರಳುವಾಗ ಶ್ರೀರಾಮಚಂದ್ರ ಇಲ್ಲಿ ತಂಗಿದ್ದನೆಂಬ ಪ್ರತೀತಿಗಳಿವೆ. ಈ ಹೊಂಡದಲ್ಲಿ ಸ್ನಾನ ಮಾಡು ವದರಿಂದ ಪಾಪ ಪರಿಹಾರವಾಗುತ್ತದೆಂದು ಅಂತೆಯೇ ಈ ಕ್ಷೇತ್ರಕ್ಕೆ ಪಾಪನಾಶಿ ಎಂದು ಕರೆಯುತ್ತಾರೆ. ಪ್ರತಿವರ್ಷ

ಶಿವರಾತ್ರಿಯಲ್ಲಿ ಇಲ್ಲಿ ಜಾತ್ರೆಯಾಗುತ್ತದೆ. ಅಸಂಖ್ಯಾತ ಭಕ್ತರು ಸೇರಿರುತ್ತಾರೆ.

ಆಂಜನೇಯ ದೇವಸ್ಥಾನ : ಬೀದರದಲ್ಲಿ ನಗರದ ಹೊರಗಡೆ ಜನವಾಡಾ ರಸ್ತೆಯಲ್ಲಿರುವ ಆಂಜನೇಯ ದೇವಸ್ಥಾನ ಅತ್ಯಂತ ಪ್ರಸಿದ್ಧವಾದುದು. ಸಹಸ್ರಾರು ಜನ ಭಕ್ತರು ದೇವ ಸ್ಥಾನಕ್ಕೆ ಅತ್ಯಂತ ಭಕ್ತಿಯಿಂದ ನಡೆದುಕೊಳ್ಳುತ್ತಾರೆ. ಹನುಮಂತ ಅಚ್ಚ ಕನ್ನಡಿಗ. ರಾಮಭಕ್ತನಾದ ಆತನ ಮಹಿಮೆ ಈ ಜಿಲ್ಲೆಯಲ್ಲಿ ಬಹುವಾಗಿ ವ್ಯಾಪಿಸಿದೆ. ಈ ದೇವಸ್ಥಾನವೂ ಕೂಡ ವಿಶಾಲ ವಾಗಿದೆ.

ಬಸವ ಕಲ್ಯಾಣ:- ಬೀದರ ನಗರದಿಂದ ಸುಮಾರು ೮೦ಕಿ.ಮೀ. ದೂರದ ಮೇಲೆ ಹಿಂದಿನ ಐತಿಹಾಸಿಕ ಅವಶೇಷಗಳನ್ನು ಹೊತ್ತು ಇಂದಿಗೂ ತಲೆಎತ್ತಿ ನಿಂತು ಅಸಂಖ್ಯಾತ ಪ್ರವಾಸಿಗರನ್ನು ಬರಮಾಡಿಕೊಳ್ಳುವ ಸುಂದರವಾದ ಪಟ್ಟಣ ಇದಾಗಿದೆ. ಜಿಲ್ಲೆಯ ಐದು ತಾಲೂಕಾಗಳಲ್ಲಿ ಇದೂ ಒಂದು. ೧೦ನೆಯ ಶತಮಾನದ ಉತ್ತರಾರ್ಧದಲ್ಲಿ ಚಾಲುಕ್ಯರು ಮಾನ್ಯಖೇಟದಿಂದ ಇಲ್ಲಿಗೆ ತಮ್ಮ ರಾಜಧಾನಿಯನ್ನು ವರ್ಗಾಯಿಸಿದ ನಂತರವೇ ಇದಕ್ಕೆ ಐತಿಹಾಸಿಕ ಪ್ರಾಮುಖ್ಯತೆ ಬಂದದ್ದು. ಅಂದು ಇದು ಸಂಪದ್ಭರಿತವಾದ ನಾಡಾಗಿ ವೈಭವದಿಂದ ಮೆರೆದಿತ್ತು. ಬಸವ, ಅಲ್ಲಮ, ಚೆನ್ನಬಸವ, ಸಿದ್ಧರಾಮ, ಮಹಾದೇವಿಯಕ್ಕ ಇನ್ನೂ ಮೊದ ಲಾದ ಶರಣ-ಶರಣೆಯರ ಸದ್ಭಾವಗಳು ಇಲ್ಲಿನ ಅನುಭವ ಮಂಟಪದಲ್ಲಿ ನಡೆಯುತ್ತಿದ್ದವು. ಆಧ್ಯಾತ್ಮಿಕ ಅನುಭವದ ಸುಧೆಯನ್ನು ನೀಡುವ ತಾಣ ಇದಾಗಿತ್ತು. ಧಾರ್ಮಿಕ- ಸಾಮಾಜಿಕ ಕ್ರಾಂತಿಭೂಮಿಯಾದ ಈ ಕಲ್ಯಾಣದಲ್ಲಿ ಅಂದಿನ

ವೈಭವದ ಕಲ್ಪನೆ ಕಣ್ಮುಂದೆ ಕಟ್ಟುವಂತಹ ಅವಶೇಷಗಳು ಉಳಿದಿಲ್ಲ. ಅಳಿದುಳಿದ ಅವಶೇಷಗಳು ಮಾತ್ರ ಪ್ರವಾಸಿಗರನ್ನು ಆಕರ್ಷಿಸುತ್ತವೆ.

ಕಲ್ಯಾಣ ಪಟ್ಟಣದ ಉತ್ತರಕ್ಕಿರುವ ಭದ್ರವಾದ ಕೋಟೆಯಲ್ಲಿ ಶೋಧಿಸಲಾದ ಲಕ್ಷ್ಮೀಮಂದಿರವಿದೆ. ಬಸವೇಶ್ವರಮಂದಿರ ಪಟ್ಟಣದ ಮಧ್ಯದಲ್ಲಿದೆ. ಪ್ರತಿ ಸೋಮವಾರ ವಿಶೇಷ ಪೂಜೆ ನಡೆಯುತ್ತಿದೆ. ವೈಶಾಖದಲ್ಲಿ ಪ್ರತಿ ವರ್ಷಕ್ಕೊಮ್ಮೆ ಜಾತ್ರೆಯಾಗುತ್ತದೆ. ಪರಸುಕಟ್ಟೆ, ಪ್ರಭುದೇವರ ಗದ್ದುಗೆ, ತ್ರಿಪುರಾಂತಕ ಕೆರೆ, ಅಕ್ಕನಾಗಮ್ಮನ ಗವಿ, ಬಸವೇಶ್ವರರ ಮಹಾಮನೆ, ಮಡಿವಾಳ ಮಾಚಯ್ಯನ ಮಂದಿರ, ಅರಿವಿನ ಗವಿ, ಬಸವ ವನ ಇನ್ನೂ ಅನೇಕ ಮಂದಿರ-ಗವಿಗಳು ಜನರನ್ನು ಇಂದಿಗೂ ಬೆರಗುಗೊಳಿಸುತ್ತವೆ. ಗೋಸಾವಿ ಮಠ (ಮಹಂತಮಠ) ತನ್ನ ಪರಂಪರೆ ಉಳಿಸಿಕೊಂಡು ಬಂದಿದೆ.

ನವಸಮಾಜದ ನಿರ್ಮಾಣಕ್ಕೆ, ಮಾನವಧರ್ಮದ ಉಳಿವಿಗೆ ಹೊಸ ವ್ಯಾಖ್ಯಾನ ಬರೆದ ಶರಣರ ಈ ಪವಿತ್ರ ಭೂಮಿಯಲ್ಲಿ ಈಗ ಉಳಿದಿರುವದು ಕೇವಲ ಅವರ ನೆನಪು ಮಾತ್ರ.

ಜಲಸಂಗಿ:- ಹುಮನಾಬಾದದಿಂದ ೧೦ ಕಿ.ಮೀ. ದೂರದಲ್ಲಿರುವ ಪ್ರಾಚೀನ ಹಳ್ಳಿಇದಾಗಿದೆ. ಪಾಂಡವರು ತಮ್ಮ ವನವಾಸದ ದಿನಗಳಲ್ಲಿ ಗುಪ್ತವಾಗಿ ವಿರಾಟ ರಾಜನ ಆಶ್ರಯದಲ್ಲಿದ್ದರು. ಆ ವಿರಾಟ ರಾಜನ ರಾಜಧಾನಿಯೇ ಈ ಜಲಸಂಗಿಯೆಂದು ಸ್ಥಳೀಯ ಪ್ರತೀತಿಯುಂಟು. ಕೆರೆಯ ದಡದ ಮೇಲೆ ಅವಶೇಷದೊಂದಿಗೆ ನಿಂತ ಈಶ್ವರ ದೇವಾಲಯ ಆಕರ್ಷಿಸುತ್ತದೆ. ಚಾಲುಕ್ಯ ದೊರೆ ಆರನೆಯ ವಿಕ್ರಮಾದಿತ್ಯನ ಕಾಲದ್ದೆಂದು ಹೇಳಲಾಗುವ

ಈ ದೇವಾಲಯದ ಹೊರಮುಗ್ಗಲು ಬೆರಗುಗೊಳಿಸುವ ಶಿಲ್ಪ ಕಲೆಯುಂಟು. ವಿವಿಧ ನೃತ್ಯ ಭಂಗಿಯಲ್ಲಿರುವ ಅನೇಕ ಶಿಲಾ-ಬಾಲಕೆಯರು ಆಕರ್ಷಣೀಯರಾಗಿದ್ದಾರೆ. ಆಭರಣಗಳನ್ನು ಧರಿಸಿದ ಸ್ತ್ರೀಕಲಾಕೃತಿಗಳು ಅತಿಸೂಕ್ಷ್ಮವಾಗಿ ಬಿಡಿಸಿದಂತೆ ಎದ್ದುಕಾಣುತ್ತವೆ ಇಲ್ಲಿ ಇನ್ನೂ ಅನೇಕ ಅಳಿದುಳಿದ ಐತಿಹಾಸಿಕ ಕಟ್ಟಡಗಳು ನೋಡಲು ಸಿಗುತ್ತವೆ.

ಹುಮನಾಬಾದ:- ಜಿಲ್ಲೆಯ ತಾಲೂಕಾ ಕೇಂದ್ರವಾದ ಈ ಊರು ಮುಂಬೈ ಹೈದ್ರಾಬಾದ ಹೆದ್ದಾರಿಯ ಮೇಲಿದೆ. ಕಲ್ಯಾಣ ನಾಡಿನ ಬಾಗಿಲು ಎಂದು ಇದಕ್ಕೆ ಪ್ರತೀತಿ. ಪ್ರಸಿದ್ಧವಾದ ವೀರಭದ್ರೇಶ್ವರನ ದೇವಾಲಯದೆ.ವಿ ಪ್ರತಿವರ್ಷ ಜನೆವರಿಯಲ್ಲಿ ದೊಡ್ಡ ಪ್ರಮಾಣದ ಜಾತ್ರೆಯಾಗುತ್ತದೆ. ಇದರ ಪ್ರಾಚೀನ ಹೆಸರು ಜಯಸಿಂಗನಗರ. ಇದು ಚೇಶ್ವೆಯುವರ ಆಧೀನದಲ್ಲಿತ್ತು. ಚಂದ್ರಸೇನ ಜಾಧವನು ಈ ನಗರಕ್ಕೆ ಜಯಸಿಂಹನಗರವೆಂದು ನಾಮಕರಣ ಮಾಡಿದುದಾಗಿ ತಿಳಿದು ಬರುತ್ತದೆ. ೧೭೨೫ ರ ಸುಮಾರಿಗೆ ಇಲ್ಲಿ ವೀರಭದ್ರೇಶ್ವರ ದೇವಾಲಯ ನಿರ್ಮಾಣವಾಯಿತು.

ಹುಮನಾಬಾದ ಬಳಿ ಇರುವ ಮಾಣಿಕ ನಗರವೂ ಕೂಡಾ ಸಾಕಷ್ಟು ಪ್ರಸಿದ್ಧಿ ಪಡೆದಿದೆ. ೧೯ನೆಯ ಶತಮಾನದ ಪೂರ್ವಾರ್ಧದಲ್ಲಿ ಜೀವಿಸಿದ್ದ ಮಾಣಿಕ ಪ್ರಭುಗಳ ಗದ್ದುಗೆ ಇದೆ. ಅನೇಕ ಸಾಧು ಮಹಾರಾಜರ ಸಮಾಧಿಗಳಿವೆ. ಸುಂದರವಾದ ದೇವಾಲಯವಿದೆ. ವರ್ಷಕ್ಕೊಮ್ಮೆ ನಡೆಯುವ ಉತ್ಸವದಲ್ಲಿ ಸಾವಿರಾರು ಭಕ್ತರು ಸೇರಿರುತ್ತಾರೆ. ಪ್ರಸಿದ್ಧಿ ಪಡೆದ ಶಿಕ್ಷಣ ಕೇಂದ್ರವಿದು.

ಹುಮನಾಬಾದದಿಂದ ೩೮ ಕಿ.ಮೀ. ದೂರದಲ್ಲಿರುವ ಚಾಂಗಲೇರಾ ಸೃಷ್ಟಿ ಸೌಂದರ್ಯದ ಸುಂದರತಾಣ. ಪ್ರಾಚೀನ ದೇವಾಲಯದಲ್ಲಿ ಈಶ್ವರ ವಿಗ್ರಹವಿದೆ.

ಭಾಲ್ಕಿ:– ಇದು ಜಿಲ್ಲೆಯ ತಾಲೂಕಾ ಸ್ಥಳ. ಶಾಸನಗಳ ಪ್ರಕಾರ ಭಲ್ಲೂಕ ನಗರ, ಭಲ್ಲುಂಕೆ, ಭಾಲಿಕೆ, ಭಾಲಿಕಿ ಎಂದು ಕರೆಯಲ್ಪಟ್ಟಿದೆ. ಶಿವಭಕ್ತ ಕುಂಬಾರ ಗುಂಡಯ್ಯನ ಜನ್ಮ ಸ್ಥಳವಿದು. ಭಾಲಕೇಶ್ವರಿ ಮಂದಿರ ಪ್ರಸಿದ್ಧವಾಗಿದೆ. ಧರ್ಮ–ಸಂಸ್ಕೃತಿ ಪ್ರಸಾರಕ್ಕೆ ಹೆಸರಾಂತ ಚೆನ್ನಬಸವೇಶ್ವರ ಹಿರೇಮಠ, ಮಹಾಂತೇಶ್ವರ ಮಠಗಳು ಇರುವದು ಇದೇ ಪಟ್ಟಣದಲ್ಲಿ.

ಬಾಲ್ಕಿ ತಾಲೂಕಿನ ಖಟಕ್ ಚಿಂಚೋಳಿ, ಖಾನಾಪುರ, ಭಾತಮ್ರ, ಸಿದ್ಧೇಶ್ವರ ಮತ್ತು ಹಳ್ಳಿಖೇಡ ಈ ಊರುಗಳೂ ಕೂಡ ಪ್ರಸಿದ್ಧವಾಗಿವೆ. ೧೩ನೆಯ ಶತಮಾನದಲ್ಲಿ ವೀರಶೈವ ಧರ್ಮದ ಪತಾಕೆಯನ್ನು ಹಾರಿಸಿದ ಖಟಕ ಚಿಂಚೋಳಿಯ ಶಾಂತಲಿಂಗೇಶ್ವರಮಠ, ಪುರಾಣ ಪ್ರಸಿದ್ಧ ದೇವಸ್ಥಾನವನ್ನು ಹೊಂದಿ, ಕರ್ನಾಟಕದ ಕಾಳಿ ಎಂದು ಹೆಸರು ಪಡೆದ ಖಾನಾಪುರದ ಖಂಡೋಬಾ ದೇವಸ್ಥಾನ ವಿಶಾಲವಾದ ಭದ್ರ ಕೋಟೆ ಇರುವ ಭಾತಮ್ರದ ವೀರಭದ್ರಮಂದಿರ, ಐನೂರು ವರ್ಷಗಳ ಪ್ರಾಚೀನತೆ ಹೊಂದಿದ ಶಿದ್ಧೇಶ್ವರ ಊರಿನ ಸಿದ್ಧಲಿಂಗ ದೇವಾಲಯ, ಜಿಲ್ಲೆಯ ಬೃಹತ್‌ಸಕ್ಕರೆ ಕಾರ್ಖಾನೆ ಇದ್ದ ಹಳ್ಳಿಖೇಡದ ಸಂಗಮೇಶ್ವರ ಮಂದಿರ ಇವೆಲ್ಲಾ ಭಾಲ್ಕಿ ತಾಲೂಕಿನ ಪ್ರೇಕ್ಷಣೀಯ ಸ್ಥಳಗಳಾಗಿವೆ.

ಔರಾದ:– ಇದು ಬೀದರ ಜಿಲ್ಲೆಯಲ್ಲಿಯ ಅತ್ಯಂತ ದೊಡ್ಡದಾದ ತಾಲೂಕಾ ಮುಖ್ಯಸ್ಥಳ. ಇಲ್ಲಿ ಚಾಲುಕ್ಯರ ಕಾಲದ ಅಮರೇಶ್ವರ ದೇವಸ್ಥಾನ ಅತ್ಯಂತ ಪ್ರಸಿದ್ಧಿ ಪಡೆದಿದೆ. ಈ ತಾಲೂಕಿನ ಅನೇಕ ಹಳ್ಳಿಗಳಲ್ಲಿ ಹಳೆ–ಹೊಸ ಶಿಲಾಯುಗಕ್ಕೆ ಸಂಬಧಿಸಿದ ಅನೇಕ ಅವಶೇಷಗಳು ದೊರಕಿವೆ. ಇಲ್ಲಿಯ ಅಮ

ರೇಶ್ವರ ದೇವರ ಜಾತ್ರೆ ಪ್ರತಿವರ್ಷ ಶಿವರಾತ್ರಿಯಲ್ಲಿ ನಡೆಯುತ್ತದೆ. ದನಗಳ ವ್ಯಾಪಾರ ಕೇಂದ್ರವೆಂದು ಈ ಪಟ್ಟಣ ಪ್ರಸಿದ್ಧಿ ಪಡೆದಿದೆ.

ಇಲ್ಲಿಗೆ ೩೨ ಕಿ.ಮಿ. ದೂರದಲ್ಲಿರುವ ಸಂಗಮ ಪ್ರಸಿದ್ಧ ಯಾತ್ರಾಸ್ಥಳ. ಇಲ್ಲಿ ಕಾರಂಜಾ-ಮಂಜರಾ ನದಿಗಳ ಸಂಗಮ ವಾಗಿದೆ. ಇಲ್ಲಿನ ಸಂಗಮೇಶ್ವರ ಪ್ರಾಚೀನ ದೇವಾಲಯವೂ ನೋಡುವಂತಹದಾಗಿದೆ.

ಇವಲ್ಲದೆ ಬಸವ ಕಲ್ಯಾಣ ಜಿಲ್ಲೆಯ ನಾರಾಯಣಪೂರ, ಚಂಡಕಾಪೂರ, ಉಮಾಪೂರಗಳಲ್ಲಿ ಶಿಲ್ಪಗಳು, ಚಂಡಕಾದೇವಿ ಗಣಪತಿ ವಿಗ್ರಹಗಳು ನೋಡಲು ಸಿಗುತ್ತವೆ.

ಬೀದರ ಜಿಲ್ಲೆಯಲ್ಲಿ ಪ್ರೇಕ್ಷಣೀಯಸ್ಥಳಗಳಿಗೇನೂ ಕೊರತೆ ಯಿಲ್ಲ. ಇನ್ನೂ ಕೆಲ ಹಳ್ಳಿಗಳಲ್ಲಿ ಅನೇಕ, ಸೌಂದರ್ಯದ ವಿಗ್ರಹ ಗಳು, ಕಲಾವಸ್ತುಗಳು, ಪ್ರಾಚ್ಯ ಅವಶೇಷಗಳು ಸಿಗುತ್ತವೆ. ಕರ್ನಾಟಕ ರಾಜ್ಯಕ್ಕಿತ್ತ ಬೀದರ ಜಿಲ್ಲೆಯ ಕೊಡುಗೆ ಇದು.

ಸಮಾರೋಪ

ಇದು ಬೀದರ ಜಿಲ್ಲೆಯ ಸ್ಥೂಲ ಪರಿಚಯ. ಇಂತಹ ಕಿರಿಯ ಹೊತ್ತಿಗೆಯಲ್ಲಿ ಬೀದರ ಜಿಲ್ಲೆಯ ಭವ್ಯ ಸಂಸ್ಕೃತಿ ಯನ್ನೆಲ್ಲಾ ವಿವರಿಸಿ ಹೇಳುವದು ತೆಕ್ಕೆಗೆ ನಿಲುಕದ ಮಾತು. ಕರ್ನಾಟಕದ ಉಳಿದ ಜಿಲ್ಲೆಗಳಿಗಿಂತ ಈ ಜಿಲ್ಲೆ ವಿಶಿಷ್ಟ ಪೂರ್ಣವಾದುದು. ಇಲ್ಲಿಯ ಭಾಷೆಯೂ ಕೂಡ ಬಹಳ ವಿಚಿತ್ರ. ಮರಾಠಿ–ಉರ್ದು ಮಿಶ್ರಿತವಾದ ಕನ್ನಡ ಈ ಜಿಲ್ಲೆಯಲ್ಲಿ ತನ್ನದೇ ಆದ ರೂಪ ಪಡೆದುಕೊಂಡಿದೆ.

'ವಚನ' ಪ್ರಕಾರ ವಿಶ್ವಸಾಹಿತ್ಯದಲ್ಲಿಯೇ ವೈಶಿಷ್ಟ್ಯಪೂರ್ಣವಾದುದು. ಅಂತಹ ಸಂಪದ್ಭರಿತವಾದ ಶ್ರೇಷ್ಠ ಸಾಹಿತ್ಯವನ್ನು ನೀಡಿದ ಈ ಜಿಲ್ಲೆಗೆ ಅತ್ಯಂತ ಮಹತ್ವದ ಸ್ಥಾನವಿದೆ. ಬೀದರಜಿಲ್ಲೆ ನೀಡಿದ ವಿಶ್ವಕಾಣಿಕೆ ಇದು. ಹನ್ನೆರಡನೆಯ ಶತಮಾನದ ಕ್ರಾಂತಿ ಇತಿಹಾಸದಲ್ಲಿಯೇ ನಿಗಿ ನಿಗಿಸುವ ವಿಷಯ. ಅಂತಹ ಕ್ರಾಂತಿ ಭೂಮಿಯಾದ ಈ ಜಿಲ್ಲೆಯ ಸಂಸ್ಕೃತಿಯೂ ಕೂಡ ವಿಶಿಷ್ಟವಾದುದು. ವಿವಿಧತೆಯಲ್ಲಿ ಏಕತೆಯನ್ನು ಇಲ್ಲಿ ಕಾಣಬಹುದಾಗಿದೆ.

ಕೇವಲ ರಾಜ–ಮಹಾರಾಜರ ಚರಿತ್ರೆಯನ್ನೇ ಹೊಗಳುವ ನಮ್ಮ ಸಾಹಿತ್ಯ, ಪಂಡಿತರ ಸೊತ್ತಾಗಿದ್ದಾಗ ವಚನಕಾರರು ಅದನ್ನು ಪಾಮರರ ಗುಡಿಸಲಿಗೆ ಎಳೆದು ತಂದರು. ಆಗ ಮಾರ್ಗ ದೇಸಿಯಾಯಿತು. ಕ್ಲಿಷ್ಟತೆ ಕಳಚಿ ಸರಳತೆ ಅರಳಿತು.

ದರ್ಪದ ಅರಸರು ಮಾಡುವ ಶೋಷಣೆಯನ್ನು ಮರೆಮುಚ್ಚಿ ಅವರ ಬಾಯತಾಂಬೂಲಕ್ಕಾಗಿ ಅವರ ಕಿರೀಟದ ಮಣಿಮುಕುಟವನ್ನು ಬಣ್ಣಿಸುವ ಮತ್ತು ಆ ರಾಜ–ಮಹಾರಾಜರ ಬಚ್ಚಲುಮನೆಯ ತೂತಿನಲ್ಲಿ ಸೋರುತ್ತಿರುವ ಬುರಗನ್ನೂ ವರ್ಣಿಸುವ ಅತಿರಥ– ಮಹಾರಥ ಕವಿಗಳ ಮಹಾಕಾವ್ಯಗಳೇ ನಮ್ಮಲ್ಲಿ ಹೆಚ್ಚಾಗಿದ್ದಾಗ, ಸಮಾನತೆಗಾಗಿ–ಶೋಷಣೆಯವಿರುದ್ಧ ಬಡವರನ್ನು– ದಲಿತರನ್ನು ಮಧ್ಯಮವರ್ಗದವನ್ನು ವಸ್ತುವಾಗಿಸಿಕೊಂಡು ವಚನ ರಚಿಸಿ, ಜನಸಾಮಾನ್ಯರ ಬದುಕನ್ನು ಸಾಹಿತ್ಯವಾಗಿಸಿದ ಶ್ರೇಷ್ಠಶ್ರೇಯಸ್ಸು ಶರಣರಿಗೆ ಸಲ್ಲುತ್ತದೆ. ಅಂತಹ ಶರಣರೆಲ್ಲರೂ ಒಂದುಗೂಡಿ ಸೇವೆಸಲ್ಲಿಸಿದ ಮತ್ತು ಕ್ರಾಂತಿ ಮಾಡಿದ ಕಾರ್ಯಕ್ಷೇತ್ರ ಈ ಬೀದರ ಜಿಲ್ಲೆ. ಕಲೆಯ ದೃಷ್ಟಿ

ಯಿಂದಲೂ ಇದು ಪ್ರಸಿದ್ಧ. ಕಲ್ಯಾಣ ಚಾಲುಕ್ಯರ ಕಲೆ, ಪರ್ಷಿಯನ್ ಕಲೆ ಮನಮೋಹಕವಾದವುಗಳು.

ಹೀಗೆ ಕಲೆ, ಸಾಹಿತ್ಯ, ಸಂಸ್ಕೃತಿ ಕ್ಷೇತ್ರಗಳಲ್ಲಿ ಕರ್ನಾಟಕದ ಕೆಲವೇ ಕೆಲವು ಜಿಲ್ಲೆಗಳಲ್ಲಿ ಇದೂ ಒಂದು. ಹಿಂದಿನ ನೆನಪನ್ನು ಹೊತ್ತುನಿಂತ ಗುಡಿ ಗೋಪರಗಳು, ಕೋಟೆ–ಕೊತ್ತಲಗಳು, ಗುಹೆ–ಗಹ್ವರಗಳು, ಈ ಜಿಲ್ಲೆಯ ಭವ್ಯ ಸಂಸ್ಕೃತಿಯನ್ನು ಎತ್ತಿ ಸಾರುತ್ತವೆ:

---

kup wd 993–5000–1-5-1983

ಉಪನ್ಯಾಸ ಗ್ರಂಥಮಾಲೆಯ
ಇತ್ತೀಚಿನ ಪ್ರಕಟನೆಗಳು

೧ ಸಾಂಸರ್ಗಿಕ ರೋಗಗಳು ಮತ್ತು ಅವುಗಳನ್ನು ತಡೆಗಟ್ಟುವ ಕ್ರಮಗಳು —ಪಿ. ಎಸ್. ಬಣಕಾರ

೨ ಪ್ರಾಚೀನ ಭಾರತದಲ್ಲಿಯ ವಿದ್ಯಾಕೇಂದ್ರಗಳು —ಅನಂತ ಕುಲಕರ್ಣಿ

೩ ಗಾದೆಗಳಲ್ಲಿ ಆರೋಗ್ಯ —ಪಿ. ಎಸ್. ಶಂಕರ

೪ ಚಟಗಳು ರೂಢಿಗಳು ಮತ್ತು ಕ್ಯಾನ್ಸರ — ಎಸ್. ಜೆ. ನಾಗಲೋಟಿಮಠ

೫ ಸಿಡುಬುರೋಗ —ಬಿ. ಟಿ. ತುಕೋಳ

೬ ರಂಗಭೂಮಿಯ ನಟಸಾರ್ವಭೌಮ ಸಿದ್ರಾಮಪ್ಪ ಹಂದಿಗನೂರ —ಬಿ. ಆರ್. ನಾಡಗೌಡ

೭ ಮೋಕ್ಷಗುಂಡಂ ವಿಶ್ವೇಶ್ವರಯ್ಯ — ಶಿವಕುಮಾರ ಪಾಟೀಲ

೮ ತ್ರಿವೇಣಿಯವರ ಕಾದಂಬರಿಗಳು —ವಿಜಯಶ್ರೀ ಸಬರದ

೯ ದಾಸಸಾಹಿತ್ಯ ಹಾಗೂ ಸಾಮಾಜಿಕ ಮೌಲ್ಯಗಳು —ಇಲ್ಲೂರು ಜಯರಾಮಪ್ಪ

೧೦ ಸರ್ವೋದಯ ಹಾಗೂ ಜನಕಲ್ಯಾಣ —ಎಂ. ಎಸ್. ಬಡಕಲಿ

ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦ ೦೦೩